# ಅಧ್ಯಾಯ - 12

# ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಇಂದಿನ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ, ಕಾರ್ಯನಿರ್ವಹಣೆ ಮತ್ತು ಹೊಣೆಗಾರಿಕೆಗಳ ವಿಕೇಂದ್ರಿಕರಣ ಹಿಂದೆಂದಿಗಿಂತಲೂ ಇಂದು ಹೆಚ್ಚು ಅನಿವಾರ್ಯ ಮತ್ತು ಪ್ರಸ್ತುತವಾಗಿದೆ. ಭೌಗೋಳಿಕವಾಗಿ ಸೀಮಿತವಾದ ಯಾವುದಾದರೂ ಹಳ್ಳಿ, ಊರು, ಪಟ್ಟಣ, ಸಮುದಾಯ ಇವುಗಳ ನಾಗರಿಕ ಆಡಳಿತವನ್ನು ಸ್ಥಳೀಯ ನಿವಾಸಿಗಳನ್ನೊಳಗೊಂಡ ಶಾಸನಬದ್ಧ ಸ್ವಯಮಾಧಿಕಾರ ಹೊಂದಿದ್ದ ಪ್ರಾತಿನಿಧಿಕ ಸಂಸ್ಥೆಯನ್ನು ಸ್ಥಳೀಯ ಆಡಳಿತ ಸಂಸ್ಥೆ\ಸರ್ಕಾರ ಎಂದು ಪರಿಗಣಿಸಲಾಗುವುದು. ಈ ಸಂಸ್ಥೆಗಳ ಮೂಲ ಉದ್ದೇಶ ಆಯಾ ಪ್ರದೇಶದ ನಾಗರಿಕರಿಗೆ ಅತ್ಯಾವಶ್ಯಕವಾದ ನಾಗರಿಕ ಸೌಲಭ್ಯಗಳನ್ನು ಒದಗಿಸಿ ಕೊಡುವುದು, ಈ ಕಾರ್ಯಗಳಲ್ಲಿ ತಾವು ಪಾಲ್ಗೊಳ್ಳುವರೆಂಬ ಭಾವನೆಯನ್ನು ನಾಗರಿಕರಲ್ಲಿ ಮೂಡಿಸುವುದು.

ಕರ್ನಾಟಕವೂ ಒಳಗೊಂಡಂತೆ ಪ್ರಾಚೀನ ಭಾರತದಲ್ಲಿ ನಿರಂಕುಶ ಪ್ರಭುತ್ವದಿಂದೊಡಗೂಡಿದ್ದ, ಕೇಂದ್ರೀಕೃತ ಸಾರ್ವಭೌಮ ಆಡಳಿತ ವ್ಯವಸ್ಥೆ ಇದ್ದ ಕಾಲದಲ್ಲಿಯೂ ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆಗೆ ಸಾಕಷ್ಟು ಅವಕಾಶ ಮತ್ತು ಮಾನ್ಯತೆ ಇತ್ತು. ಹಳ್ಳಿಗಳು ಒಂದು ಸೀಮಿತ ಸ್ವರೂಪದಲ್ಲಿ ಪುಟ್ಟ, ಪುಟ್ಟ, ಗಣರಾಜ್ಯ (ರಿಪಬ್ಲಿಕ್ಸ್)ಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಪ್ರತಿ ಒಂದು ಊರಿನ, ಹಳ್ಳಿಯ, ನಗರದ, ಕೇರಿಯ, ಅಗ್ರಹಾರದ ಮುಖ್ಯಸ್ಥರ ಸಭೆಯಲ್ಲಿ ಸ್ಥಳೀಯ ಪ್ರಮುಖ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಸ್ಯೆಗಳನ್ನು ಚರ್ಚಿಸಲಾಗುತ್ತಿತ್ತು. ಈ ಸಭೆಗಳು ಗ್ರಾಮಸಮುದಾಯದ, ಜನಪದದ, ಸಮಷ್ಠಿಯ ಸಹಬಾಳ್ವೆಯ ಪ್ರತೀಕವಾಗಿದ್ದವು. ಇಂತಹ ಪಾರಂಪರಿಕ, ರೂಢಿಗತ ಸಭೆಗಳ ಹಕ್ಕುಭಾದ್ಯತೆಗಳನ್ನು ಸರ್ಕಾರ ಗೌರವಿಸುತ್ತಿತ್ತು. ಈ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಮೂಡಿಬಂದ ಸಂಸ್ಥೆಗಳಾಗಿದ್ದವು. ಇವುಗಳು ಸಾಕಷ್ಟು ಸ್ವಾಯತ್ತತೆ ಹೊಂದಿದ ಸ್ವಾವಲಂಬಿ ಸಂಸ್ಥೆಗಳಾಗಿದ್ದವು. ಗ್ರಾಮೀಣ ಆಡಳಿತ ವ್ಯವಸ್ಥೆಯ ಈ ಸಂಪ್ರದಾಯ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯನ್ನು ಒಳಗೊಂಡಂತೆ ತುಂಬಾ ವ್ಯಾಪಕ ಮತ್ತು ಪರಿಣಾಮಕಾರಿಯಾಗಿತ್ತು ಎಂದು ಸಮಕಾಲೀನ ಶಾಸನಗಳಿಂದ ಮತ್ತು ಇತರೇ ದಾಖಲೆಗಳಿಂದ ತಿಳಿದು ಬರುವುದು. ಪಂಚಾಯತಿರಾಜ್ಯ ವ್ಯವಸ್ಥೆ ಇಂದು ನಿನ್ನೆಯದಲ್ಲ, ಅದಕ್ಕೆ ಸುಮಾರು 4,000 ವರ್ಷಗಳ ಸುದೀರ್ಘ ಪರಂಪರೆ ಉಂಟು. ವೇದಗಳ ಕಾಲದಿಂದಲೂ ಗ್ರಾಮಗಳ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳನ್ನು ಕುರಿತಂತೆ ಮಾಹಿತಿಯು ದೊರೆಯುವುದು. ಇತಿಹಾಸದ ಉದ್ದಕ್ಕೂ ಈ ಸಂಸ್ಥೆಗಳ ರಚನೆ, ಕಾರ್ಯವಿಧಾನ ಮುಂತಾದವುಗಳಲ್ಲಿ ಕೆಲವೊಂದು ಬದಲಾವಣೆಗಳು ಆಗಿದ್ದರೂ ಈ ಸಂಸ್ಥೆಗಳು ಪ್ರಾಚೀನ ಕಾಲದಿಂದಲೂ ಬ್ರಿಟಿಷರ ಆಡಳಿತದ ಪ್ರಾರಂಭದ ಕಾಲದವರೆಗೂ ಅವ್ಯಾಹತವಾಗಿ ನಡೆದುಕೊಂಡು ಬಂದಿರುವವು. ಈ ಗ್ರಾಮಸಭೆಗಳು ವಿಜಯನಗರದ ಕಾಲದವರೆಗೂ ತುಂಬಾ ಉನ್ನತಮಟ್ಟದಲ್ಲಿ ಇದ್ದುವಲ್ಲದೇ ಮುಸ್ಲೀಮರ ಆಳ್ವಿಕೆಯ ಕಾಲದಲ್ಲಿಯೂ ಮುಂದುವರೆದವು. ವಿಶೇಷವಾಗಿ ಮೊಗಲರ ಕಾಲದಲ್ಲಿ ಜಹಗಿರು ನೀಡುವ ಪದ್ಧತಿ ರೂಡಿಯಲ್ಲಿ ಬಂದುದರಿಂದ ಜಹಗೀರದಾರರು

ಮತ್ತು ಇತರೇ ಜಮೀನುದಾರರು ಗ್ರಾಮಪಂಚಾಯತಿಯ ಮತ್ತು ಸಮಾಜದ ಪ್ರಮುಖ ವಿಷಯಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡದ್ದರಿಂದ ಪಂಚಾಯತಿಗಳು ತಮ್ಮ ಹಿಂದಿನ ಸ್ವಾತಂತ್ರ ಮತ್ತು ಅಸ್ತಿತ್ವವನ್ನು ಕಳೆದುಕೊಂಡವು. ಆದರೂ ಜಾತಿಗಳ ಪ್ರತಿನಿಧಿಗಳಿರುವ ಬಾರಾಬಲೂತಿ ಅಥವಾ 12 ಆಯಗಾರರ ಸಭೆಗಳನ್ನು ನಡೆಸಿದ ಆದಿಲ್‌ಷಾಹಿ ಕಾಲದ ಉದಾಹರಣೆಗಳು ಸಿಗುತ್ತವೆ. ಬ್ರಿಟಿಷರ ಆಡಳಿತದ ಅವಧಿಯಲ್ಲಿ 1870 ರಲ್ಲಿ ಲಾರ್ಡ ಮೆಯೋ ಅವರ ಕಾಲದಲ್ಲಿ ಇಂದು ರೂಢಿಯಲ್ಲಿರುವ ಆಧುನಿಕ ಪಂಚಾಯತಿರಾಜ್ ಪರಿಕಲ್ಪನೆಯ ಬೀಜಾಂಕುರವಾಯಿತು. ನಂತರ 1882 ರಲ್ಲಿ ಲಾರ್ಡ ರಿಪ್ಪನ್ ಕಾಲದಲ್ಲಿ ಮೊದಲ ಬಾರಿಗೆ ಕಾನೂನುಬದ್ಧ ಜಿಲ್ಲಾ ಬೋರ್ಡುಗಳು ಜಾರಿಯಲ್ಲಿ ಬಂದವು.

## ಪ್ರಾಚೀನ ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳು

ಶಾಸನಗಳಲ್ಲಿ ಗ್ರಾಮೀಣ ಹಂತದ ಸ್ಥಳೀಯ ಸಂಸ್ಥೆಗಳನ್ನು ಊರು, ಒಕ್ಕಲು, (ನಿವಾಸಿಗಳು), 'ಪ್ರಜೆ' (ನಾಗರಿಕರು), 'ಪ್ರಜೆ ಸಮುದಾಯ', 'ಸಮುದಾಯ', 'ಸಮಸ್ತರು', ಊರ ಹದಿನೆಂಟು ಜಾತಿ, ಎಂದು ಮುಂತಾಗಿ ಹೆಸರಿಸಲಾಗಿದೆ. ಅದರಂತೆ ಪಟ್ಟಣಗಳ ಸ್ಥಳೀಯ ಸಂಸ್ಥೆಗಳನ್ನು 'ನಗರ', 'ಹಲರು' (ಈ ಎರಡು ಮುಖ್ಯವಾಗಿ ವ್ಯಾಪಾರಗಳಿಗೆ ಪ್ರಾಧಾನ್ಯವಿದ್ದ ಊರುಗಳಲ್ಲಿ) ಎನ್ನುತ್ತಿದ್ದರು. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇರುತ್ತಿತ್ತು. ಇದಲ್ಲದೆ 'ಪುರ', 'ಹಿಟ್ಟು', 'ಊರ ಸಮಸ್ತರು' ಎಂದೂ ಇವನ್ನು ಕರೆದಿದೆ. ಕೆಲವೊಮ್ಮೆ ಗ್ರಾಮಸಭೆಯನ್ನು ಐವತ್ತೊಕ್ಕಲು, ಮೂವತ್ತೊಕ್ಕಲು ಎಂಬ ಸಂಖ್ಯಾ ವಾಚಕದಿಂದ ಕರೆಯಲಾಗುತ್ತಿತ್ತು. ಈ ಸಂಖ್ಯೆಯು ಸ್ಥಳದ ಮೂಲ ನಿವಾಸಿಗಳ ಕುಟುಂಬಗಳ ಸಂಖ್ಯೆಯನ್ನು ಸೂಚಿಸುವುದು. ಕರ್ನಾಟಕದ ಶಾಸನಗಳಲ್ಲಿ ಗ್ರಾಮ ಸಭೆಯನ್ನು ಕುರಿತಂತೆ ಮೊದಲನೆಯ ಉಲ್ಲೇಖವು ಚಾಲುಕ್ಯ ವಿಕ್ರಮಾದಿತ್ಯನ ಕಾಲದ ಲಕ್ಷ್ಮೇಶ್ವರದ ಕ್ರಿ.ಶ.725 ರ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಈ ಶಾಸನದಲ್ಲಿ 'ನಗರ', 'ಮಹಾಜನ, 'ಒಕ್ಕಲು' ಇವುಗಳ ಉಲ್ಲೇಖ ಬರುವುದು. ಹಿರಿಯ ಕುರಿಹಟ್ಟಿಯ ಐವತ್ತೊಕ್ಕಲು (ಅರೆ ಕುರಹಟ್ಟಿ, 1154), ಗಳಿಗಿಯ ಅರುವತ್ತೊಕ್ಕಲು (ಕಲಘಟಗಿ ತಾ॥ ಘಳಿಗಿ, 1202), ನೀರಲಗಿಯ ಆರುವತ್ತೊಕ್ಕಲು (ಹಾನಗಲ್ ತಾ: ನೀರಲಗಿ, 8 ನೇ ಶತಮಾನ; ಅದೇ ಕಾಲಕ್ಕೆ ಅಲ್ಲಿನ ಅಗ್ರಹಾರದ 300 ಮಹಾಜನರೂ ಇದ್ದರು), ನೂಲ್ವಿಯ ಅರುವತ್ತು ಒಕ್ಕಲು ಮಕ್ಕಳು (1237), ಯರಗುಪ್ಪಿಯ 60 ಒಕ್ಕಲಾದಿಗಳು (11 ನೇ ಶತಮಾನ), ಗುಡಗುಡಿ (ಹಾನಗಲ್ ತಾ:)ಯ ಅರುವತ್ತೊಕ್ಕಲು (12 ನೇ ಶತಮಾನ), ಕೊಡಮಗ್ಗಿಯ ಅರುವತ್ತೊಕ್ಕಲು (ಹಿರೇಕೆರೂ ತಾ:, 12 ನೇಯ ಶತಮಾನ) ಹೀಗೆ ಗ್ರಾಮಗಳ ವ್ಯವಸ್ಥೆಯ ಉಲ್ಲೇಖ ಶಾಸನಗಳಲ್ಲಿ ಇದೆ. ನೀರಲಗಿಯ ಅರ್ವತ್ತೊಕ್ಕಲು, 300 ಮಹಾಜನರು ಎಂದಾಗ ಈ 60 ಜನ ರೈತರೆಂದೂ, ಎಲ್ಲೆಡೆ ರೈತರನ್ನೇ 'ಒಕ್ಕಲು' ಎಂದು ಉಲ್ಲೇಖಿಸಿದೆಯೆಂದು ಭಾವಿಸಬಹುದು. ಗದಗ ತಾಲೂಕಿನ ಸೊರಟೂರಿನ ಕ್ರಿ.ಶ. 867-868 ರ ಶಾಸನದಲ್ಲಿ ಬರುವ 'ಮಹಾಜನ', 'ಗಾಮುಂಡ' (ಗೌಂಡ), 'ಪ್ರಜೆ' ಇವು ಗ್ರಾಮಸಭೆಯನ್ನು ಕುರಿತು ವಿವರಿಸುವ ಅತಿ ಹಳೆಯ ಉಲ್ಲೇಖಗಳು. ಈ ಜಿಲ್ಲೆಯ ಲಕ್ಷ್ಮೇಶ್ವರ, ಆಡೂರು, ಹಾನಗಲ್ಲ ಶಾಸನಗಳಲ್ಲಿ ಸಹ ಗೌಂಡ ಪದದ ಉಲ್ಲೇಖ ದೊರೆಯುವುದು.

ಲಕ್ಷ್ಮೇಶ್ವರದ ಕ್ರಿ.ಶ. 725 ರ ಶಾಸನದಲ್ಲಿ 'ಅಷ್ಟಾದಶ ಪ್ರಕೃತಿ' (18 ಜಾತಿಗಳು)ಗಳ ಉಲ್ಲೇಖ ದೊರೆಯುವುದು. ಆಯಾ ಸ್ಥಳದ ಎಲ್ಲಾ ಜಾತಿಗಳ, ಕುಟುಂಬಗಳ ಹಿರಿಯರು, ಮುಖ್ಯಸ್ಥರು ಆಗಾಗ ಸಭೆ ಸೇರಿ ಪ್ರಮುಖ ಸಾರ್ವಜನಿಕ ವಿಷಯಗಳನ್ನು ಚರ್ಚಿಸುವುದು, ನಿರ್ಣಯಿಸುವುದು ಸಾಮಾನ್ಯವಾಗಿತ್ತು.

ಪ್ರಮುಖ ಪಟ್ಟಣಗಳಲ್ಲಿ ಅನೇಕ ವಿಭಾಗ, ಕೇರಿ, ಬಲ (ವಾರ್ಡ)ಗಳಿದ್ದು ಕೇರಿಗಳ ಪ್ರತಿನಿಧಿಗಳು ಸಭೆ ಸೇರುತ್ತಿದ್ದರು. ಮುಳಗುಂದ ಶಾಸನದ ಅನ್ವಯ 300 ಸೆಟ್ಟಿಗಳು (ವರ್ತಕರು), 52 ಮಾಲೆಕಾರರು, 50 ನೇಕಾರರು, 120 ತೆಲ್ಲಿಗರು ಅಲ್ಲಿಯ ಐದು ಮಠಗಳ (ಪಂಚಮಠ) ಪ್ರತಿನಿಧಿಗಳು ಮತ್ತು ಬ್ರಹ್ಮಪುರಿಯ ಒಂದು ಸಾವಿರ ಮಹಾಜನರು ಊರಿನ ಆಡಳಿತ ವ್ಯವಸ್ಥೆಯ ಸದಸ್ಯರಾಗಿದ್ದರು. ಅದರಂತೆ ಸೂಡಿಯ ಶಾಸನವು ಸ್ಥಳೀಯ ಪುರಸಭೆಯು 80 ಜನ ಸೆಟ್ಟಿಗಳು (ವರ್ತಕರು) ಮತ್ತು 80 ಒಕ್ಕಲು ಮನೆತನಗಳನ್ನು ಹೊಂದಿದ್ದಾಗಿ ವಿವರಿಸುವುದು. ಈ ರೀತಿ ನಗರ ಸಭೆಗಳು ಸಮಾಜದ ಎಲ್ಲಾ ವರ್ಗಗಳ ಜನರನ್ನು ಪ್ರತಿನಿಧಿಸುವ ಸಭೆಗಳಾಗಿದ್ದವು.

### ನಾಡು ಮತ್ತು ಮಹಾನಾಡು

ಹಲವಾರು ಹಳ್ಳಿಗಳ ಸಮುದಾಯ ಅಥವಾ ಗುಂಪಿಗೆ ಭಾಗ, ಕಂಪನ, ನಾಡು, ಸ್ಥಳ, ಸ್ಥಾನ, ವೆಂಟೆ, ಮುಂತಾಗಿ ಹೆಸರಿಸಲಾಗಿದೆ. ಹತ್ತನೇಯ ಶತಮಾನದ ಮಧ್ಯದ ಅವಧಿಯಿಂದ 'ನಾಡು' ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಿದ ಉಲ್ಲೇಖ

ದೊರೆಯುವುದು. ನಾಡಿನ ಅಧಿಕಾರಿಯನ್ನು, ಮುಖ್ಯಸ್ಥನನ್ನು ಗೌಂಡ, ಪ್ರಭು, ನಾಡಗೌಡ, ಪೆರ್ಗಡೆ ಮುಂತಾಗಿ ಹೆಸರಿನಿಂದ ಕರೆಯುತ್ತಿದ್ದರು. ಈ ಹೊಸ ಆಡಳಿತ ವ್ಯವಸ್ಥೆ ಅನೇಕ ಹಳ್ಳಿಗಳ ಒಕ್ಕೂಟವಾಗಿತ್ತು. ಅದರ ಸಭೆಯನ್ನು 'ನಾಡಸಭೆ' ಎಂದು ಕರೆಯಲಾಯಿತು. ಈ ಸಭೆಗಳನ್ನು ಇಂದಿನ ಮಂಡಳ ಪಂಚಾಯತಿಗಳಿಗೆ ಹೋಲಿಸಬಹುದು.

ನಾಡಗೌಡ ಹುದ್ದೆಯು ಆನುವಂಶಿಕ ಮತ್ತು ಕೆಲವು ಸಂದರ್ಭಗಳಲ್ಲಿ ಆಯ್ಕೆ ನಡೆಯುತ್ತಿತ್ತು. ಅಧಿಕಾರೇತರರಲ್ಲದೇ ಅಧಿಕಾರಿಗಳೂ ನಾಡಸಭೆಯ ಪ್ರಮುಖರಾಗಿದ್ದ ಬಗ್ಗೆ ಬೆನಕನಕೊಂಡದ (ರಾಣೆಬೆನ್ನೂರು ತಾ ॥) ಕ್ರಿ.ಶ. 1033 ರ ಶಾಸನವು ವಿವರಿಸುವುದು. ಸೂಡಿಯ ಕ್ರಿ.ಶ. 1051 ರ ಶಾಸನವು ನಾಡಿನ ಪ್ರತ್ಯೇಕ ಆಡಳಿತಾಧಿಕಾರಿಯನ್ನು ಸೂಚಿಸುವುದು; ಅಲ್ಲದೇ ಸ್ಥಳೀಯ ದೇವಾಲಯಕ್ಕೆ ಭೂಮಿಯನ್ನು ದಾನ ಕೊಟ್ಟ ಬಗ್ಗೆ ಸಾಕ್ಷಿಯಾಗಿರುವುದು. ಗದಗ ತಾಲೂಕಿನ ಹೊಸೂರಿನ ಶಾಸನವು ನಾಡಿನ ಲೆಕ್ಕ ನೋಡಲು 'ನಾಡಶಾನುಭೋಗ'ರನ್ನು ಕುರಿತು ಉಲ್ಲೇಖಿಸುವುದು. ಇವರನ್ನು ನಾಡಸಭೆಯು ಆಯ್ಕೆ ಮಾಡುತ್ತಿತ್ತು ಎಂದು ತಿಳಿದು ಬರುವುದು. ಅನೇಕ ಹಳ್ಳಿಗಳ ಸಮುದಾಯವಾಗಿದ್ದ ನಾಡು ಆಗಾಗ ಸಭೆ ಸೇರುತ್ತಿತ್ತು. ಇದು ಎಲ್ಲಾ ಬಗೆಯ ಜನರನ್ನು ಒಳಗೊಂಡ ಸಭೆ ಆಗಿರುತ್ತಿತ್ತು. ನಾಡ ಸಭೆಯ ಪ್ರಮುಖ ಕರ್ತವ್ಯಗಳಲ್ಲಿ ನೀರಾವರಿ ಸೌಲಭ್ಯ ಒದಗಿಸುವುದು, ನ್ಯಾಯ ನಿರ್ಣಯ ಕೊಡುವುದು, ಇತರೇ ಸಾಮೂಹಿಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಪ್ರಮುಖವಾಗಿದ್ದವು.

ಗ್ರಾಮ ಸಭೆಯ ಇತರೇ ಕರ್ತವ್ಯಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಹಬ್ಬ-ಹರಿದಿನ, ಜಾತ್ರೆಗಳ ಆಚರಣೆ, ಛತ್ರ ಮತ್ತು ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳನ್ನು ನಿರ್ವಹಿಸುವುದು, ಪ್ರಶಂಸನೀಯ ಸೇವೆಗೆ ಸನ್ಮಾನ, ವೀರಗಲ್ಲು, ಮಹಾಸತಿ ಕಲ್ಲುಗಳನ್ನು ನಿಲ್ಲಿಸುವುದು, ದೇವಾಲಯ ಮತ್ತು ಸಮಾಜದ ಭೂಮಿಯ ರಕ್ಷಣೆ ಮತ್ತು ನಿರ್ವಹಣೆ, ಭೂ ಬಿಕ್ಕಟ್ಟುಗಳನ್ನು ಪರಿಹರಿಸುವುದು, ಸಂತ್ರಸ್ತರಿಗೆ ಪರಿಹಾರ ಒದಗಿಸುವುದು, ಸಾರ್ವಜನಿಕರಿಂದ ಠೇವಣಿಯಾಗಿ ಹಣ ಮತ್ತು ಭೂಮಿಯನ್ನು ಸ್ವೀಕರಿಸಿ ಅದರ ಬಡ್ಡಿಯಿಂದ ಬರುವ ಹಣದಲ್ಲಿ ದೇವಾಲಯಗಳಲ್ಲಿ ನಂದಾದೀಪ, ಅಗ್ಗಿಷ್ಟಿಕೆ ಮತ್ತು ಇತರ ಸೇವೆಗಳನ್ನು ಏರ್ಪಡಿಸುವುದು ಮುಂತಾದುವುಗಳು ಸೇರಿದ್ದವು.

ನಾಡಸಭೆ ಮತ್ತು ಪಟ್ಟಣಗಳ ಸಭೆಯಾದ 'ನಗರಸಭೆ', 'ನಗರ' ಅಥವಾ ನಗರದ ವ್ಯಾಪಾರಿ ಸಂಸ್ಥೆಗಳ ನಡುವೆ ಮಧುರ ಭಾವನೆ, ಹೊಂದಾಣಿಕೆಯು ಕಂಡು ಬರುತ್ತಿತ್ತು. ಒಂದು ಸಭೆಯು ಇನ್ನೊಂದು ಸಭೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಶಾಸನಗಳ ಉಲ್ಲೇಖ ದೊರೆಯುವುದು. ಧರ್ಮಪೊಳಲಿನ (ಡಂಬಳ) ಕ್ರಿ.ಶ. 1288 ರ ಶಾಸನವು ನಾಡಿನ 8 ಪ್ರತಿನಿಧಿಗಳು, ನಗರದ 16 ಪ್ರತಿನಿಧಿಗಳು ಒಟ್ಟಾಗಿ ಸೇರಿ ನಗರದ ಜಿನಾಲಯಕ್ಕೆ ಸುಂಕದ (ಜಕಾತಿ) ಆದಾಯವನ್ನು ದಾನವಾಗಿ ನೀಡಿದ ಮಾಹಿತಿಯು ದೊರೆಯುವುದು.

**ಮಹಾನಾಡು**

ಹಲವಾರು ನಾಡುಗಳು ಹಾಗೂ ನಗರ ಪ್ರದೇಶಗಳನ್ನು ಒಳಗೊಂಡ ವಿಸ್ತೃತವಾದ ಸ್ಥಳೀಯ ಸಂಸ್ಥೆಯನ್ನು 'ಮಹಾನಾಡು' ಎಂದು ಕರೆಯಲಾಗುತ್ತಿತ್ತು. ಅನೇಕ ನಾಡುಗಳು ಸೇರಿ 'ಮಹಾನಾಡು' ಎಂಬ ಒಕ್ಕೂಟ ಸಂಸ್ಥೆಗಳು ರೂಢಿಯಲ್ಲಿ ಇದ್ದುದಾಗಿ ಈ ಜಿಲ್ಲೆಯ ಕೆಲವು ಶಾಸನಗಳಿಂದ ತಿಳಿದು ಬರುವುದು. ಉದಾ: ಪದಿನಾಡು (ಹತ್ತು ನಾಡುಗಳ ಒಕ್ಕೂಟ) ಮತ್ತು ಪದಿನಾಲ್ಕು ನಾಡು (ಹದಿನಾಲ್ಕು ನಾಡು). ಈ ಮಹಾನಾಡುಗಳು ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಡುವೆ ಸಮನ್ವಯಾಧಿಕಾರಿಯಂತೆ ಕಾರ್ಯ ನಿರ್ವಹಿಸುತ್ತಿದ್ದವು. ಈ ಸಂಸ್ಥೆಗಳು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳ ಮೇಲೆ ತಮ್ಮದೇ ಆದ ಪ್ರಭಾವ ಬೀರಿ, ಸ್ಥಳೀಯವಾಗಿ ಉಪಯುಕ್ತವಾಗುವ ಕಾನೂನುಗಳನ್ನು ರೂಪಿಸಿಕೊಳ್ಳುವಲ್ಲಿ ಪ್ರಭಾವಶಾಲಿಗಳಾಗಿದ್ದವು. ಮಹಾನಾಡುಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ನೀರಾವರಿ ಸೌಲಭ್ಯ, ನ್ಯಾಯವ್ಯವಸ್ಥೆ, ತೆರಿಗೆ ವಿಧಿಸುವುದು, ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಮಾಧಿಕಾರ ಮತ್ತು ಸ್ವಾವಲಂಬನೆಯನ್ನು ಹೊಂದಿದ್ದವು. ಈ ಸಂಸ್ಥೆಗಳಿಗೆ ಸರ್ಕಾರ ಸಾಕಷ್ಟು ಸ್ವಾಯತ್ತತೆಯನ್ನು ನೀಡಿತ್ತು. ಇವುಗಳ ನಡುವೆ ಪರಸ್ಪರ ವಿವಾದ ಉಂಟಾದಾಗ ಮಾತ್ರ ಸರ್ಕಾರ ಮಧ್ಯ ಪ್ರವೇಶ ಮಾಡುತ್ತಿತ್ತು. ಈ ಸಭೆಯ ಬಗ್ಗೆ ಅಂದರೆ ಕಾರ್ಯವ್ಯಾಪ್ತಿ, ಸದಸ್ಯತ್ವ, ಕಾರ್ಯವಿಧಾನ ಮುಂತಾದವುಗಳ ಬಗ್ಗೆ ಯಾವುದೂ ಖಚಿತವಾಗಿರಲಿಲ್ಲ. ಈ ಸಭೆಗೆ ಆಡಳಿತ ಹೊಣೆಗಾರಿಕೆಯ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರದ ಪ್ರತಿನಿಧಿಗಳು, ವೃತ್ತಿಪರ ಸಂಘಟನೆಗಳ ಪ್ರತಿನಿಧಿಗಳು, ಸಭೆ ನಡೆಯುವ ಸ್ಥಳದ ಮತ್ತು ಸುತ್ತಮುತ್ತಲಿನ ಪ್ರದೇಶದ ಜನರು, ಆ ಭಾಗದ ಸರ್ಕಾರಿ ಅಧಿಕಾರಿಗಳು

ಇವರಿಂದ ತುಂಬಿರುತ್ತಿತ್ತು. ಸಂಚಾರ ಸೌಲಭ್ಯದ ಕೊರತೆಯಿಂದ ಮಹಾನಾಡಿನ ಸಭೆಗಳು ಸಾಮಾನ್ಯವಾಗಿ ಜಾತ್ರೆಯ ಸಮಯದಲ್ಲಿ, ವಿಶೇಷ ಸಂದರ್ಭಗಳಲ್ಲಿ ಸೇರುತ್ತಿದ್ದವು. ಇವುಗಳ ಕರ್ತವ್ಯಗಳು ಸೀಮಿತವಾಗಿದ್ದು ವ್ಯಾಪಾರಿಸಂಸ್ಥೆಗಳ ಹಿತಾಸಕ್ತಿಗೆ ಪೂರಕವಾಗಿದ್ದವು. ವ್ಯಾಪಾರಿ ಸಂಸ್ಥೆಗಳನ್ನು ಒಳಗೊಳ್ಳದ ಮಹಾನಾಡುಗಳೇ ಇರಲಿಲ್ಲ ಎಂದು ಕಂಡು ಬರುವುದು. ಆದರೆ ಹಾನಗಲ್ಲಿನ ಕ್ರಿ.ಶ. 1152 ರ ಒಂದು ದಾನ ಶಾಸನವು ಮಹಾನಾಡನ್ನು ಉಲ್ಲೇಖಿಸುತ್ತದೆ. ಆದರೆ ಅದರಲ್ಲಿ ಯಾವುದೇ ವ್ಯಾಪಾರಿ ಸಂಘಟನೆಗಳ ಪ್ರಸ್ತಾಪ ಬರುವುದಿಲ್ಲ. ಮೇವುಂಡಿಯ ಕ್ರಿ.ಶ. 1178 ರ ಶಾಸನವು ಮಹಾನಾಡನ್ನು ಉಲ್ಲೇಖಿಸುವುದು.

**ಅಗ್ರಹಾರಗಳು**

ಅಗ್ರಹಾರಗಳ ಆಡಳಿತವನ್ನು ಸ್ಥಳೀಯ ಬ್ರಾಹ್ಮಣ ಮುಖಂಡರು 'ಮಹಾಜನರು' ನೋಡಿಕೊಳ್ಳುತ್ತಿದ್ದರು. 'ಊರೊಡೆಯ' ಪ್ರಮುಖ ಅಧಿಕಾರಿಯಾಗಿದ್ದನು. ಗ್ರಾಮದ ಗೌಡನ ಅಧಿಕಾರವನ್ನು ಅಗ್ರಹಾರದಲ್ಲಿ ಊರೊಡೆಯನು ಹೊಂದಿದ್ದನು. ಕರ್ನಾಟಕದ ಶಾಸನಗಳಲ್ಲಿ ಆರನೇಯ ಶತಮಾನದಿಂದ ಅಗ್ರಹಾರಗಳ ಉಲ್ಲೇಖವನ್ನು ಕಾಣಬಹುದು. ಈ ಜಿಲ್ಲೆಯ ಅಗ್ರಹಾರಗಳಲ್ಲಿ ದಂಡಾಪುರ, ಕುರ್ತಕೋಟಿ, ಬೆಳವಣಿಕೆ, ಲೊಕ್ಕಿಗುಂಡಿ, ಪುಲಿಗೆರೆ, ರೋಣ, ಹದಲಿ ಮುಂತಾದವುಗಳ ಉಲ್ಲೇಖವನ್ನು ಶಾಸನಗಳಲ್ಲಿ ಕಾಣಬಹುದು. (ವಿವರಣೆಗೆ ಅಧ್ಯಾಯ 13 ನೋಡುವುದು).

ಕುರ್ತಕೋಟೆ ಮತ್ತು ಉಮಚಗಿಯ ಶಾಸನಗಳು ಅಗ್ರಹಾರಗಳ ಮಹಾಜನರು ನ್ಯಾಯಾಧಿಕರಣ ದತ್ತವಾದ ಅಧಿಕಾರದಿಂದ ಸಂಗ್ರಹಿಸಿದ ದಂಡದ ಹಣವನ್ನು ಸ್ಥಳೀಯ ನೀರಾವರಿ ಮತ್ತು ಧಾರ್ಮಿಕ ಕೆಲಸಗಳಿಗೆ ವಿನಿಯೋಗಿಸಲು ನೀಡಿದ್ದಾಗಿ ತಿಳಿದುಬರುವುದು. ಮಹಾಜನರು ಸ್ಥಳೀಯವಾಗಿ ಬೀಡು ಬಿಟ್ಟ ಸರ್ಕಾರದ ಸೈನ್ಯದ ಮೇಲೆಯೂ ಸಹ ತಮ್ಮ ನಿಯಂತ್ರಣ ಹೊಂದಿದ್ದರು ಎಂಬುದನ್ನು ಹಾನಗಲ್ಲ ತಾಲೂಕಿನ ತಿಳವಳ್ಳಿಯ ಒಂದು ಶಾಸನವು ವಿವರಿಸುವುದು.

ಅಗ್ರಹಾರಗಳ ಮಹಾಜನರ ಸಂಖ್ಯೆ ಬಹುತೇಕ ಸಂದರ್ಭಗಳಲ್ಲಿ ಹಲವಾರು ಶತಮಾನಗಳವರೆಗೆ ಒಂದೇ ಆಗಿರುತ್ತಿತ್ತು ಎಂದು ಕಂಡುಬರುವುದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸರಟಾಪುರ (ಸೊರಟೂರು) ಅಗ್ರಹಾರದ ಮಹಾಜನರ ಸಂಖ್ಯೆ ಪ್ರಾರಂಭದಲ್ಲಿ 50 ಇದ್ದದ್ದು ನಂತರದ ಶತಮಾನದಲ್ಲಿ 200 ಆದದ್ದು ಕಂಡು ಬರುವುದು. ಆದರಂತೆ, ನೀಲಗುಂದ (ಗದಗ ತಾ।) ಅಗ್ರಹಾರದ 'ಮಹಾಜನರ' ಸಂಖ್ಯೆ ಪ್ರಾರಂಭದಲ್ಲಿ 300 ಇದ್ದು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಮೂಲ ಅಗ್ರಹಾರಕ್ಕೆ 'ಕೃಷ್ಣಪಲ್ಲಿಕಾ' ಸೇರ್ಪಡೆ ಆಗಿದ್ದರಿಂದ ಮಹಾ ಜನರ ಸಂಖ್ಯೆ 500 ಕ್ಕೆ ಏರಿತು ಎಂದು ತಿಳಿದು ಬರುವುದು.

ದಾನವನ್ನು ಸ್ವೀಕರಿಸಿದವರು, ಪಡೆದವರು, ಸಾಮಾನ್ಯವಾಗಿ ಅಗ್ರಹಾರದ ಮಹಾಜನರಾಗುತ್ತಿದ್ದರು ಎಂದು ಹದಲಿಯ ಕ್ರಿ.ಶ.1084-85 ರ ಶಾಸನದಿಂದ ತಿಳಿದು ಬರುವುದು. ಈ ಕಾರಣಗಳಿಂದ ಹಲವು ಸಂದರ್ಭಗಳಲ್ಲಿ ಅಗ್ರಹಾರದ 'ಮಹಾಜನರ' ಸಂಖ್ಯೆ ಹೆಚ್ಚಿರುವ ಸಾಧ್ಯತೆ ಉಂಟು. ಅಗ್ರಹಾರಗಳ ಸಭೆಗಳು ಸಾಮಾನ್ಯವಾಗಿ ಅರಸರ ಆಜ್ಞೆಯ ಮೇರೆಗೆ, ಸ್ವಯಂ ಪ್ರೇರಣೆಯಿಂದ ಮತ್ತು ವಿವಾದಕ್ಕೆ ಒಳಗಾದ ಪಕ್ಷಗಳ ಕೋರಿಕೆಯ ಮೇರೆಗೆ ನಡೆಯುತ್ತಿದ್ದವು. ಲೊಕ್ಕಿ ಗುಂಡಿಯ ಕ್ರಿ.ಶ. 1053 ರ ಶಾಸನವು ಒಂದು ಸಾವಿರ ಮಹಾಜನರು ಮತ್ತು ಊರೊಡೆಯರು ಮರುಳೇಶ್ವರ ದೇವರಿಗೆ ಎಣ್ಣೆ ಗಾಣ ಮತ್ತು ಹಣ್ಣಿನ ತೋಟದ ಮೇಲಿನ ಸುಂಕದ ಆದಾಯವನ್ನು ದಾನವಾಗಿ ನೀಡುವ ಸಂದರ್ಭದಲ್ಲಿ ಸೇರಿದ್ದಾಗಿ ತಿಳಿದು ಬರುವುದು.

ಅಗ್ರಹಾರದ ಕೆಲಸಕಾರ್ಯಗಳನ್ನು 'ಗ್ರಾಮಕಾರ್ಯ' ಎಂದು ಅವುಗಳ ನೀತಿ ಸಂಹಿತೆಯನ್ನು ಕಟ್ಟಳೆಗಳನ್ನು "ಸಮಯ" 'ಮರ್ಯಾದೆ' 'ಸ್ಥಿತಿ' ಮತ್ತು 'ವ್ಯವಸ್ಥೆ' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಹಾಜನರಿಗೆ ಸರ್ಕಾರದ ಪುರಸ್ಕಾರ ದೊರೆಯುತ್ತಿತ್ತು.

**ಬ್ರಹ್ಮಪುರಿ :** ಸಾಮಾನ್ಯವಾಗಿ ಬ್ರಾಹ್ಮಣರ ವಾಸಸ್ಥಾನಗಳಾದ ಬ್ರಹ್ಮಪುರಿಗಳು ನಗರದ ಭಾಗಗಳಾಗಿದ್ದವು. ಅವುಗಳನ್ನು ಬ್ರಾಹ್ಮಣರ ಬೀದಿ ಎನ್ನಬಹುದು.. ಅವು ಅಗ್ರಹಾರಗಳಂತೆ ಶಿಕ್ಷಣ ಕೇಂದ್ರಗಳಾಗಿದ್ದವು. ಇವುಗಳ ಆಡಳಿತವೂ 'ಮಹಾಜನರ' ಕೈಯಲ್ಲಿ ಇರುತ್ತಿತ್ತು. ಈ ಜಿಲ್ಲೆಯ ಸೂಡಿ ಮತ್ತು ಅಣ್ಣಿಗೇರಿಗಳು ಬ್ರಹ್ಮಪುರಿಗಳನ್ನು ಹೊಂದಿದ್ದವು. ಅಣ್ಣಿಗೇರಿಯಲ್ಲಿ 8 ಬ್ರಹ್ಮಪುರಿಗಳು ಇದ್ದವೆಂದು ತಿಳಿದು ಬರುವುದು.

### ನಗರಾಡಳಿತ

ಮಧ್ಯಕಾಲೀನ ಸಮಯದಲ್ಲಿ ಪ್ರಾರಂಭಗೊಂಡ ನಗರ\ಪುರದ ಸ್ಥಳೀಯ ಆಡಳಿತವು ಗ್ರಾಮದ ಆಡಳಿತಕ್ಕಿಂತಲೂ ಬಹು ವೈವಿಧ್ಯಮಯವಾಗಿತ್ತು. ಹಲವಾರು ಕಾರಣಗಳಿಂದ ಗ್ರಾಮಗಳು ಬೆಳೆದು ನಗರಗಳಾದವು. ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನಗರ ನಿರ್ಮಾಣದಲ್ಲಿ ತೊಡಗುವವರಿಗೆ, ವಿಶೇಷವಾಗಿ ವರ್ತಕರಿಗೆ, ಅವರ ಸಂಘಗಳಿಗೆ ಬಹು ಹೆಚ್ಚಿನ ಪ್ರೋತ್ಸಾಹವನ್ನು ಕೊಡಲಾಗುತ್ತಿತ್ತು. ಕ್ರಿ.ಶ. 1074 ರ ಪುಲಿಗೆರೆಯ ಶಾಸನವು ರಾಷ್ಟ್ರಕೂಟರ ಕಾಲದಲ್ಲಿ ಸ್ಥಳೀಯ ಜೈನ ದೇವಾಲಯದ ಸುತ್ತಮುತ್ತಲಿನ ಪ್ರದೇಶ ಯಾವ ರೀತಿಯಾಗಿ 'ಪುರ' (ನಗರದ ಬಡಾವಣೆ) ಆಯಿತು ಎಂದು ವಿವರಿಸಲಾಗಿದೆ. ಶಾಸನಗಳಲ್ಲಿ ನಗರ ಸಭೆಗಳನ್ನು 'ನಕರ' ಅಥವಾ 'ನಗರ', 'ನಗರ ಸಮೂಹ', ನಕರಸಮೂಹ (ಎಲೆಸಿರೂರಿನ ಶಾಸನ), 'ಮಹಾನಗರ' (ಡಂಬಳದ ಶಾಸನ) ನಗರ ಮಹಾಜನ ಎಂದು ಉಲ್ಲೇಖಿಸಲಾಗಿದೆ.

ಲಕ್ಷ್ಮೇಶ್ವರದ ಕ್ರಿ.ಶ. 725 ರ ಶಾಸನವು ನಗರಾಡಳಿತ ಸಮಿತಿಯು 'ಮಹಾಜನರು', 'ನಗರರು' ಮತ್ತು 18 ಪ್ರಕೃತಿ (ಜಾತಿಯವರು)ಯವರನ್ನು ಒಳಗೊಂಡಿತ್ತು ಎಂದು ತಿಳಿಸುವುದು. ಆ ಸಮಯದಲ್ಲಿ ನಗರದಲ್ಲಿ 300 ಒಕ್ಕಲು (ರೈತರು) ಇದ್ದುದಾಗಿ ಶಾಸನದಿಂದ ತಿಳಿದು ಬರುವುದು. ನಗರ ಸಭೆಯ ಸಂವಿಧಾನವನ್ನು ಶಾಸನಗಳಲ್ಲಿ 'ಆಚಾರ ವ್ಯವಸ್ಥೆ' ಎಂದು ಉಲ್ಲೇಖಿಸಲಾಗಿದೆ. ಅಲ್ಲದೇ ಪೌರಾಡಳಿತದ ವಿವಿಧ ಅಂಗಸಂಸ್ಥೆಗಳನ್ನು (8) ಕುರಿತು ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ.

ಮಧ್ಯಕಾಲೀನ ಕರ್ನಾಟಕದಲ್ಲಿ ಹಲವಾರು ವೈವಿಧ್ಯಮಯ ನಗರಾಡಳಿತ ವ್ಯವಸ್ಥೆಗಳು ಕಂಡು ಬರುವವು. ಧಾರವಾಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ರೋಣ ತಾಲೂಕಿನ ಸೂಡಿಯು ಕಿಸುಕಾಡು-70 ರ ರಾಜಧಾನಿ ಪಟ್ಟಣವಾಗಿತ್ತು. ನಗರದ ಒಂದು ಭಾಗವಾದ ಬ್ರಹ್ಮಪುರಿಯನ್ನು ಮಹಾಜನರು ಆಳಿದರೆ, ಉಳಿದ ಭಾಗವನ್ನು ಆರು ಜನ ಗೌಡರು, ಎಂಟು ಜನ ಸೆಟ್ಟರು (ವರ್ತಕರು) ಆಳುತ್ತಿದ್ದರು ಎಂದು ಕ್ರಿ.ಶ.1010 ರ ಶಾಸನವು ವಿವರಿಸುವುದು. ಆಡಳಿತ ವಿಕೇಂದ್ರೀಕರಣಕ್ಕೆ ಇದು ಒಂದು ಉದಾಹರಣೆಯಾಗಿತ್ತು. ಮುಂದೆ 65 ವರ್ಷಗಳ ನಂತರವೂ ಕ್ರಿ.ಶ. 1075 ಮತ್ತು 1084 ರ ಶಾಸನಗಳಂತೆ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾಗಿರಲಿಲ್ಲ, ಗೌಡರ ಮತ್ತು ಸೆಟ್ಟರ ಸಂಖ್ಯೆ ಮೊದಲಿನಂತೆಯೇ ಇತ್ತು. ನಗರ ಸಭೆಗೆ ಸರ್ಕಾರದಿಂದ ನಿಯುಕ್ತನಾದ ತಳಾರ ಎಂಬ ಅಧಿಕಾರಿ ಇದ್ದು ಅವನ ಕೆಲಸವು ನಗರದಲ್ಲಿ ಕಳುವಾದ ವಸ್ತುಗಳನ್ನು ಹುಡುಕಿ ಕೊಡುವುದು; ಹುಡುಕಿ ಕೊಡಲಾಗದಿದ್ದರೆ ಅವುಗಳ ನಷ್ಟವನ್ನು ಅವನು ತುಂಬಿ ಕೊಡಬೇಕಾಗಿತ್ತು. ಬ್ರಹ್ಮಪುರಿಯು ಪುರಸಭೆಯೊಂದಿಗೆ ಹಲವಾರು ಸರ್ವಸಮ್ಮತ ವಿಷಯಗಳ ಬಗ್ಗೆ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಶಾಸನದಿಂದ ತಿಳಿದು ಬರುವುದು.

### ಲಕ್ಷ್ಮೇಶ್ವರ

ಇದೂ ಸಹ ರಾಜಧಾನಿ ಪಟ್ಟಣವಾಗಿತ್ತು. ಕ್ರಿ.ಶ.725 ರ ಶಾಸನದ ಅನ್ವಯ ನಗರ ಸಭೆಯು (ಸರ್ಕಾರಿ ಅಧಿಕಾರಿಗಳು) ರಾಜಪುರುಷರು, ನಗರ ಪ್ರಮುಖರು, ಬ್ರಾಹ್ಮಣರು (ಮಹಾ ಜನರು), ಸಾಮಾನ್ಯ ಜನರು (ಪ್ರಕೃತಿ) ಇವರನ್ನು ಒಳಗೊಂಡಿತ್ತು. ನಾಲ್ಕು ಶತಮಾನಗಳ ನಂತರ ನಗರಾಡಳಿತದಲ್ಲಿ ವ್ಯಾಪಕ ಬದಲಾವಣೆ ಆಗಿತ್ತು. ಕ್ರಿ.ಶ.1111 ಮತ್ತು 1122ರ ಶಾಸನಗಳು ತಿಳಿಸುವಂತೆ ನಗರ ಮಹಾಜನರು ಮತ್ತು ಗೌಡರು ಅಧಿಕಾರ ನಡೆಸುತ್ತಿದ್ದರು. ಬ್ರಹ್ಮೇಶ್ವರಕೇರಿ ಎಂಬ ಪ್ರತ್ಯೇಕ ಹೊಸ ಬಡಾವಣೆಯ ಆಡಳಿತವನ್ನು 120 ಮಹಾಜನರು ನಡೆಸುತ್ತಿದ್ದರು.

ಹಿಂದಿನ ಸ್ಥಳೀಯ ಸಂಸ್ಥೆಯ ಆಡಳಿತ ಮಂಡಳಿಯು ಕೊಡಮಾಡಿದ್ದ ದೇಣಿಗೆಯನ್ನು ಮುಂದೆ ಬಂದಂಥ ಪುರ ಪ್ರತಿನಿಧಿಗಳು ಮುಂದುವರೆಸುವ ಸತ್‌ಸಂಪ್ರದಾಯವು ರೂಡಿಯಲ್ಲಿ ಇತ್ತೆಂದು ಅಬ್ಬಿಗೇರಿಯ ಕ್ರಿ.ಶ.1113, 1117, 1125 ರ ಶಾಸನಗಳು ಸಮರ್ಥಿಸುತ್ತವೆ. ಅಬ್ಬಿಗೇರಿಯು ಬೆಳವಲ 300 ರ ನರೆಯಂಗಳ (ನರೇಗಲ್)-12 ರ ಆಡಳಿತ ಭಾಗವಾಗಿತ್ತು. ಇದರ ಅಧಿಕಾರವನ್ನು 60 ಕುಟುಂಬಗಳ 8 ಜನ ಹಿರಿಯರು ನಡೆಸುತ್ತಿದ್ದರು ಎಂದು ತಿಳಿದುಬರುವುದು. ಶಾಸನಗಳಿಂದ ತಿಳಿದು ಬರುವಂತೆ ನಗರ ಸಭೆಗಳು ಸಾಮಾನ್ಯವಾಗಿ ಸ್ಥಳೀಯಸೆಟ್ಟರು (ವರ್ತಕರು) ಮತ್ತು ಗೌಡರುಗಳಿಂದ ಕೂಡಿರುತ್ತಿದ್ದವು. ಉದಾ: ನರೆಗಲ್ಲದ ನಗರ ಸಭೆಯು 16 ಜನ ಸೆಟ್ಟರು ಮತ್ತು 18 ಜನ ಇತರ ಜಾತಿಯವರನ್ನು ಒಳಗೊಂಡಿದ್ದರೆ, ಸೂಡಿಯ ಸಭೆಯು 8 ಜನ ಸೆಟ್ಟರು, 6 ಜನ ಗೌಡರನ್ನು

ಒಳಗೊಂಡಿತ್ತು. ಬಂಕಾಪುರ ಮತ್ತು ಡಂಬಳದ ಪುರಸಭೆಗಳು 16 ಜನ ಸೆಟ್ಟರನ್ನು ಹೊಂದಿದ್ದವು ಎಂದು ಶಾಸನಗಳಿಂದ ತಿಳಿದು ಬರುವುದು.

ಲಕ್ಷ್ಮೇಶ್ವರದ ಕ್ರಿ.ಶ.725 ರ ಶಾಸನದಿಂದ ತಿಳಿದುಬರುವಂತೆ ನಗರ ಸಭೆಯ ಮುಖ್ಯ ಕಾರ್ಯನಿರ್ವಾಹಕರನ್ನು 'ಪಟ್ಟಣಸೆಟ್ಟಿ', 'ಪಟ್ಟಣ ಸ್ವಾಮಿ' ಎಂದು ಕರೆಯಲಾಗುತ್ತಿತ್ತು. ಒಂದು ಹಳ್ಳಿಯು ವ್ಯಾಪಾರೀಕೇಂದ್ರವಾಗಿ ಬೆಳೆದಾಗ ಅಲ್ಲಿ ವಾರದ ಸಂತೆ ಆರಂಭಿಸಿ ಅದು ಪಟ್ಟಣವಾಗುತ್ತಿತ್ತು. ಈ ಸಂತೆಯ ಸಕಲ ವ್ಯವಸ್ಥೆಗಳನ್ನು ನೋಡಲು ಪಟ್ಟಣಸೆಟ್ಟಿಯನ್ನು ಸರಕಾರವೇ ನೇಮಿಸುತ್ತಿದ್ದ ಸಂಗತಿ ಬೇರೆ ಜಿಲ್ಲೆಗಳಲ್ಲಿ ಸಿಕ್ಕ ಶಾಸನಗಳಿಂದ ಸ್ಪಷ್ಟವಾಗಿದೆ. ಸಂತೆಮಾಳದ ಏರ್ಪಾಡು, ಬೇರೆ ಊರಿಂದ ಬಂದವರಿಗೆ ನೀರು, ಪ್ರಾಣಿಗಳಿಗೆ ಹುಲ್ಲು ಒದಗಿಸುವುದು ಅವರ ಜವಾಬ್ದಾರಿ. ಈತನಿಗೆ ಉಂಬಳಿ ಭೂಮಿ ಕೊಡಲಾಗುತ್ತಿತ್ತು. ಈತ ಸಂತೆಗೆ ಬಂದ ತಲೆಹೇರು, ಪ್ರಾಣಿಗಳ ಹೇರು, ಬಂಡಿಹೇರುಗಳಿಂದ ಸುಂಕ ಸಂಗ್ರಹಿಸಿ ಸಂತೆಯ ವ್ಯವಸ್ಥೆ ಹಾಗೂ ಇತರ ಕಾರ್ಯಗಳಿಗೆ ಬಳಸುತ್ತಿದ್ದ. ನಗರದ ವಿಸ್ತೀರ್ಣ ಮಾನದಿಂದ ಪಟ್ಟಣ ಸ್ವಾಮಿಯರ ಸಂಖ್ಯೆ ಹೆಚ್ಚುತ್ತಿತ್ತು. ಪಟ್ಟಣ ಸ್ವಾಮಿಯನ್ನು 'ಪುರದಪೆರ್ಗಡೆ' (ಬಂಕಾಪುರದ ಕ್ರಿ.ಶ. 1055ರ ಶಾಸನ), 'ಪಟ್ಟಣವೆರ್ಗಡೆ' (ಅಣ್ಣಿಗೇರಿಯ ಕ್ರಿ.ಶ. 1164 ರ ಶಾಸನ), 'ಪಟ್ಟಣಸೆಟ್ಟಿ' (ನರೇಂದ್ರದ ಕ್ರಿ.ಶ. 1187-1210ರ ಶಾಸನ), 'ಗೌಡ ಪಟ್ಟಣ ಸ್ವಾಮಿ' (ಗುಡಗೇರಿಯ ಕ್ರಿ.ಶ. 1245ರ ಶಾಸನ) ಎಂಬ ಬೇರೆ ಬೇರೆ ಪದನಾಮಗಳಿಂದ ಕರೆಯಲಾಗುತ್ತಿತ್ತು. ಕೆಲವು ಕಡೆಗಳಲ್ಲಿ ಪ್ರತೀ ಬೀದಿಗೆ ಒಬ್ಬ ಪಟ್ಟಣ ಸ್ವಾಮಿ ಇದ್ದ ಬಗ್ಗೆ ಉಲ್ಲೇಖವೂ ದೊರೆಯುವುದು. ಬಹುತೇಕ ಸಂದರ್ಭಗಳಲ್ಲಿ ಪಟ್ಟಣ ಸೆಟ್ಟಿಯರು ನಗರ ಸಂಸ್ಥಾಪಕರು ಆಗಿರುತ್ತಿದ್ದರು. ಕ್ರಿಯಾಶೀಲ ವರ್ತಕರಿಗೆ, ನಗರಾಭಿವೃದ್ಧಿಗೆ ಸಹಾಯಕರಾಗುವವರಿಗೆ, ಜಮೀನು ಇನಾಮು ಹಾಕಿಕೊಡುವದಲ್ಲದೇ ಅವರನ್ನು ಪಟ್ಟಣದ ಸೆಟ್ಟಿಯನ್ನಾಗಿ ನಿಯೋಜಿಸುವ, ಗೌರವಿಸುವ ಪದ್ಧತಿಯು ಮಧ್ಯಕಾಲದಲ್ಲಿ ಪ್ರಾರಂಭವಾಗಿ 18 ನೇ ಶತಮಾನದಲ್ಲಿ ಮರಾಠರ ಕಾಲದವರೆಗೂ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು. ಹಳ್ಳಿಗೆ ಗೌಡರು ಅಥವಾ ಮುಖ್ಯಸ್ಥರು ಮಾಡಬೇಕಾದ ಕರ್ತವ್ಯಗಳನ್ನು ಪಟ್ಟಣಸೆಟ್ಟಿಯು ನಗರಕ್ಕೆ ಮಾಡುತ್ತಿದ್ದರು. ಪಟ್ಟಣ ಸೆಟ್ಟಿಗೆ ಸಹಾಯಕರಾಗಿ ಸೇನ ಭೋವರು (ಶಾನುಭೋಗರು), ಸುಂಕದ ಅಧಿಕಾರಿ ಮುಂತಾದವರು ಇರುತ್ತಿದ್ದರು. ಕೆಲವು ನಗರ ಸಭೆಗಳಲ್ಲಿ ವರ್ತಕರ ಸಂಘಗಳು (ನಖರ) ನಗರಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಅವುಗಳನ್ನು 'ಬಣಂಜು ಪಟ್ಟಣ' (ವ್ಯಾಪಾರಿ ನಗರಗಳು) ಎಂದು ಕರೆಯಲಾಗುತ್ತಿತ್ತು. ನವಲಗುಂದವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ (ಜಗದೇಕಮಲ್ಲ) ಬಣಂಜುಪಟ್ಟಣ ಎಂದು ಪ್ರಸಿದ್ಧವಾಗಿತ್ತು. ಅದರಂತೆ ಹುಲಗೂರು ಕೂಡ. ಹಳ್ಳಿಯು ಬೆಳೆದು ಪಟ್ಟಣವಾದ ಸಂದರ್ಭದಲ್ಲಿ ಹಳೆಯ ಹಳ್ಳಿಯ ಆಡಳಿತದ ಸಂವಿಧಾನವನ್ನು ರದ್ದುಪಡಿಸದೇ ಹೊಸ ಸಂವಿಧಾನದೊಂದಿಗೆ ಹಳೆಯದನ್ನೂ ಮೇಳೈಸಿಕೊಂಡು ಹೋಗಿರುವುದೂ ಕಂಡು ಬರುವುದು. ಉದಾ: ಎಲೆಸಿರೂರು ನಗರಸಭೆಗಳು (ಪುರ) 'ವರ್ತಕರು', ಸ್ಥಳದ 'ಒಕ್ಕಲಿನವರು' (ರೈತರು), ಮಹಾಜನರು ಅಲ್ಲದೇ ಸ್ಥಳೀಯ ಮಠಗಳನ್ನು (ಪಂಚಮಠಗಳು) ಒಳಗೊಂಡಿರುತ್ತಿತ್ತು ಎಂದು ನರೆಗಲ್ಲಿನ ಕ್ರಿ.ಶ. 1100 ರ ಶಾಸನದಿಂದ ತಿಳಿದು ಬರುವುದು (ಪಂಚಮಠಗಳು ಎಂದರೆ ಒಂದೇ ಸಂಸ್ಥೆ, ಐದು ಪ್ರತ್ಯೇಕ ಮಠಗಳು ಅಲ್ಲ ಎಂದೂ ವಿದ್ವಾಂಸರ ಅಭಿಪ್ರಾಯವಿದೆ).

ದೊಡ್ಡ ದೊಡ್ಡ ನಗರಗಳು ಅನೇಕ ಕೇರಿ (ಬೀದಿ) 'ಬಲ'ಗಳಾಗಿ ವಿಂಗಡಿಸಲ್ಪಟ್ಟಿದ್ದವು. ಪ್ರತಿ ಒಂದು ಕೇರಿಗೆ ಒಬ್ಬ ಹಿರಿಯ, ಹೆಗ್ಗಡೆ, ಗೌಡ, ಇದ್ದುದಾಗಿ ತಿಳಿದು ಬರುವುದು. ನರಗುಂದದ ಕ್ರಿ.ಶ. 918, 1081, 1103 ಶಾಸನಗಳು ವಿವರಿಸುವಂತೆ ನರಗುಂದವು ಪಡವನಗೇರಿ, ಮೆಕ್ಕೆಗೇರಿ, ಹೇಮಗೇರಿ ಎಂಬ ಮೂರು ವಿಭಾಗಗಳಾಗಿ (ವಾರ್ಡ್ಸ)ಗಳಾಗಿ ವಿಂಗಡಿಸಲ್ಪಟ್ಟಿತ್ತು. ಪಡವನಗೇರಿ ಸಭೆಯ ಸದಸ್ಯರ ಸಂಖ್ಯೆ 55 ಆಗಿದ್ದರೆ, ಮೆಕ್ಕೆಗೇರಿ ಮತ್ತು ಹೇಮಗೇರಿಗಳ ಸದಸ್ಯರ ಸಂಖ್ಯೆ 35 ಮತ್ತು 55 ಎಂದು ತಿಳಿದು ಬರುವುದು. ಕೇರಿಗಳನ್ನು ಒಳಗೊಂಡ ಸಮಗ್ರ ನಗರದ ಸಭೆಯ ಸದಸ್ಯರ ಸಂಖ್ಯೆ 220 ಆಗಿತ್ತು. ಪುಲಿಗೇರಿ ಮತ್ತು ಲಕ್ಕುಂಡಿಯಲ್ಲಿ ತಲಾ ಒಂದೊಂದು ಕೇರಿ ಇದ್ದರೆ ರೋಣದಲ್ಲಿ ಎರಡು ಕೇರಿಗಳು ಇದ್ದುದಾಗಿ ಶಾಸನದಿಂದ ತಿಳಿದು ಬರುವುದು. ನಗರಗಳಲ್ಲಿ ಇರುವ ಕೇರಿಗಳು ಹಲವು ಸ್ವಯಮಾಧಿಕಾರಗಳನ್ನು ಹೊಂದಿದ್ದವು. ನಗರಸಭೆಯು ಒಟ್ಟಾಗಿ ಚಲಾಯಿಸಬಹುದಾದ ಅಧಿಕಾರವನ್ನು ಈ ಕೇರಿಯ ಆಡಳಿತ ಮಂಡಳಿಯು ಚಲಾಯಿಸಬಹುದಾಗಿತ್ತು. ಇದು ಅಧಿಕಾರ ವಿಕೇಂದ್ರಿಕರಣದ ಒಂದು ಉದಾಹರಣೆ ಎಂದು ಹೇಳಬಹುದು.

ಇನ್ನು ಕೆಲವು ನಗರಗಳು 'ಬಲ' (ವಾರ್ಡ್)ಗಳಾಗಿ ವಿಭಾಗಿಸಲ್ಪಟ್ಟಿದ್ದವು. ಉದಾ: ಮುಳಗುಂದ 5 ಬಲಗಳಾಗಿ, ನರೇಗಲ್ಲ ಎರಡು ಬಲಗಳಾಗಿ (ಹಿರಿಯ ಮತ್ತು ಕಿರಿಯ ನರೆಯಂಗಳ), ಲಕ್ಷ್ಮೇಶ್ವರವು ಎರಡು ಬಲಗಳಾಗಿ (ಬಸದಿ ಬಲ ಮತ್ತು ಹುಲಗೇರಿ ಬಲ). ಈ ಬಲಗಳ ಆಡಳಿತವನ್ನು ನಗರ ಮಹಾಜನರು, ಪ್ರಭು ನಾಡಗೌಡರು ನೋಡಿಕೊಳ್ಳುತ್ತಿದ್ದರು. ನಗರ ಸಭೆಗಳ ಆದಾಯ

ಮೂಲಗಳಲ್ಲಿ ಮನೆಯ ಮೇಲಿನ ತೆರಿಗೆ (ಮನೆವಣ), ವ್ಯಾಪಾರಿ ವಸ್ತುಗಳ ಮೇಲಿನ ಸುಂಕ (ಜಕಾತಿ), ಮಾರುಕಟ್ಟೆಸುಂಕ, ಅಂಗಡಿಯ ಮೇಲಿನ ಸುಂಕ, ವೃತ್ತಿಗಳ ಮೇಲಿನ ತೆರಿಗೆ, ಇವೇ ಪ್ರಮುಖವಾಗಿದ್ದವು ಎಂದು ಬೆಳವಣಿಕಿ ಮತ್ತು ಸೂಡಿಯ ಶಾಸನಗಳು ಮತ್ತು ಇತರ ಶಾಸನಗಳಿಂದ ತಿಳಿದು ಬರುವುದು. ಸಮಾಜದ ಉಪಯೋಗಕ್ಕಾಗಿ ಅನೇಕ ಗಣ್ಯರು, ವರ್ತಕರ ಸಂಸ್ಥೆಗಳು, ಜನಸಾಮಾನ್ಯರು, ಕುಡಿಯುವ ನೀರಿನ ಬಾವಿ, ದೇವಾಲಯ ರಚನೆ, ಕೆರೆಯ ದುರಸ್ತಿ ಮುಂತಾದ ಧರ್ಮಕಾರ್ಯಗಳಿಗೆ ಸಹಾಯ ನೀಡುತ್ತಿದ್ದುದನ್ನು ನಗರಗಳ ಅನೇಕ ಶಾಸನಗಳು ಉಲ್ಲೇಖಿಸುತ್ತವೆ.

## ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳು

ಸ್ವಾತಂತ್ರ್ಯಪೂರ್ವದ ಸುಮಾರು ನೂರು ವರ್ಷಗಳ ಮೊದಲು ಮುಂಬಯಿ ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿ ಇದ್ದ ಸ್ಥಳೀಯ ಸಂಸ್ಥೆಗಳೆಂದರೆ 1)ಮುನಸಿಪಾಲಿಟಿಗಳು 2)ಲೋಕಲ್ ಬೋರ್ಡ್‌ಗಳು, 3)ಗ್ರಾಮ ಪಂಚಾಯತಿಗಳು, 4)ಅಧಿಸೂಚಿತ (ನೋಟಿಫೈಡ್) ಪ್ರದೇಶಗಳು, 5)ಆರೋಗ್ಯ (ಸ್ಯಾನಿಟರಿ) ಸಮಿತಿಗಳು, 6)ಸ್ಯಾನಿಟರಿ ಬೋರ್ಡ್‌ಗಳು ಮತ್ತು 7)ಕಂಟೋನಮೆಂಟ್ (ದಂಡು ಪ್ರದೇಶ). ಪುರಸಭೆಗಳು (ಮುನಸಿಪಾಲಟಿಗಳು) ಪ್ರಥಮವಾಗಿ 1850ರ ಈಸ್ಟ್ ಇಂಡಿಯಾ ಕಂಪನಿ ಕಾನೂನು 26ರ ಅನ್ವಯ ಅಸ್ತಿತ್ವದಲ್ಲಿ ಬಂದವು. ಈ ಕಾನೂನಿನ ಅನ್ವಯ ಯಾವುದೇ ಪಟ್ಟಣ ಅಥವಾ ಅದರ ಸುತ್ತ ಮುತ್ತಲಿನ ಪ್ರದೇಶದ (ಸಬರ್ಬನ್) ನಾಗರಿಕರು ಮನವಿಮಾಡಿಕೊಂಡಲ್ಲಿ ಆ ಪ್ರದೇಶಕ್ಕೆ 'ಮುನಸಿಪಲ್ ಕಮಿಟಿ'ಯನ್ನು ರಚನೆಮಾಡಿಕೊಳ್ಳಲು ಸರ್ಕಾರ ಆಡಳಿತಾತ್ಮಕ ಒಪ್ಪಿಗೆಯನ್ನು ಕೊಡುತ್ತಿತ್ತು.

ಪ್ರಾರಂಭದಲ್ಲಿ ಪುರಸಭೆಗಳು\ಸಮಿತಿಗಳು ಜಿಲ್ಲಾ ಮ್ಯಾಜಿಸ್ಟ್ರೇಟರ್ ನೇತೃತ್ವದಲ್ಲಿ (ನಿಯಂತ್ರಣದಲ್ಲಿ) ಸರ್ಕಾರದಿಂದ ನೇಮಿಸಲ್ಪಟ್ಟ ಸದಸ್ಯರಿಂದ ಕೂಡಿರುತ್ತಿದ್ದವು. ಈ ಜಿಲ್ಲೆಯಲ್ಲಿ 1850ರ ಈಸ್ಟ ಇಂಡಿಯಾ ಕಂಫನಿ ಕಾನೂನು 26ರ ಅನ್ವಯ ರಚನೆಗೊಂಡ ಪ್ರಪ್ರಥಮ ಮುನಸಿಪಾಲಟಿಗಳು ಎಂದರೆ, ಹುಬ್ಬಳ್ಳಿ (1855), ಧಾರವಾಡ (1856), ಗದಗ (1859), ಬೆಟಗೇರಿ (1859), ರಾಣೆಬೆನ್ನೂರು (1858), ನವಲಗುಂದ (1870), ನರಗುಂದ (1871), ಮುಂತಾದವುಗಳು. ಪ್ರಾರಂಭದಲ್ಲಿ ಗದಗ ಮತ್ತು ಬೆಟಗೇರಿಗಳಿಗೆ ಪ್ರತ್ಯೇಕವಾದ ಮುನಸಿಪಾಲಿಟಿಗಳು ರಚನೆಗೊಂಡರೂ, ಮೂರು ವರ್ಷದ ನಂತರ 1862 ರಲ್ಲಿ ಎರಡೂ ಅವಳಿನಗರಗಳು ಸೇರಿ ಒಂದೇ ಪುರಸಬೆಯನ್ನು ರಚಿಸಲಾಯಿತು. 1862 ರಲ್ಲಿ ಜಾರಿಯಲ್ಲಿ ಬಂದ ಇನ್ನೊಂದು ಮುನಸಿಪಲ್ ಕಾಯಿದೆಯ ಅನ್ವಯ ಆಯಾ ಜಿಲ್ಲಾ ಕಲೆಕ್ಟರ್ (ಜಿಲ್ಲಾಧಿಕಾರಿ), ಸಹಾಯಕ ಕಲೆಕ್ಟರರು, ಮಾಮಲೆದಾರರು (ತಹಸೀಲ್ದಾರ), ಮಹಲ್‌ಕರಿಯವರು ಮುಂತಾದ ಹಿರಿಯ ಅಧಿಕಾರಿಗಳನ್ನು ಮುನಸಿಪಾಲಟಿಯ ಪದನಿಮಿತ್ತ (ಎಕ್ಸ್ ಅಫಿಸಿಯೊ) ಸದಸ್ಯರನ್ನಾಗಿ ನೇಮಿಸಲಾಗುತ್ತಿತ್ತು. ಕಂದಾಯ ಇಲಾಖೆಯ ಅಧಿಕಾರಿಗಳಲ್ಲದೇ ಸರ್ಕಾರದ ಇತರೇ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳಾದ ಇಂಜಿನಿಯರ್, ಡಾಕ್ಟರ್, ಶಿಕ್ಷಣ ಇಲಾಖೆಯ ಡೆಪ್ಯೂಟಿ ಇನ್‌ಸ್ಪೆಕ್ಟರ್ ಮುಂತಾದವರನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಿಸಲಾಗುತ್ತಿತ್ತು. ಅಧಿಕಾರಿಗಳಲ್ಲದೇ ಮುನಸಿಪಲ್ ತೆರಿಗೆಯನ್ನು ಕೊಡುತ್ತಿದ್ದ ಕೆಲವು ಆಯ್ದ ಸಮಾಜಗಳ ಗಣ್ಯನಾಗರಿಕರನ್ನು ಸಹ ಪುರಸಭೆಗಳು ಒಳಗೊಂಡಿರುತ್ತಿದ್ದವು. ಅಂದಿನ ದಿನಗಳಲ್ಲಿ ಮುನಸಿಪಲ್ ಕಮಿಟಿಯ ಎಲ್ಲಾ ಸದಸ್ಯರನ್ನು ಮುನಸಿಪಲ್ ಕಮಿಶನರ್ ಎಂತಲೇ ಕರೆಯುತ್ತಿದ್ದರು. ನಾಗರಿಕರ ಆರೋಗ್ಯ, ರಸ್ತೆಗಳ ಸ್ವಚ್ಛತೆ, ಬೀದಿ ದೀಪದ ವ್ಯವಸ್ಥೆ, ಇವೇ ಮುಂತಾದವುಗಳು ಪುರಸಭೆಯ ಪ್ರಮುಖ ಆದ್ಯತೆಯ ಕರ್ತವ್ಯಗಳಾಗಿದ್ದವು. ಅಂದಿನ ಆದಾಯದ ಮೂಲಗಳಲ್ಲಿ ಮನೆಪಟ್ಟಿ, ಛಕ್ಕಡಿ (ಎತ್ತಿನಗಾಡಿ) ಪಟ್ಟಿ, ಹೊರಗಿನಿಂದ ಬರುವ ಮಾಲಿನ ಮೇಲಿನ ಜಕಾತಿ (ಆಕ್ಟ್ರಾಯ್) ಪ್ರಮುಖವಾಗಿದ್ದವು.

ಕಾಲಕ್ರಮೇಣ ಜಿಲ್ಲೆಯ ಇತರ ಭಾಗಗಳ ನಾಗರಿಕರೂ ಮುನಸಿಪಾಲಿಟಿಗಳ ರಚನೆಗಾಗಿ ಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಿದರು. 1873ರಲ್ಲಿ ಇನ್ನೊಂದು ಮುನಸಿಪಲ್ ಕಾನೂನನ್ನು ಜಾರಿಯಲ್ಲಿ ತರಲಾಯಿತು. ಇದರ ಅನ್ವಯ ಕುಂದಗೋಳ (1877), ಹಾವೇರಿ (1879), ಶಿರಹಟ್ಟಿ (1878), ಹಾನಗಲ್ (1879), ಬ್ಯಾಡಗಿ (1879), ಸವಣೂರು (1893) ಗಳಲ್ಲಿ ಮುನಸಿಪಾಲಟಿಗಳು ರಚನೆಗೊಂಡವು. 1873ರ ಕಾಯಿದೆಯಲ್ಲಿ ದೊಡ್ಡ ದೊಡ್ಡ ಜಾತ್ರೆಗಳು ನಡೆಯುವ ಸ್ಥಳಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುವಂತೆ ಹಂಗಾಮಿ ಪುರಸಭೆಗಳ ರಚನೆಗೆ ಅವಕಾಶ ಮಾಡಿಕೊಡಲಾಯಿತು. ಈ ಸಭೆಗಳು ಸ್ಥಳದ ತಾಲ್ಲೂಕಿನ ಪುರಸಭೆಯ ಅಧೀನದಲ್ಲಿ ಕಾರ್ಯ ಮಾಡುತ್ತಿದ್ದವು. ಸದರಿ ಕಾನೂನು ಅನ್ವಯ ಗುಡ್ಡಗುಡ್ಡಾಪುರ (ದೇವರಗುಡ್ಡ) (1878) ಮತ್ತು

ಯಮನೂರು (1881) ಗಳಲ್ಲಿ ಹಂಗಾಮಿ (ಜಾತ್ರಾ) ಮುನಸಿಪಾಲಟಿಗಳು ರಚನೆಗೊಂಡವು ಎಂದು ತಿಳಿದುಬರುವುದು. 1873 ರಲ್ಲಿ ಜಾರಿಯಲ್ಲಿ ಬಂದ ಪುರಸಭೆಗಳ ಅಧಿನಿಯಮ ಹಲವಾರು ಪ್ರಗತಿ ಪರ ಧೋರಣೆಗಳನ್ನು ಒಳಗೊಂಡಿತ್ತು. ಈ ಕಾನೂನಿನ ಅನ್ವಯ ಪುರಸಭೆಗೆ ಒಬ್ಬ ವ್ಯಕ್ತಿಯು ಕಾನೂನು ಮೂಲಕ ಹೊಂದಿರಬಹುದಾದ ಎಲ್ಲಾ ಅಧಿಕಾರ, ಹಕ್ಕುಬಾದ್ಯತೆಗಳನ್ನು, ಸ್ಥಾನಮಾನವನ್ನು ನೀಡಲಾಯಿತು. ಸದರಿ ಕಾನೂನಿನ ಅನ್ವಯ ಹತ್ತು ಸಾವಿರ ಜನಸಂಖ್ಯೆಗೆ ಕಡಿಮೆ ಇಲ್ಲದಷ್ಟು ಪ್ರದೇಶಗಳ ಸ್ಥಳೀಯ ಆಡಳಿತ ಸಂಸ್ಥೆಯನ್ನು 'ಸಿಟಿ ಮುನಸಿಪಾಲಿಟಿ' (ನಗರ ಸಭೆ) ಎಂದು, ಎರಡು ಸಾವಿರ ಜನಸಂಖ್ಯೆಗಿಂತ ಕಡಿಮೆ ಇಲ್ಲದ ಪ್ರದೇಶಗಳನ್ನು ಟೌನ (ಪಟ್ಟಣ) ಪುರಸಭೆಗಳೆಂದು ವರ್ಗೀಕರಿಸಲಾಯಿತು. ಸಿಟಿ ಮುನಸಿಪಾಲಿಟಿಗಳಲ್ಲಿ 2/3 ಭಾಗ ಸದಸ್ಯರು ಸರ್ಕಾರದಿಂದ ನಾಮಕರಣ ಹೊಂದಿದ ಅಧಿಕಾರರೇತರಾಗಿದ್ದರೆ ಉಳಿದಂತೆ 1/3 ಸರ್ಕಾರದ ಪದನಿಮಿತ್ತ ಸದಸ್ಯರಾಗಿದ್ದರು.

ಸದರಿ 1873 ರ ಕಾನೂನಿನ ಅನ್ವಯ ಈ ಮೊದಲೇ ಅಸ್ತಿತ್ವದಲ್ಲಿದ್ದ ಪುರಸಭೆಗಳನ್ನು ಹುಬ್ಬಳ್ಳಿ (1883), ಧಾರವಾಡ (1883), ಗದಗ-ಬೆಟಗೇರಿಗಳನ್ನು ಸಿಟಿ ಮುನಸಿಪಾಲಿಟಿಗಳನ್ನಾಗಿ ಪದೋನ್ನತಿ ನೀಡಲಾಯಿತು. ಚುನಾವಣೆ ಮೂಲಕ ಸದಸ್ಯರ ಆಯ್ಕೆಯನ್ನು ಮಾಡುವ ಪದ್ಧತಿಯನ್ನು 1873 ರ ಕಾನೂನಿನಲ್ಲಿ ಅಳವಡಿಸಿದ್ದರೂ ಅದು ಕಾರ್ಯರೂಪದಲ್ಲಿ ಬಂದದ್ದು 1882 ರಲ್ಲಿ ಮಾತ್ರ. ಕಲೆಕ್ಟರ ಅವರೇ ನಗರ ಮತ್ತು ಟೌನ ಮುನಸಿಪಾಲಿಟಿಗಳಿಗೆ ಅಧ್ಯಕ್ಷರಾಗಿ ಮುಂದುವರೆದರು.

ಕಾಲಕ್ರಮೇಣ ಸರ್ಕಾರವು ಜನಗಳ ಬೇಡಿಕೆಗೆ ಸ್ಪಂದಿಸುತ್ತಾ ನಗರಸಭೆ, ಪುರಸಭೆ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಯಿತಲ್ಲದೇ ನಾಮಕರಣಗೊಳ್ಳುವ ಅಧಿಕಾರಿ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಲಾಯಿತು. ಅಧ್ಯಕ್ಷರನ್ನು ಚುನಾಯಿತ ಪ್ರತಿನಿಧಿಗಳಿಂದಲೇ ಆಯ್ಕೆಯಾಗುವಂತೆ ಮುನಸಿಪಲ್ ಕಾಯಿದೆಗಳನ್ನು ಉದಾರೀಕರಣಗೊಳಿಸಲಾಯಿತು; ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಲಾಯಿತು. 1884 ರ ಪೂರಕ ಮುನಸಿಪಲ್ ಕಾಯಿದೆಯ ಅನ್ವಯ ನಗರ ಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕನಿಷ್ಠ ಅರ್ಧಕ್ಕೆ ಹೆಚ್ಚಿಸಲಾಯಿತು. 1908 ರಲ್ಲಿ ಈ ಪ್ರಮಾಣವನ್ನು 2/3 ಕ್ಕೆ ಹೆಚ್ಚಿಸಲಾಯಿತು. ಹಿಂದೆ ವಿಂಗಡಿಸಲ್ಪಟ್ಟಿದ್ದ ಸಿಟಿ ಮತ್ತು ಟೌನ ಎಂಬ ಪುರಸಭೆಗಳ ವರ್ಗೀಕರಣವನ್ನು ತಾತ್ಕಾಲಿಕವಾಗಿ ತೆಗೆದು ಹಾಕಲಾಯಿತು. ಸ್ಥಳದ ಚುನಾಯಿತ ಸದಸ್ಯರನ್ನು ಮಾತ್ರ ಮುನಸಿಪಾಲಿಟಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ನಿಯಮವನ್ನು ಜಾರಿಯಲ್ಲಿ ತರಲಾಯಿತು. ಬೊಂಬಾಯಿ ಜಿಲ್ಲಾ ಮುನಸಿಪಾಲಿಟಿಗಳ ಕಾನೂನು 1901 ರ ಅನ್ವಯ ಸಹ ಅನೇಕ ಸುಧಾರಣೆಗಳನ್ನು ಅಳವಡಿಸಿ ಪುರಸಭೆಗೆ ತನ್ನದೇ ಆದ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರ ನೀಡಲಾಯಿತು. ಪುರಸಭೆಯ ಸದಸ್ಯರ ಅಧಿಕಾರಾವಧಿಯನ್ನು ಮೂರು ವರ್ಷ ಎಂದು ನಿಗದಿಗೊಳಿಸಲಾಯಿತು. ಮುನಸಿಪಾಲಿಟಿಯ ಕರ್ತವ್ಯಗಳನ್ನು 'ಕಡ್ಡಾಯ' ಮತ್ತು 'ಐಚ್ಛಿಕ' ಎಂದು ವಿಂಗಡಿಸಲಾಯಿತು. ಪ್ರತೀ ಪುರಸಭೆಗೆ ಸ್ಥಾಯೀ ಸಮಿತಿಯ (ಸ್ಟ್ಯಾಂಡಿಂಗ್ ಕಮಿಟಿ) ರಚನೆಯನ್ನು ಕಡ್ಡಾಯಗೊಳಿಸಲಾಯಿತು.

ಮುನಸಿಪಾಲಿಟಿಗಳ ಮೇಲೆ ಜಿಲ್ಲಾ ಕಲೆಕ್ಟರ್ ಅವರ ಮತ್ತು ಸ್ಥಳೀಯ ಸಂಸ್ಥೆಗಳ ನಿರ್ದೇಶಕರ ಅಧಿಕಾರ ಮುಂದುವರೆಯಿತು. ಸ್ಥಳೀಯ ಸಂಸ್ಥೆಗಳ ನಿರ್ದೇಶಕರಿಗೆ, ನಗರ\ಪುರಸಭೆಗಳ ಸದಸ್ಯರು ಅನುಚಿತವಾಗಿ ವರ್ತಿಸಿದಲ್ಲಿ, ನೀತಿ ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿದಲ್ಲಿ ತೆಗೆದು ಹಾಕುವ ಅಧಿಕಾರ ಇದ್ದರೆ, ಸರ್ಕಾರಕ್ಕೆ ಇದೇ ಕಾರಣದಿಂದ ಅಧ್ಯಕ್ಷ\ಉಪಾಧ್ಯಕ್ಷರನ್ನು ತೆಗೆದು ಹಾಕುವ ಅಧಿಕಾರ ಇತ್ತು.

1921 ರ ಸುಮಾರಿಗೆ ಮುನಸಿಪಲ್ ಪ್ರದೇಶದಲ್ಲಿ ವಾಸವಾಗಿರುವ ತೆರಿಗೆ ನೀಡುವ ನಾಗರಿಕರೆಲ್ಲರಿಗೂ ಮತದಾನದ ಹಕ್ಕನ್ನು ನೀಡಲಾಯಿತು. ನಗರದ ಜನಸಂಖ್ಯೆಗೆ ಅನುಗುಣವಾಗಿ ಪುರ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಈ ಬದಲಾವಣೆಯಿಂದ ನಗರ ಪ್ರದೇಶಗಳಲ್ಲಿ ಮೊದಲಿದ್ದ ಶೇ.7ರ ಮತದಾರರ ಪ್ರಮಾಣ ಶೇ.18ಕ್ಕೆ ಹೆಚ್ಚಳಗೊಂಡಿತು. ಅಲ್ಲದೇ ಪುರಸಭೆಗಳಲ್ಲಿ ಮುಸ್ಲೀಮರಿಗೆ ಪ್ರತ್ಯೇಕವಾದ ಸ್ಥಾನಗಳನ್ನು ಮೀಸಲಾಗಿ ಇಡಲಾಗಿತ್ತು. ಮುನಸಿಪಾಲಟಿಯ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಲು 1922 ರ ಸುಮಾರಿಗೆ 'ಚೀಫ್ ಆಫೀಸರ್' (ಮುಖ್ಯ ಕಾರ್ಯನಿರ್ವಾಹಕ) ಅಧಿಕಾರಿಯನ್ನು ನೇಮಿಸುವುದಕ್ಕೆ ಅವಕಾಶ ಮಾಡಿಕೊಡಲಾಯಿತು. 1924 ರ ಬೊಂಬಾಯಿ ಮುನಸಿಪಲ್ ಕಾಯಿದೆಯ ಪ್ರಕಾರ ಇದುವರೆಗೆ ಮಹಿಳೆಯರು ನಗರ ಸಭೆಗಳ ಚುನಾಯಿತ ಸದಸ್ಯರಾಗಲು ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಯಿತು.

**ಬರೋ ಮುನಸಿಪಾಲಿಟಿಗಳು**

ಮುಂಬೈ ಬರೋ ಮುನಸಿಪಾಲಿಟಿ ಕಾನೂನು 1925 ರ ಅನ್ವಯ ದೊಡ್ಡ ನಗರಸಭೆಗಳಿಗೆ ('ಬರೋ' ಅಂದರೆ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರವಿರುವ ನಗರಗಳು) ಹೆಚ್ಚಿನ ಅಧಿಕಾರವನ್ನು ನೀಡಲಾಯಿತು. ಅಲ್ಲದೇ ಇಂತಹ ನಗರ ಸಭೆಗಳಲ್ಲಿ ಸ್ಥಾಯೀ ಸಮಿತಿಯ ರಚನೆಯನ್ನು ಕಡ್ಡಾಯಗೊಳಿಸಿ ಅವುಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಯಿತು. ಬರೋ ನಗರ ಸಭೆಗಳಿಗೆ ತಜ್ಞರಾದ ಚೀಫ್ ಆಫೀಸರ್ (ಮುಖ್ಯ ಕಾರ್ಯನಿರ್ವಾಹಕ) ಅವರನ್ನು ನೇಮಿಸಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು. ಚೀಫ್ ಆಫೀಸರ್ ಅವರಿಗೆ ಅಧೀನ ಸಿಬ್ಬಂದಿಯನ್ನು ನಿಯಂತ್ರಿಸುವ ಅಧಿಕಾರಗಳನ್ನು ನೀಡಲಾಯಿತು. ಬರೋ ನಗರಸಭೆಯ 1925 ರ ಕಾಯಿದೆಯ ಅನ್ವಯ ಜಾರಿಯಲ್ಲಿ ಬಂದ ಇನ್ನೊಂದು ಮಹತ್ವದ ಬದಲಾವಣೆ ಎಂದರೆ ಬರೋ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ನಗರ ಸಭೆಗಳಿಗೆ ವಹಿಸಿಕೊಡಲಾಯಿತು.

ಸದರಿ ಕಾನೂನಿನ ಅನ್ವಯ ಈಗಾಗಲೇ ನಗರಸಭೆಯ (ಸಿಟಿ ಮುನಿಸಿಪಾಲಟಿ) ಸ್ಥಾನಮಾನಗಳನ್ನು ಹೊಂದಿದ್ದ ಹುಬ್ಬಳ್ಳಿ, ಧಾರವಾಡ ಮತ್ತು ಗದಗ-ಬೆಟಗೇರಿ ಸ್ಥಳೀಯ ಸಂಸ್ಥೆಗಳನ್ನು 1925-26 ರಲ್ಲಿ ಬರೋ ನಗರ ಸಭೆಗಳೆಂದು ಸಾರಲಾಯಿತು. ಮುಂದಿನ ದಶಕಗಳಲ್ಲಿ ನಗರ ಸಭೆಗಳ ಕಾರ್ಯ ವಿಧಾನದಲ್ಲಿ ಅನೇಕ ಸೂಕ್ತ ಮಾರ್ಪಾಡುಗಳನ್ನು ತರಲಾಯಿತಲ್ಲದೇ ಕಾಲಕ್ರಮೇಣ ಸರ್ಕಾರದಿಂದ ನೇಮಕವಾಗುತ್ತಿದ್ದ, ಪದನಿಮಿತ್ತ ಸದಸ್ಯರ ಸಂಖ್ಯೆಯನ್ನು ಸಂಪೂರ್ಣವಾಗಿ ಕಡಿಮೆ ಮಾಡಲಾಯಿತು. ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಯಿತು. ಪುರಸಭೆಗಳು ಆದಾಯ ಮೂಲವನ್ನು ಹೆಚ್ಚಿಸಿಕೊಳ್ಳಲು ಕಾನೂನಿನ ಮೂಲಕ ಅವಕಾಶ ಮಾಡಿಕೊಡಲಾಯಿತು.

ಸ್ವಾತಂತ್ರ್ಯಾನಂತರ ಇದುವರೆಗೆ ಹಿಂದಿನ ಸಂಸ್ಥಾನಗಳ ಆಡಳಿತಕ್ಕೆ ಒಳಪಟ್ಟಿದ್ದ ಕುಂದಗೋಳ, ಲಕ್ಷ್ಮೇಶ್ವರ, ಸವಣೂರು, ಶಿರಹಟ್ಟಿ, ಗುಡಗೇರಿ, ಶಿಗ್ಗಲಿ, ಮುಂತಾದ ಪ್ರದೇಶಗಳಲ್ಲಿ ಈ ಮೊದಲೇ ಸಂಸ್ಥಾನೀ ಕಾನೂನಿನ ಅನ್ವಯ ರಚನೆಗೊಂಡಿದ್ದ ಪುರಸಭೆಗಳನ್ನು ಮುಂಬೈ ಜಿಲ್ಲಾ ಮುನಸಿಪಾಲಟಿ ಕಾನೂನು 1901 ರ ಅನ್ವಯ ಪುನರ್ ರಚಿಸಲಾಯಿತು. ಅದೇ ಸಮಯದಲ್ಲಿ ಆರ್ಥಿಕ ದೃಷ್ಟಿಯಿಂದ ದುರ್ಬಲವಾದ ಗುಡಗೇರಿ ಮತ್ತು ಶಿಗ್ಗಲಿ ಪುರ ಸಭೆಗಳನ್ನು ರದ್ದು ಮಾಡಲಾಯಿತು. ಶಿರಹಟ್ಟಿಯಲ್ಲಿ 1878 ರಲ್ಲಿ ಸ್ಥಾಪಿಸಿದ ಗ್ರಾಮಸುಧಾರಣಾ ಸಮಿತಿಯೇ ಮುಂದೆ ಪುರಸಭೆ ಆಯಿತು. ಸಂಶಿಗೆ ಮೊದಲು ಪ್ರತ್ಯೇಕ ಪುರಸಭೆ ಇದ್ದು 1949 ರಲ್ಲಿ ಅದು ಕುಂದಗೋಳದಲ್ಲಿ ವಿಲೀನಗೊಂಡ ನಂತರ ಹಿಂದಿನ ಪುರಸಭೆಯನ್ನು ರದ್ದುಪಡಿಸಲಾಯಿತು ಎಂದು ಹಳೆಯ ದಾಖಲೆಗಳಿಂದ ತಿಳಿದು ಬರುವುದು. ರಾಜ್ಯ ಪುನರ್‌ಘಟನೆಗೆ ಮೊದಲು ಹಿರೇಕೆರೂರು ಮತ್ತು ಹಾನಗಲ್‌ಗಳಲ್ಲಿ ಅಧಿಸೂಚಿತ ಪ್ರದೇಶ ಸಮಿತಿಗಳು ಇದ್ದುದಾಗಿ ತಿಳಿದು ಬರುವುದು. ಹಿರಿಯ ಮಿರ್ಜಿ ಸಂಸ್ಥಾನದ ಭಾಗವಾಗಿದ್ದ ಲಕ್ಷ್ಮೇಶ್ವರದಲ್ಲಿ 1939 ರ ವರೆಗೆ ಮುನಸಿಪಾಲಿಟಿ ಇದ್ದು ಲಕ್ಷ್ಮೇಶ್ವರದ ಮಾಮಲೇದಾರರು ಅದರ ಅಧ್ಯಕ್ಷರಾಗಿದ್ದರು. 1948 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ವಿಲೀನಗೊಂಡ ನಂತರ ಅದು ಪುನರ್ ರಚನೆ ಆಯಿತು. ರಾಜ್ಯ ಪುನರ್ ಘಟನೆಗೆ ಕೆಲವೇ ವರ್ಷ ಪೂರ್ವದಲ್ಲಿ 1950-51 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಪುರಸಭೆಗಳ ವ್ಯಾಪ್ತಿಯಲ್ಲಿ ಒಳಪಟ್ಟ ಪ್ರದೇಶಗಳ ವಿಸ್ತೀರ್ಣ ಕೇವಲ 27 ಚ.ಮೈ. ಆಗಿತ್ತು ಜನಸಂಖ್ಯೆ 3.77 ಲಕ್ಷ ಆಗಿತ್ತು. ಧಾರವಾಡ, ಹುಬ್ಬಳ್ಳಿ, ಗದಗ-ಬೆಟಗೇರಿ ನಗರಸಭೆಗಳು ಮುಂಬಯಿ ಮುನಸಿಪಾಲ್ ಬರೋ ಕಾನೂನು 1925 ರ ಅನ್ವಯ ಕಾರ್ಯ ನಿರ್ವಹಿಸುತ್ತಿದ್ದರೆ, ಇತರ ನಗರಸಭೆಗಳು 1901 ರ ಕಾನೂನಿನ ಅನ್ವಯ ಸ್ಥಾನಿಕ ಸಂಸ್ಥೆಗಳ ಕಾರ್ಯ ನಿರ್ವಹಿಸುತ್ತಿದ್ದವು. ಈ ಪೂರ್ವದಲ್ಲಿಯೆ ದೇವರಗುಡ್ಡ ಮತ್ತು ಯಮನೂರುಗಳಲ್ಲಿ ಜಾತ್ರೆಯ ಸಮಯದಲ್ಲಿ ಹಂಗಾಮಿ ಮುನಸಿಪಾಲಟಿಗಳನ್ನು ರಚಿಸಲು ಅವಕಾಶ ಮಾಡಿಕೊಡಲಾಗಿತ್ತು.

**ಮೀಸಲಾತಿ**

1950 ರ ಪೂರ್ವದಲ್ಲಿ ಸ್ಥಾನಿಕಸ್ವರಾಜ್ಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ, ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ, ಆ್ಯಂಗ್ಲೋ ಇಂಡಿಯನ್ನರಿಗೆ, ಪರಿಶಿಷ್ಟ ಜಾತಿಯವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಾತಿಯ ವ್ಯವಸ್ಥೆ ಇತ್ತು. ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರು, ಮುಸ್ಲಿಮರು, ಹರಿಜನರು ಮತ್ತು ಹಿಂದುಳಿದವರಿಗೆ ಮೀಸಲಾತಿ ಇತ್ತು. 1947 ರ ಪೂರ್ವದಲ್ಲಿ ಜಿಲ್ಲಾ ಬೋರ್ಡ್ ಮತ್ತು ಪುರಸಭೆಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕವಾದ ಮೀಸಲಾತಿ ಇತ್ತು. ಈ ಎಲ್ಲಾ ಮೀಸಲಾತಿಗಳನ್ನು 1950 ರ ಮುಂಬಯಿ ಸ್ಥಳೀಯ ಸಂಸ್ಥೆಗಳ ಕಾನೂನಿನ ಅನ್ವಯ ತೆಗೆದು ಹಾಕಲಾಯಿತು. ಆದರೆ ಪರಿಶಿಷ್ಟ ಜಾತಿ\ಪರಿಶಿಷ್ಟ ವರ್ಗ ಹಾಗೂ ಮಹಿಳೆಯರಿಗೆ ಮಾತ್ರ

ಮೀಸಲಾತಿ ಮುಂದುವರೆಸಲಾಯಿತು. 1950 ರ ನಂತರ ಎಲ್ಲಾ ಬಗೆಯ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳಲು ಸ್ಥಳೀಯ ಸಂಸ್ಥೆಗಳ ನಿರ್ದೇಶನಾಲಯ (ಡೈರೆಕ್ಟೊರೇಟ್ ಆಫ್ ಲೋಕಲ್ ಅಥಾರಿಟೀಸ್) ಎಂಬ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನ 8 ವಿವಿಧ ಕಾನೂನುಗಳನ್ನು ಡಿವಿಜನಲ್ ಕಮಿಶನರ್ ಅವರಿಂದ ಈ ಪ್ರತ್ಯೇಕವಾದ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಯಿತು.

1) ಮುಂಬೈ ಗ್ರಾಮೀಣ ನಿರ್ಮಲೀಕರಣ ಕಾನೂನು, 1889,
2) ಜಿಲ್ಲಾ ವ್ಯಾಕ್ಸಿನೇಶನ್ ಕಾನೂನು, 1892,
3) ಮುಂಬೈ ಜಿಲ್ಲಾ ಮುನಸಿಪಾಲಿಟಿ ಕಾನೂನು, 1901,
4) ಮುಂಬೈ ನಗರ ಯೋಜನೆ ಕಾನೂನು, 1915,
5) ಮುಂಬೈ ಲೋಕಲ್ ಬೋರ್ಡ್ ಕಾನೂನು, 1923,
6) ಮುಂಬೈ ಮುನಿಸಿಪಲ್ ಬರೋ ಕಾನೂನು, 1925,
7) ಮುಂಬೈ ಲೋಕಲ್‌ಫಂಡ್ ಆಡಿಟ್ ಕಾನೂನು 1930,
8) ಮುಂಬೈ ವಿಲೇಜ್ ಪಂಚಾಯತ್ ಕಾನೂನು 1933.

ದಕ್ಷಿಣ ವಿಭಾಗಕ್ಕೆ ಧಾರವಾಡ ಜಿಲ್ಲೆಯ ಆಡಳಿತವನ್ನು ವಹಿಸಲಾಯಿತು.

ರಾಜ್ಯ ಪುನರ್‌ಘಟನೆಯ ನಂತರ 1964 ರಲ್ಲಿ ರಾಜ್ಯ ವ್ಯಾಪ್ತಿಯ, ಏಕೀಕೃತ ಸಮಗ್ರ ಪುರಸಭೆಗಳ ಕಾನೂನನ್ನು 1964 ರಲ್ಲಿ ಜಾರಿಯಲ್ಲಿ ತರಲಾಯಿತು. ಸದರಿ ಕಾನೂನು ಜಾರಿಯಲ್ಲಿ ಬರುವ ಪೂರ್ವದಲ್ಲಿ ಅಂದರೆ 1961 ರಲ್ಲಿ ಜಿಲ್ಲೆಯಲ್ಲಿ 12 ಟೌನ್ ಮುನಸಿಪಾಲಿಟಿಗಳು, ಐದು ಪಟ್ಟಣ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಪಟ್ಟಣ ಪಂಚಾಯತಿಗಳು 1959 ರ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿಗಳ ಕಾನೂನಿನ ಅನ್ವಯ, 5,000 ಜನಸಂಖ್ಯೆಗೆ ಕಡಿಮೆ ಇಲ್ಲದ ಮತ್ತು ವಾರ್ಷಿಕ ಸರಾಸರಿ ಆದಾಯ ರೂ.10,000 ಕ್ಕಿಂತ ಕಡಿಮೆ ಇಲ್ಲದ ಪ್ರದೇಶಗಳನ್ನು ಟೌನ ಪಂಚಾಯತಿಗಳೆಂದು ವರ್ಗೀಕರಿಸಲಾಯಿತು. ಈ ಸಂಸ್ಥೆಗಳು ಗ್ರಾಮ ಪಂಚಾಯತಿ ಮತ್ತು ನಗರ ಸಭೆಗಳ ಮಧ್ಯದ ಸ್ಥಾನೀಕ ಸಂಸ್ಥೆಗಳಾಗಿದ್ದವು, ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದ್ದವು. 1959 ರ ಲೋಕಲ್ ಬೋರ್ಡ್ ಕಾನೂನಿನ ಅನ್ವಯ ಈ ಮೊದಲೇ ಅಸ್ತಿತ್ವದಲ್ಲಿ ಇದ್ದ ಯಾವುದೇ ಪಟ್ಟಣ ಮುನಸಿಪಾಲಿಟಿಯನ್ನು ಅದರ ಜನ ಸಂಖ್ಯೆ 10,000 ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಸ್ಥಳೀಯ ಸಂಸ್ಥೆಯನ್ನು ಪಟ್ಟಣ ಪಂಚಾಯತಿ ದರ್ಜೆಗೆ ಇಳಿಸಲು ಕಾನೂನಿನಲ್ಲಿ ಅವಕಾಶ ಇತ್ತು. ಅದರ ಅನ್ವಯ ಜಿಲ್ಲೆಯ ಕೆಲವು ಹಿಂದಿನ ಟೌನ ಮುನಸಿಪಾಲಿಟಿಗಳನ್ನು ಟೌನ ಪಂಚಾಯತಿಗಳನ್ನಾಗಿ ಪರಿವರ್ತಿಸಲಾಯಿತು. ಅಲ್ಲದೇ ಕೆಲವು ದೊಡ್ಡ ಗ್ರಾಮ ಪಂಚಾಯತಿಗಳನ್ನು ಟೌನ ಪಂಚಾಯತಿಯ ಮೇಲ್ದರ್ಜೆಗೆ ಏರಿಸಲಾಯಿತು. ಟೌನ ಪಂಚಾಯತಿಗಳು 11 ಕ್ಕೆ ಕಡಿಮೆ ಇಲ್ಲದಂತೆ 19 ಕ್ಕೆ ಮೀರದಂತೆ ಸದಸ್ಯರನ್ನು ಹೊಂದಲು ಅವಕಾಶ ಇತ್ತು.

## ಕೋಷ್ಟಕ 12.1 : 1881-82 ರಲ್ಲಿದ್ದಂತೆ ಅಂದಿನ ಧಾರವಾಡ ಜಿಲ್ಲೆಯಲ್ಲಿನ ಮುನಸಿಪಾಲಿಟಿಗಳ ಆದಾಯ ಮತ್ತು ಖರ್ಚಿನ ವಿವರ.

(ಮೊತ್ತ ರೂ.ನಲ್ಲಿ)

| ಮುನಸಿಪಾಲಿಟಿ | ಸ್ಥಾಪನೆಯಾದ ವರ್ಷ | ಜನಸಂಖ್ಯೆ | ಆದಾಯ | | | | ಒಟ್ಟು | ಪ್ರತಿಯೊಬ್ಬ ನಿವಾಸಿಗೆ ಸರಾಸರಿ ತೆರಿಗೆ | | |
|---|---|---|---|---|---|---|---|---|---|---|
| | | | ಜಕಾತಿ | ಮನೆಪಟ್ಟಿ | ತೋಲ ಛಕಡೀ | ಇತರ | | ರೂ. | ಆ | ಪೈ |
| ಧಾರವಾಡ | 1.1.1856 | 26,471 | 7,100 | 5,620 | 2,080 | 12,540 | 27,340 | 1 - | 0 | - 0 |
| ಹುಬ್ಬಳ್ಳಿ | 1.8.1855 | 36,641 | 14,670 | 6,280 | 5,320 | 4,580 | 30,850 | 0 - | 13 | - 4 |
| ನವಲಗುಂದ | 9.12.1870 | 7,812 | 1,810 | 1,550 | - | 7,000 | 10,360 | 1 - | 5 | - 4 |
| ನರಗುಂದ | 20.1.1871 | 7,863 | 2,840 | 1,000 | - | 520 | 4,360 | 0 - | 8 | - 8 |
| ಗದಗ | 1.5.1859 | 17,001 | 7,110 | 4,280 | - | 4,390 | 15,780 | 0 - | 14 | - 8 |
| ರಾಣೆಬೆನ್ನೂರ | 1.1.1858 | 10,748 | 2,530 | 1,580 | 520 | 490 | 5,120 | 0 - | 7 | - 8 |
| ಹಾವೇರಿ | 11.9.1879 | 5,490 | 2,420 | 950 | - | 420 | 3,790 | 0 - | 11 | - 4 |
| ಬ್ಯಾಡಗಿ | 16.9.1879 | 4,116 | 5,480 | 500 | - | 460 | 6,440 | 1 - | 9 | - 4 |
| ಹಾನಗಲ್ಲ | 1.10.1879 | 5,272 | - | 500 | - | 130 | 630 | 0 - | 2 | - 0 |
| ಒಟ್ಟು | | | 43,960 | 22,260 | 7,920 | 30,530 | 1,04,670 | | | |

(ಮೊತ್ತ ರೂ.ನಲ್ಲಿ)

| | ಖರ್ಚು | | | | | | | |
|---|---|---|---|---|---|---|---|---|
| | ಸಿಬ್ಬಂದಿ | ಸಂರಕ್ಷಣಾ | ಆರೋಗ್ಯ | ಶಾಲೆಗಳು | ಕಾಮಗಾರಿ | | ಇತರ | ಒಟ್ಟು |
| | | | | | ಹೊಸವು | ದುರಸ್ತಿ | | |
| ಧಾರವಾಡ | 7270 | 1790 | 12690 | - | 1230 | 1720 | 6150 | 30850 |
| ಹುಬ್ಬಳ್ಳಿ | 5100 | 1180 | 17660 | 760 | 2030 | 1190 | 5740 | 33710 |
| ನವಲಗುಂದ | 1150 | 40 | 4170 | - | 810 | 200 | 830 | 7200 |
| ನರಗುಂದ | 750 | 120 | 1240 | - | 680 | 20 | 2380 | 5190 |
| ಗದಗ | 3130 | 100 | 8360 | 240 | - | 1260 | 1700 | 14790 |
| ರಾಣೇಬೆನ್ನೂರ | 1570 | 90 | 1760 | 20 | 470 | 800 | 420 | 5130 |
| ಹಾವೇರಿ | 1060 | 90 | 1960 | - | 280 | 20 | 80 | 3510 |
| ಬ್ಯಾಡಗಿ | 1260 | 90 | 1610 | 10 | 2650 | - | 180 | 6800 |
| ಹಾನಗಲ್ಲ | 170 | 70 | 360 | - | 20 | 50 | 90 | 730 |
| ಒಟ್ಟು | 21460 | 3570 | 49830 | 1060 | 9200 | 5260 | 17530 | 107910 |

**ಕೋಷ್ಟಕ 12.2 : 1880-81 ರಿಂದ 1920-21 ರವರೆಗೆ ಕೆಲವು ಆಯ್ದ ವರ್ಷಗಳಿಗೆ ಸಂಬಂಧಿಸಿದಂತೆ ಅಂದಿನ ಧಾರವಾಡ ಜಿಲ್ಲೆಯಲ್ಲಿನ ಮುನಸಿಪಾಲಿಟಿಗಳ ಆದಾಯ ಮತ್ತು ಖರ್ಚಿನ ಮೊತ್ತ (ರೂ.ಗಳಲ್ಲಿ)**

| ಮುನಿಸಿಪಾಲಿಟಿಗಳು | | 1880-81 | 1893-94 | 1900-01 | 1910-11 | 1920-21 |
|---|---|---|---|---|---|---|
| ಬ್ಯಾಡಗಿ | ಆದಾಯ | 6,388 | 9,970 | 9,716 | 12,438 | 24,656 |
| | ಖರ್ಚು | 7,955 | 8,566 | 9,414 | 15,019 | 26,667 |
| ಧಾರವಾಡ | ಆದಾಯ | 21,027 | 39,393 | 50,473 | 1,59,891 | 1,53,068 |
| | ಖರ್ಚು | 19,459 | 39,076 | 47,769 | 1,51,860 | 1,43,192 |
| ಗದಗ-ಬೆಟಗೇರಿ | ಆದಾಯ | 13,991 | 26,597 | 38,497 | 95,554 | 1,95,549 |
| | ಖರ್ಚು | 12,330 | 25,601 | 39,441 | 1,01,809 | 1,21,204 |
| ಗುತ್ತ ಗುಡ್ಡಾಪುರ | ಆದಾಯ | 721 | 919 | 923 | 1,474 | 1,422 |
| | ಖರ್ಚು | 155 | 698 | 334 | 92 | 1,033 |
| ಹಾವೇರಿ | ಆದಾಯ | 3,963 | 3,711 | 4,810 | 7,287 | 15,264 |
| | ಖರ್ಚು | 3,935 | 3,845 | 4,879 | 7,011 | 15,300 |
| ಹುಬ್ಬಳ್ಳಿ | ಆದಾಯ | 30,247 | 1,14,315 | 1,02,317 | 1,51,055 | 2,77,043 |
| | ಖರ್ಚು | 30,552 | 1,25,788 | 1,07,203 | 1,92,870 | 2,71,288 |
| ನರಗುಂದ | ಆದಾಯ | 4,837 | 3,626 | 7,395 | 10,538 | 20,571 |
| | ಖರ್ಚು | 3,309 | 4,684 | 8,803 | 11,433 | 19,062 |
| ನವಲಗುಂದ | ಆದಾಯ | 4,857 | 6,010 | 6,423 | 9,507 | 14,151 |
| | ಖರ್ಚು | 3,403 | 5,457 | 7,142 | 8,268 | 13,340 |
| ರಾಣೆಬೆನ್ನೂರ | ಆದಾಯ | 4,819 | 7,129 | 8,946 | 12,129 | 31,495 |
| | ಖರ್ಚು | 5,787 | 7,911 | 8,169 | 12,274 | 30,910 |
| ಯಮನೂರು | ಆದಾಯ | - | 6,117 | 2,555 | 8,687 | 11,379 |
| | ಖರ್ಚು | - | 4,226 | 2,551 | 4,936 | 13,194 |

**ಕೋಷ್ಟಕ 12.3 ಈ ಕೆಳಗಿನ ಪಟ್ಟಿಯಲ್ಲಿ 1961 ರಲ್ಲಿ ಇದ್ದಂತೆ ಜಿಲ್ಲೆಯ ಮುನಸಿಪಾಲಟಿ ಮತ್ತು ಟೌನ ಪಂಚಾಯತಿಗಳ ವಿವರಣೆಯನ್ನು ನೀಡಲಾಗಿದೆ.**

| ಪುರಸಭೆ | ವ್ಯಾಪ್ತಿ (ಚ.ಮೈ) | ಮನೆಗಳು | ಕುಟುಂಬಗಳು | ಪಟ್ಟಣ ಪಂಚಾಯತಿ | ವ್ಯಾಪ್ತಿ (ಚ.ಮೈ) | ಮನೆಗಳು | ಕುಟುಂಬಗಳು |
|---|---|---|---|---|---|---|---|
| ಬ್ಯಾಡಗಿ | 1.50 | 2,301 | 2,306 | ಸವಣೂರು | 0.80 | 2,933 | 3,730 |
| ಧಾರವಾಡ | 6.50 | 12,472 | 13,005 | ಲಕ್ಷ್ಮೇಶ್ವರ | 1.40 | 2,829 | 2,930 |
| ಗದಗ-ಬೆಟಗೇರಿ | 4.10 | 14,508 | 14,517 | ಶಿರಹಟ್ಟಿ | 1.00 | 1,413 | 1,443 |
| ಹಾವೇರಿ | 1.50 | 3,492 | 3,621 | ಹಾನಗಲ್ | 9.40 | 1,738 | 1,741 |
| ಹುಬ್ಬಳ್ಳಿ | 9.40 | 30,246 | 31,083 | ಅಣ್ಣಿಗೇರಿ | 43.10 | 2,297 | 2,529 |
| ಕುಂದಗೋಳ | 0.20 | 1,598 | 1,683 | ಗಜೇಂದ್ರಗಡ | 6.80 | 2,682 | 2,742 |
| ನರಗುಂದ | 2.10 | 2,547 | 2,681 | ನರೇಗಲ್ಲ | 33.10 | 2,045 | 2,059 |
| ನವಲಗುಂದ | 0.30 | 1,723 | 1,985 | ರೋಣ | 24.40 | 2,073 | 2,129 |
| ರಾಣೆಬೆನ್ನೂರ | 2.50 | 5,187 | 5,254 | | | | |

## ಕರ್ನಾಟಕ ಪುರಸಭೆಗಳ ಕಾನೂನು 1964

ಪ್ರಚಲಿತ ಕಾನೂನು, ರಾಜ್ಯಪುನರ್‌ಘಟನೆಯ ನಂತರ 1965 ಏಪ್ರಿಲ್ ಒಂದರಿಂದ ಜಾರಿಯಲ್ಲಿ ಇರುವುದು. ಹೊಸ ರಾಜ್ಯದ ಪ್ರಥಮ, ಸಮಗ್ರ, ಏಕೀಕೃತ ನಗರ ಪ್ರದೇಶಗಳ ಸ್ಥಾನಿಕ ಸಂಸ್ಥೆಗಳ ಕಾನೂನು ಇದಾಗಿರುವುದು. ಸದ್ದರಿ ಕಾನೂನಿನ ಅನ್ವಯ, 20,000 ಜನಸಂಖ್ಯೆಯವರೆಗೆ 15 ಜನ ಪ್ರತಿನಿಧಿಗಳಂತೆ, ನಂತರದ ಪ್ರತೀ 10,000 ಹೆಚ್ಚಿನ ಜನಸಂಖ್ಯೆಗೆ ನಾಲ್ಕರಂತೆ ಹೆಚ್ಚಿನ ಸಂಖ್ಯೆಯ ಪ್ರತಿನಿದಿಗಳನ್ನು ಆಯ್ಕೆ ಮಾಡಬಹುದು. ಈ ಕಾನೂನಿನ ಅನ್ವಯ 10,000 ಕ್ಕಿಂತ ಹೆಚ್ಚು ಮತ್ತು 50,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಪುರಸಭೆ (ಟೌನ್ ಮುನಿಸಿಪಲ್ ಕೌನ್ಸಿಲ್), ಮತ್ತು 50,000 ಕ್ಕಿಂತ ಹೆಚ್ಚು ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರ ಪ್ರದೇಶಗಳಿಗೆ ನಗರ ಸಬೆ (ಸಿಟಿ ಮುನಿಸಿಪಾಲಿಟಿ)ಗಳನ್ನು ರಚಿಸಬಹುದಾಗಿದೆ. ಪುರಸಭೆಯ ಸದಸ್ಯರ ಮತ್ತು ಅಧ್ಯಕ್ಷರ ಆಡಳಿತ ಅವಧಿ ಐದು ವರ್ಷಗಳು. ಆದರೆ, ಸದಸ್ಯರು ಇಚ್ಛೆಪಟ್ಟಲ್ಲಿ ಪ್ರತೀವರ್ಷ ಪುರಸಭೆಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಯಾಗಬಹುದು. ನಗರ ಸಭೆಯ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಶೇ.18 ರಷ್ಟು ಪ.ಜಾ\ಪ.ಪಂ.ಗಳಿಗೆ ಮತ್ತು ಶೇ.20 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡಲು ಸೂಚಿಸಲಾಗಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಕೈಗೊಳ್ಳುವ ಅನೇಕ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಅನುಷ್ಠಾನವೂ ಪುರಸಭೆಯ ಹಲವಾರು ಆದ್ಯ ಕರ್ತವ್ಯಗಳಲ್ಲಿ ಒಂದು. ಪ್ರತೀ ಒಂದು ಪುರಸಭೆಯು ತನ್ನ ವಾರ್ಷಿಕ ಆಯವ್ಯಯದಲ್ಲಿ ಶೇ.18 ರಷ್ಟು ಹಣವನ್ನು ಪ.ಜಾ\ಪ.ಪಂ.ಗಳ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲೇಬೇಕು. ಎಲ್ಲಾ ಬಗೆಯ ಪೌರ ವಿಷಯಗಳನ್ನು ಪರಿಶೀಲಿಸಲು ಪ್ರತೀ ಒಂದು ಪುರಸಭೆಯು 12 ಜನ ಸದಸ್ಯರನ್ನು ಒಳಗೊಂಡ ಸ್ಥಾಯೀ ಸಮಿತಿಯನ್ನು ಹೊಂದಿರುವುದು. ಹಂಗಾಮಿಯಾಗಿ ಇತರ ಯಾವುದಾದರೂ ಸಮಿತಿಗಳನ್ನು ಪುರಸಭೆಯು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇರುವುದು. ಸಿಟಿ ಮುನಿಸಿಪಾಲಿಟಿಗಳಿಗೆ ಆಯುಕ್ತರು, ಮುಖ್ಯಾಧಿಕಾರಿ (ಚೀಫ್ ಆಫೀಸರ್), ಪುರಸಭೆಗಳಿಗೆ ಮುಖ್ಯ ಕಾರ್ಯನಿರ್ವಾಹಕರಾಗಿರುವರು. ರಾಜ್ಯ ಸರ್ಕಾರವು 1983 ರಲ್ಲಿ ಪುರಸಭೆಗಳ ಕಾನೂನು 1964 ಮತ್ತು ಗ್ರಾಮ ಪಂಚಾಯತಿ ಜಿಲ್ಲಾ ಬೋರ್ಡಗಳ ಕಾನೂನು 1959 ಕ್ಕೆ ವ್ಯಾಪಕ ತಿದ್ದುಪಡಿಗಳನ್ನು ತರುವ ಮೂಲಕ ಪ್ರೌಢ ಮತದಾನದ ವಯಸ್ಸನ್ನು 21 ರಿಂದ 18 ಕ್ಕೆ ಇಳಿಸಿದೆ.

ಪುರಸಭೆ\ನಗರಪಾಲಿಕೆಗಳಿಗೆ ವಹಿಸಿದ ಕಾರ್ಯಗಳನ್ನು ಕಡ್ಡಾಯ ಮತ್ತು ವಿವೇಚನಾಧೀನ ಎಂದು ಎರಡು ಬಗೆಯಲ್ಲಿ ವಿಂಗಡಿಸಲಾಗಿದೆ. ಪುರಸಭೆಯು ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿ ವಿವೇಚನಾಧೀನ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು. ಪುರಸಭೆ\ನಗರಸಭೆಗಳ ಆದಾಯದ ಮುಖ್ಯ ಮೂಲಗಳೆಂದರೆ ಆಸ್ತಿ ತೆರಿಗೆ, ವಾಹನ ಮತ್ತು ಪ್ರಾಣಿಗಳ ಮೇಲಿನ ಸುಂಕ, ನೈರ್ಮಲ್ಯ ಉಪಕರ, ನೀರಿನದರ, ದೀಪದ ತೆರಿಗೆ, ವೃತ್ತಿ, ಕಸಬು, ಉದ್ಯೋಗ ಮತ್ತು ನೌಕರಿಯ ಮೇಲಿನ ತೆರಿಗೆ, ಅಂಗಡಿ ಮುಂಗಟ್ಟುಗಳ ಮೇಲಿನ ತೆರಿಗೆ, ದಂಡದ ಹಣ, ಪುರಸಭೆಯ ಆಸ್ತಿಗಳಿಂದ ಬರುವ ಆದಾಯ ಮುಂತಾದವುಗಳು. ಇದೂ ಅಲ್ಲದೇ ಸರ್ಕಾರದಿಂದ ಬರುವ ಸಹಾಯಧನ, ಅಭಿವೃದ್ಧಿ ಹಣ, ಪ್ರವೇಶ ತೆರಿಗೆ ದೇಣಿಗೆ ಮುಂತಾದುವುಗಳೂ ಸೇರಿವೆ.

ಪುರಸಭೆಗಳ ಆದಾಯದ ಒಂದು ಬಹು ಮುಖ್ಯ ಮೂಲವಾಗಿದ್ದ ಜಕಾತಿ (ಆಕ್ಟ್ರಾಯ್)ಯನ್ನು 1979 ರಿಂದ ರದ್ದುಗೊಳಿಸಲಾಯಿತು. ಆ ನಷ್ಟವನ್ನು ರಾಜ್ಯ ಸರ್ಕಾರವು ಪುರಸಭೆಗಳಿಗೆ ಪ್ರವೇಶ ತೆರಿಗೆಯ ಮೂಲಕ ತುಂಬಿಕೊಡುತ್ತಿದೆ. ಪುರಸಭೆಗಳನ್ನು ರಚಿಸಲಿಕ್ಕಾಗದ ಪ್ರದೇಶಗಳಲ್ಲಿ ಪೌರಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ರಚಿಸಲು 1964ರ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದರ ಅನ್ವಯ ಪ್ರಾರಂಭದಲ್ಲಿ ಹಿರೇಕೆರೂರು, ಹಾನಗಲ್‌ಗಳು ಅಧಿಸೂಚಿತ ಪ್ರದೇಶಗಳಾಗಿದ್ದವು, ನಂತರ ಪುರಸಭೆಗಳಾಗಿ ಪರಿವರ್ತಿತವಾದವು. 1987ರಲ್ಲಿ ಜಿಲ್ಲಾ ಪಂಚಾಯತಿಗಳು, ಮಂಡಳ ಪಂಚಾಯತಿಗಳು ಜಾರಿಯಲ್ಲಿ ಬಂದನಂತರ ಈ ಹಿಂದೆ ಪುರಸಭೆಗಳಾಗಿದ್ದ ಕಲಘಟಗಿ, ಶಿರಹಟ್ಟಿ ಮತ್ತು ಹಿರೇಕೆರೂರುಗಳನ್ನು ಮಂಡಳ ಪಂಚಾಯತಿಗಳನ್ನಾಗಿ ಪುನರ್ ರಚಿಸಲಾಯಿತು.

1995ರಲ್ಲಿ ಜಿಲ್ಲೆಯಲ್ಲಿ ಒಂದು ಮಹಾನಗರಪಾಲಿಕೆ (ಹು.ಧಾ.ಮಹಾನಗರಪಾಲಿಕೆ), ಎರಡು ನಗರ ಸಭೆಗಳು (ಗದಗ-ಬೆಟಗೇರಿ ಮತ್ತು ರಾಣೆಬೆನ್ನೂರು) ಮತ್ತು 16 ಪುರಸಭೆಗಳು ಕಾರ್ಯನಿರ್ವಹಿಸುತ್ತಿರುವವು. ಈ ಕೆಳಗಿನ ಕೋಷ್ಟಕದಲ್ಲಿ ಜಿಲ್ಲೆಯ ನಗರಸಭೆ\ಪುರಸಭೆಗಳನ್ನು ಕುರಿತಂತೆ ಹಲವಾರು ಅವಶ್ಯ ಮಾಹಿತಿಯನ್ನು ಒದಗಿಸಲಾಗಿದೆ. ಅಲ್ಲದೆ ಮುಂದಿನ ಪುಟಗಳಲ್ಲಿ ಹು.ದಾ.ಮಹಾನಗರಪಾಲಿಕೆ, ಗದಗ-ಬೆಟಗೇರಿ ನಗರಸಭೆಯನ್ನು ಕುರಿತಂತೆ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ.

ಕೋಷ್ಟಕ 12.4 ಮುಂದಿನ ಪುಟದಲ್ಲಿ

**ಬಹುಮಾನಿತ ಪುರಸಭೆಗಳು**

ರಾಜ್ಯದ ನಗರಸಭೆಗಳು\ಪುರಸಭೆಗಳು ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಿಕೊಂಡು ನಾಗರಿಕ ಸೌಲಭ್ಯಗಳನ್ನು ಒದಗಿಸುವಲ್ಲಿ, ಸುವ್ಯವಸ್ಥಿತ ನಗರಾಡಳಿತವನ್ನು ನಡೆಸಿಕೊಂಡು ಹೋಗುವಲ್ಲಿ ಹೆಚ್ಚು ಕ್ರಿಯಾತ್ಮಕವಾಗಿ ತೊಡಗುವಂತೆ ಪ್ರೋತ್ಸಾಹಿಸಲು ರಾಜ್ಯ ಸರ್ಕಾರವು 1984 ರಿಂದ ರಾಜ್ಯ ಮಟ್ಟದಲ್ಲಿ ಮಹಾನಗರಪಾಲಿಕೆಗಳಿಗೆ, ವಿಭಾಗಮಟ್ಟದಲ್ಲಿ ನಗರಸಭೆ\ಪುರಸಭೆಗಳಿಗೆ ನಗದು ಬಹುಮಾನ ನೀಡುವ ಯೋಜನೆಯನ್ನು ಪ್ರಾರಂಭಿಸಿರುವುದು. ಈ ಯೋಜನೆಯ ಅನ್ವಯ ಆಯ್ಕೆಯಾದ ಮಹಾನಗರ ಪಾಲಿಕೆಗೆ ರೂ.25 ಲಕ್ಷ, ನಗರಸಭೆಗೆ ರೂ.15 ಲಕ್ಷ ಮತ್ತು ಪ್ರತೀ ಒಂದು ಕಂದಾಯ ವಿಭಾಗದ ಪುರಸಭೆಗೆ ರೂ.5 ಲಕ್ಷದ ನಗದು ಬಹುಮಾನ ನೀಡಲಾಗುವುದು.

ಈ ಯೋಜನೆಯ ಅನ್ವಯ, 1984-85 ರಲ್ಲಿ ಗದಗ-ಬೆಟಗೇರಿಗೆ ಅತ್ಯುತ್ತಮ ನಗರಸಭೆ, ಬ್ಯಾಡಗಿ ಪುರಸಭೆಗೆ ಬೆಳಗಾವಿ ವಿಭಾಗದ ಅತ್ಯುತ್ತಮ ಪುರಸಭೆ ಎಂಬ ಬಹುಮಾನವನ್ನು ನೀಡಲಾಯಿತು. ಅದರ ಮುಂದಿನ ವರ್ಷವೂ 1985-86 ಮತ್ತು 1986-87 ರಲ್ಲಿ ಗದಗ-ಬೆಟಗೇರಿಗೆ ಅತ್ಯುತ್ತಮ ನಗರಸಭೆಯ ಬಹುಮಾನ ದೊರೆಯಿತು. ಬ್ಯಾಡಗಿ ಪುರಸಭೆಗೆ ಅತ್ಯುತ್ತಮ ಕಾರ್ಯನಿರ್ವಹಣೆಗೆ 1986-87 ರಿಂದ 1988-89 ರವರೆಗೆ ಸತತವಾಗಿ ವಿಭಾಗ ಮಟ್ಟದಲ್ಲಿ ಬಹುಮಾನಗಳನ್ನು ನೀಡಲಾಗಿದೆ.

**ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ :** ಕೇಂದ್ರ ಸರ್ಕಾರದಿಂದ ಐದನೆಯ ಪಂಚವಾರ್ಷಿಕ ಯೋಜನೆಯ (1978-83) ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಈ ಯೋಜನೆಯ ಮುಖ್ಯ ಉದ್ದೇಶ ಒಂದು ಲಕ್ಷ ಜನ ಸಂಖ್ಯೆಗಿಂತ ಕಡಿಮೆ ಇರುವ ಜಿಲ್ಲಾ ಕೇಂದ್ರ ಸ್ಥಳಗಳು, ಮಧ್ಯಮ ಮತ್ತು ಸಣ್ಣ ಪ್ರಮಾಣದ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣ ಪ್ರದೇಶಗಳು ಮುಂತಾದವುಗಳ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದು. ಸದರಿ ಯೋಜನೆಯಲ್ಲಿ ಕೈಗೊಳ್ಳಲಾಗುವ ವಿವಿಧ ಅಭಿವೃದ್ಧಿ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರವು

## ಕೋಷ್ಟಕ 12.4

ಧಾರವಾಡ ಜಿಲ್ಲೆಯಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ಕೆಲವು ವರ್ಷಗಳ ಆದಾಯ ಮತ್ತು ಖರ್ಚು ಹಾಗೂ ಇತರೆ ಪ್ರಮುಖ ವಿಷಯಗಳ ಮಾಹಿತಿ.

| ಕ್ರ ಸಂ. | ಸಂಸ್ಥೆಗಳು | ಸ್ಥಾಪನೆಯಾದ ವರ್ಷ | ಸರಹದ್ದು (ಚ.ಕಿ.ಮಿ) 1994 | ವ್ಯಾಪ್ತಿಯಲ್ಲಿನ ಮನೆಗಳ ಸಂಖ್ಯೆ (1994) | ಆದಾಯ (ಲಕ್ಷ ರೂ.) | | | | ಖರ್ಚು (ಲಕ್ಷ ರೂ.) | | | |
|---|---|---|---|---|---|---|---|---|---|---|---|---|
| | | | | | 84-85 | 89-90 | 92-93 | 93-94 | 84-85 | 89-90 | 92-93 | 93-94 |
| | ಮಹಾನಗರಸಭೆ | | | | | | | | | | | |
| 1 | ಹುಬ್ಬಳ್ಳಿ-ಧಾರವಾಡ | 1962 | 181.77 | 1,10,700 | 664.47 | 1,425.92 | 1,689.00 | 2,641.16 | 537.22 | 1290.23 | 1,625.00 | 2,627.83 |
| | ನಗರ ಸಭೆಗಳು | | | | | | | | | | | |
| 2 | ಗದಗ-ಬೆಟಗೇರಿ | 1862 | 15.5 | 23,822 | 96.04 | 211.67 | 241.12 | 342.76 | 83.87 | 159.79 | 248.25 | 316.82 |
| 3 | ರಾಣೆಬೆನ್ನೂರು | 1858 | 6.04 | 12,505 | 56.54 | 97.01 | 177.99 | 200.08 | 67.54 | 89.91 | 145.43 | 198.90 |
| | ಪುರಸಭೆಗಳು | | | | | | | | | | | |
| 4 | ನವಲಗುಂದ | 1870 | 0.70 | 2,910 | 8.50 | 22.72 | 20.18 | 23.76 | 8.43 | 20.25 | 22.85 | 23.50 |
| 5 | ನರಗುಂದ | 1871 | 5.29 | 7,587 | 10.63 | 22.00 | 28.06 | 36.31 | 12.26 | 19.81 | 28.03 | 36.61 |
| 6 | ಹಾವೇರಿ | 1879 | 9.30 | 9.015 | 27.28 | 57.36 | 74.77 | 103.32 | 31.08 | 54.88 | 74.10 | 96.74 |
| 7 | ಬ್ಯಾಡಗಿ | 1879 | 4.50 | 5,246 | 17.67 | 29.01 | 38.85 | 49.85 | 18.37 | 30.55 | 42.18 | 48.89 |
| 8 | ಹಾನಗಲ್ | 1879 | 24.50 | 4,800 | 6.12 | 13.39 | 20.98 | 37.07 | 7.95 | 14.78 | 17.86 | 27.91 |
| 9 | ಸವಣೂರು | 1872 | 1.92 | 5,201 | 7.61 | 13.66 | 19.39 | 21.37 | 6.90 | 13.60 | 19.37 | 22.00 |
| 10 | ಕುಂದಗೋಳ | 1877 | 2.00 | 3,200 | 4.20 | 13.75 | 6.91 | 6.58 | 4.19 | 10.70 | 7.30 | 7.86 |
| 11 | ಲಕ್ಷ್ಮೇಶ್ವರ | 1877 | | 6,100 | 15.75 | 24.93 | 27.15 | 24.06 | 12.66 | 22.06 | 26.12 | 22.86 |
| 12 | ಆಳ್ನಾವರ | 1973 | 10.00 | 3,427 | 12.73 | 22.93 | 30.69 | 40.72 | 10.83 | 25.53 | 28.85 | 29.42 |
| 13 | ನರೇಗಲ್ | 1973 | 2.60 | 3,806 | 1.46 | 3.26 | 4.62 | 6.72 | 1.55 | 3.34 | 4.85 | 8.38 |
| 14 | ಮುಂಡರಗಿ | 1973 | 42.05 | 4,225 | 5.48 | 11.19 | 14.03 | 15.55 | 5.61 | 10.11 | 13.99 | 15.08 |

| ಕ್ರ ಸಂ. | ಸಂಸ್ಥೆಗಳು | ಸ್ಥಾಪನೆಯಾದ ವರ್ಷ | ಸರಹದ್ದು (ಚ.ಕಿ.ಮಿ) 1994 | ವ್ಯಾಪ್ತಿಯಲ್ಲಿನ ಮನೆಗಳ ಸಂಖ್ಯೆ (1994) | ಆದಾಯ (ಲಕ್ಷ ರೂ.) | | | | ಖರ್ಚು (ಲಕ್ಷ ರೂ.) | | | |
|---|---|---|---|---|---|---|---|---|---|---|---|---|
| | | | | | 84-85 | 89-90 | 92-93 | 93-94 | 84-85 | 89-90 | 92-93 | 93-94 |
| 15 | ಶಿಗ್ಗಾಂವಿ | 1973 | 9.00 | 4,244 | 4.95 | 11.77 | 10.52 | 13.35 | 5.84 | 13.04 | 11.48 | 13.30 |
| 16 | ರೋಣ | 1973 | 10.39 | 4,219 | 6.09 | 12.11 | 11.10 | 10.77 | 6.09 | 12.11 | 10.77 | 10.65 |
| 17 | ಗಜೇಂದ್ರಗಡ | 1973 | 18.82 | 4,600 | 6.02 | 9.99 | 14.89 | 17.50 | 5.03 | 9.76 | 13.62 | 18.33 |
| 18 | ಮುಳಗುಂದ | 1973 | 13.00 | 3,241 | 3.07 | 4.09 | 5.33 | 7.36 | 4.45 | 4.95 | 5.72 | 7.57 |
| 19 | ಅಣ್ಣಿಗೇರಿ | 1973 | - | - | - | - | - | - | - | - | - | - |

ಆಧಾರ: ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ವರದಿ.

ಅರ್ಧದಷ್ಟು ವೆಚ್ಚವನ್ನು ಭರಿಸುವುದು. ಈ ಯೋಜನೆಯ ಅನ್ವಯ ಧಾರವಾಡ ಜಿಲ್ಲೆಯಲ್ಲಿ ಬ್ಯಾಡಗಿ ಮತ್ತು ಹಾವೇರಿ ಪುರಸಭೆಗಳು ಹಲವಾರು ಯೋಜನೆಗಳನ್ನು ರೂಪಿಸಿವೆ.

**ತಲಾ ಆದಾಯ ವೆಚ್ಚಗಳು :** ಪುರಸಭೆಗಳು ನಿರ್ದೇಶನಾಲಯದ ಆಡಳಿತ ವರದಿ ತಿಳಿಸುವಂತೆ 1980-81, 81-82, 82-83 ರ ಅವಧಿಯಲ್ಲಿ ಈ ಜಿಲ್ಲೆಯ ನಗರಸಭೆ\ಪುರಸಭೆಗಳ ತಲಾ ಆದಾಯ ಅನುಕ್ರಮವಾಗಿ ರೂ.40.31, 39.25 ಮತ್ತು ರೂ.62.05 ಆಗಿದ್ದರೆ, ತಲಾ ವೆಚ್ಚವು ಅನುಕ್ರಮವಾಗಿ ರೂ.30.49, ರೂ.32.46 ಮತ್ತು ರೂ.38.30 ಎಂದು ತಿಳಿದುಬರುವುದು.

### ನಗರ ಪ್ರವೇಶ ತೆರಿಗೆ

ಭಾರತದಲ್ಲಿ ವ್ಯಾಪಾರಿ ವಸ್ತುಗಳ ಮೇಲೆ ನಗರ ಪ್ರವೇಶ ಸುಂಕವನ್ನು (ಅಕ್ಟ್ರಾಯ್; ಜಕಾತಿ) ರದ್ದುಪಡಿಸಿದ ಹಲವು ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ರಾಜ್ಯಾದ್ಯಂತ 1979 ಏಪ್ರಿಲ್ ಒಂದರಿಂದ ವ್ಯಾಪಾರಿ ಸರಕುಗಳ ಮೇಲೆ ನಗರ ಪ್ರವೇಶ ಸುಂಕವನ್ನು ರದ್ದುಪಡಿಸಲಾಯಿತು. ಇದರಿಂದ ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ಆದಾಯದಲ್ಲಿ ಗಣನೀಯ ಪ್ರಮಾಣದ ಕೊರತೆ ಉಂಟಾಯಿತು. ಅನೇಕ ಪುರಸಭೆಗಳು ಹಣಕಾಸಿನ ಕೊರತೆಯಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಪೂರ್ಣವಾಗಿ ಸರ್ಕಾರವನ್ನೇ ಅವಲಂಬಿಸುವಂತಾಗಿದೆ. ಈ ಕೊರತೆಯನ್ನು ತುಂಬಿಕೊಡಲು ರಾಜ್ಯ ಸರ್ಕಾರವು 1979 ರ ಸ್ಥಳೀಯ ಪ್ರದೇಶಗಳ ಅನುಭೋಗ, ಉಪಯೋಗ, ಅಥವಾ ಮಾರಾಟ ವಸ್ತುಗಳ ಮೇಲೆ ಪ್ರವೇಶ ತೆರಿಗೆ ಅಧಿನಿಯಮದ ಅನ್ವಯ ತೆರಿಗೆಯನ್ನು ಸಂಗ್ರಹಿಸಿ ಅಕ್ಟ್ರಾಯ ಅನುದಾನದ ಮೂಲಕ ಸ್ಥಾನಿಕ ಸಂಸ್ಥೆಗಳಿಗೆ ನೀಡುತ್ತಿದೆ. 1987 ರಿಂದ ಮಂಡಳ ಪಂಚಾಯತಿಗಳಿಗೂ ಅಕ್ಟ್ರಾಯ ಅನುದಾನ ನೀಡಲಾಗುತ್ತಿದೆ. 1992 ರಿಂದ ಸರ್ಕಾರವು ಪ್ರವೇಶ ತೆರಿಗೆಯನ್ನು 80 ವಿವಿಧ ಬಗೆಯ ವಸ್ತುಗಳ ಮೇಲೆ ಶೇ.ಒಂದರಿಂದ 5 ರ ಪ್ರಮಾಣದಲ್ಲಿ ವಿಧಿಸುತ್ತಿದೆ. ಈ ಕಾನೂನಿನ ಅನ್ವಯ ವಾರ್ಷಿಕ ರೂ.75,000 ಕ್ಕಿಂತ ಹೆಚ್ಚು ವಹಿವಾಟು ನಡೆಸುವ ವರ್ತಕರು ನೋಂದಾಯಿಸಿಕೊಳ್ಳಬೇಕು. ಜನಸಾಮಾನ್ಯರು ದಿನನಿತ್ಯ ಬಳಸುವ 23 ವಸ್ತುಗಳಿಗೆ ಪ್ರವೇಶ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಧಾರವಾಡ ಜಿಲ್ಲೆಯಲ್ಲಿ 1992-93, 91-92 ಮತ್ತು 1990-91 ರಲ್ಲಿ ಸಂದಾಯವಾದ ಪ್ರವೇಶ ತೆರಿಗೆಯ ಮೊತ್ತ ಅನುಕ್ರಮವಾಗಿ ರೂ.474.84, ರೂ. 369.28 ಮತ್ತು ರೂ.317.77 ಲಕ್ಷ ಎಂದು ತಿಳಿದು ಬರುವುದು.

## ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ

ಅನುಕ್ರಮವಾಗಿ 1855 ಮತ್ತು 1856 ರಲ್ಲಿ ಪ್ರಾರಂಭಿಸಲ್ಪಟ್ಟ ಹುಬ್ಬಳ್ಳಿ ಮತ್ತು ಧಾರವಾಡಗಳ ಪ್ರತ್ಯೇಕ ಪುರಸಭೆಗಳನ್ನು ಒಂದುಗೂಡಿಸಿ 1962 ರಲ್ಲಿ ಮಹಾನಗರಪಾಲಿಕೆಯನ್ನಾಗಿ ರಚಿಸಲಾಯಿತು. ಪರಸ್ಪರ ಸುಮಾರು 20 ಕಿ.ಮಿ. ದೂರದಲ್ಲಿರುವ ಅವಳಿ ನಗರಗಳಾದ ಹುಬ್ಬಳ್ಳಿ ಧಾರವಾಡಗಳನ್ನು ಒಳಗೊಂಡ ಈ ಮಹಾನಗರ ಪಾಲಿಕೆಯು ರಾಜ್ಯದ ಎರಡನೆಯ ದೊಡ್ಡ ಮಹಾನಗರಪಾಲಿಕೆಯಾಗಿರುವುದು (ಕಾರ್ಪೊರೇಷನ್). ಮಹಾನಗರ ಪಾಲಿಕೆ ರಚನೆಗೊಂಡ ನಂತರ ಧಾರವಾಡ ತಾಲ್ಲೂಕಿನ 21 ಗ್ರಾಮಗಳು, ಹುಬ್ಬಳ್ಳಿ ತಾಲ್ಲೂಕಿನ 24 ಗ್ರಾಮಗಳು 1964 ರಲ್ಲಿ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಸೇರಿದವು. ಈ ಗ್ರಾಮಗಳ ಪೈಕಿ 18 ಹಳ್ಳಿಗಳು ನಗರ ಪ್ರದೇಶದ ಹೊರವಲಯದಲ್ಲಿವೆ. 1992-93 ರಲ್ಲಿ ಇದ್ದಂತೆ ಮಹಾನಗರ ಪಾಲಿಕೆಯ ವಿಸ್ತೀರ್ಣ 181.77 ಚ.ಕಿ.ಮಿ.ಗಳು (ವಿಸ್ತೀರ್ಣಮಾನದಿಂದ ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ಮಹಾನಗರಪಾಲಿಕೆ ಇದಾಗಿದೆ). ಜನಸಂಖ್ಯೆ 6,48,298 (1991), ಮನೆಗಳ ಸಂಖ್ಯೆ 1,10,700 ಎಂದು ವರದಿಯಾಗಿದೆ. 1993-94 ರಲ್ಲಿದ್ದಂತೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಸತಿ ಗೃಹಗಳ ಸಂಖ್ಯೆ 1,17,383 (ಹುಬ್ಬಳ್ಳಿ ವಿಭಾಗ- 89,433; ಧಾರವಾಡ ವಿಭಾಗ- 27,950) ಹಾಗೂ ವಸತಿಯೇತರ ಗೃಹಗಳ ಸಂಖ್ಯೆ 12,650 (ಹುಬ್ಬಳ್ಳಿ ವಿಭಾಗ- 10,783; ಧಾರವಾಡ ವಿಭಾಗ- 1,867). ಮಹಾನಗರ ಪಾಲಿಕೆ ತಲಾ ಆದಾಯ, ತಲಾ ವೆಚ್ಚ ಮತ್ತು ಕರಭಾರ 1993-94 ರಲ್ಲಿದ್ದಂತೆ ಕ್ರಮವಾಗಿ ರೂ.284, ರೂ.311 ಮತ್ತು ರೂ.73 ಆಗಿತ್ತು.

ಮಹಾನಗರ ಪಾಲಿಕೆಗೆ ಇತ್ತೀಚಿನ ಚುನಾವಣೆಗಳು ಏಪ್ರಿಲ್ 1990 ರಲ್ಲಿ ನಡೆದವು. ಚುನಾಯಿತ ಸದಸ್ಯರ ಸಂಖ್ಯೆ 57. ಅವ್ಪೈಕಿ ಪಜಾ\ಪ.ಪಂ. ಮತ್ತು ಮಹಿಳೆಯರಿಗೆ ಮೀಸಲಾದ ಸ್ಥಾನಗಳ ಸಂಖ್ಯೆ ಕ್ರಮವಾಗಿ 4 ಮತ್ತು 11. ಪುರಸಭೆಗಳಾಗಿ ಪ್ರಾರಂಭಿಸಲ್ಪಟ್ಟ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು 1883 ರಲ್ಲಿ ನಗರಸಭೆಗಳಾಗಿ, 1926 ರಲ್ಲಿ ಬರೋ ಮುನಸಿಪಾಲಿಟಿಗಳಾದವು. 1951 ರಲ್ಲಿ

ಹುಬ್ಬಳ್ಳಿ ನಗರ ವಿಸ್ತೀರ್ಣ 18.12 ಚ.ಕಿ.ಮಿ. ಆಗಿದ್ದರೆ, ಧಾರವಾಡ ನಗರದ ವಿಸ್ತೀರ್ಣವು 36.25 ಚ.ಕಿ.ಮಿ.ಗಳಾಗಿತ್ತು. ಸದರಿ ವರ್ಷದಲ್ಲಿ (1951) ಹುಬ್ಬಳ್ಳಿ ನಗರದ ಜನಸಂಖ್ಯೆ 1,29,609 ಆಗಿದ್ದರೆ ಧಾರವಾಡ ನಗರದ ಜನಸಂಖ್ಯೆ 66,571 ಆಗಿತ್ತು. ಧಾರವಾಡ ನಗರದಲ್ಲಿ 10,174 ಮನೆಗಳಿದ್ದರೆ ಹುಬ್ಬಳ್ಳಿಯಲ್ಲಿ 14,092 ಮನೆಗಳಿದ್ದವು. 1951 ರಲ್ಲಿ ಹುಬ್ಬಳ್ಳಿ ನಗರಸಭೆಯ ಚುನಾಯಿತ ಸದಸ್ಯರ ಸಂಖ್ಯೆ 42 ಆಗಿದ್ದರೆ ಅದರಲ್ಲಿ ನಾಲ್ಕು ಸ್ಥಾನಗಳನ್ನು ಮಹಿಳೆಯರಿಗೆ, ಮೂರು ಸ್ಥಾನಗಳನ್ನು ಪ.ಜಾತಿಯವರಿಗೆ ಮೀಸಲಿಡಲಾಗಿತ್ತು. ಧಾರವಾಡ ಪುರಸಭೆಯ ಸದಸ್ಯರ ಸಂಖ್ಯೆ ಐದು ಕಾಯ್ದಿಟ್ಟ ಸ್ಥಾನಗಳನ್ನು ಒಳಗೊಂಡಂತೆ 38 ಆಗಿತ್ತು.

**ನಗರ ರಚನೆ:** ಹುಬ್ಬಳ್ಳಿ ಪುರಸಭೆಯಲ್ಲಿ ಹಿಂದಿನ 11 ಗ್ರಾಮಗಳು ಸೇರಿದ್ದವು (ಕೊನೇಯ ಅಧ್ಯಾಯ ನೋಡಿ). ಧಾರವಾಡ ಪುರಸಭೆಯಲ್ಲಿ (1) ಹಳೆಯ ಕಿಲ್ಲಾ ಪ್ರದೇಶ, 2) ಕಸಬಾ 3) ಬಡಾವಣೆಗಳು ಮತ್ತು 4) ಸುತ್ತಮುತ್ತಲಿನ ಗ್ರಾಮಗಳು (ಸಬರ್ಬನ್) ಎಂದು ವಿಭಾಗಿಸಲ್ಪಟ್ಟಿತ್ತು. ಮುಂದೆ 12 ಹಳ್ಳಿಗಳನ್ನು ಸೇರಿಸಲಾಯಿತು. ಅವಳಿನಗರಗಳಿಗೆ ಹೊಂದಿಕೊಂಡಂತೆ ಅನೇಕ ಹೊಸ ಬಡಾವಣೆಗಳು ರಚನೆಗೊಂಡಿರುವವು. ರಾಜ್ಯಪುನರ್ ಘಟನೆಗೆ ಪೂರ್ವದಲ್ಲಿ 1953 ರಲ್ಲಿ ಅಂದಿನ ಮುನಸಿಪಾಲಿಟಿ ಕಾಯಿದೆಯ ಪ್ರಕಾರ ಚೀಫ್ ಆಫೀಸರ್, ಆರೋಗ್ಯಾಧಿಕಾರಿ ಮತ್ತು ಇಂಜನಿಯರ್ ಇವರು ನಗರ ಸಭೆಯ ಪ್ರಮುಖ ಶಾಸನಬದ್ಧ ಅಧಿಕಾರಿಗಳಾಗಿದ್ದರು. ಸದರಿವರ್ಷ ಹುಬ್ಬಳ್ಳಿ ನಗರಸಭೆಯ ಆಡಳಿತ ವ್ಯವಸ್ಥೆಯು 9 ವಿವಿಧ ಆಡಳಿತ ವಿಭಾಗಗಳನ್ನು ಹೊಂದಿತ್ತು. ನಗರಸಭೆಯು ಒಟ್ಟು ಆದಾಯ 1952-53 ರಲ್ಲಿ ರೂ.23.35 ಲಕ್ಷ ಆಗಿದ್ದರೆ, ಆದಾಯದ ಬಹುಪಾಲು, ರೂ.6.74 ಲಕ್ಷ ಆಕ್ಟ್ರಾಯ ಮೂಲದಿಂದ, ರೂ.6.35 ಲಕ್ಷ ಮನೆ ಮತ್ತು ಭೂ ಕಂದಾಯದಿಂದ ಸಂಗ್ರಹವಾಗಿತ್ತು. ಸದರಿ ವರ್ಷದ ಒಟ್ಟು ವೆಚ್ಚ ರೂ.24.66 ಲಕ್ಷಗಳಲ್ಲಿ, ರೂ.12.27 ಲಕ್ಷ ಸಾರ್ವಜನಿಕ ಆರೋಗ್ಯ ಮತ್ತು ಸೌಕರ್ಯಗಳಿಗೆ, ರೂ.5.75 ಲಕ್ಷ ಸಾರ್ವಜನಿಕ ಶಿಕ್ಷಣ, ರೂ.3.81 ಲಕ್ಷ ಸಾಮಾನ್ಯ ಆಡಳಿತದ ವೆಚ್ಚವಾಗಿದ್ದವು ಎಂದು ತಿಳಿದುಬರುವುದು. ಸದರಿ ವರ್ಷದಲ್ಲಿ ಸರಾಸರಿ ತಲಾ ಕಂದಾಯ ರೂ.11.56 ಆಗಿದ್ದರೆ ಸರಾಸರಿ ತಲಾ ಆದಾಯ ರೂ.18.06.

1952-1953 ರಲ್ಲಿ ಧಾರವಾಡ ಮುನಿಸಿಪಲ್ ಬರೋದ ಆದಾಯ ವೆಚ್ಚಗಳು ಅನುಕ್ರಮವಾಗಿ ರೂ.10.40 ಲಕ್ಷ ಮತ್ತು ರೂ.11.81 ಲಕ್ಷ ಎಂದು ತಿಳಿದುಬರುವುದು. ಸದರಿವರ್ಷದಲ್ಲಿ ಧಾರವಾಡ ನಗರಸಭೆಯ ಸರಾಸರಿ ತಲಾ ಕಂದಾಯ ರೂ.7.56 ಆಗಿದ್ದರೆ ಸರಾಸರಿ ತಲಾ ಆದಾಯ ರೂ.11.53 ಎಂದು ತಿಳಿದುಬರುವುದು.

**ನೀರು ಪೂರೈಕೆ :** ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಧಾರವಾಡ ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಐದಾರು ಸ್ಥಳೀಯ ಕೆರೆಗಳಿಂದ ಆಗುತ್ತಿತ್ತು. ಹಿರೇಕೆರೆ, ಕೊಪ್ಪದಕೆರೆ, ಹಾಲಕೆರೆ ಮುಂತಾದವುಗಳು ಪ್ರಮುಖವಾಗಿದ್ದವು. ಇವು ಅಲ್ಲದೇ ಹಲವಾರು ಹೊಕ್ಕು ತುಂಬುವ ಭಾವಿಗಳು ಇದ್ದವು. ಧಾರವಾಡದಲ್ಲಿ ಸುಮಾರು ಒಂದು ನೂರು ವರ್ಷದ ಹಿಂದೆ ನೀರಿನ ಬರವಿದ್ದಾಗ ಎರಡು ಆಣೆಗೆ ಒಂದು ಕೊಡ ನೀರು ದೊರೆಯುವುದು ಕಷ್ಟವಾಗುತ್ತಿತ್ತು; ನೀರು ಹಾಕುವವರು ತಿಂಗಳಿಗೆ 20 ರಿಂದ 30 ರೂಪಾಯಿವರೆಗೆ ಸಂಪಾದಿಸುತ್ತಿದ್ದರು ಎಂದು 1884 ರ ಗ್ಯಾಸೆಟಿಯರ್‌ನಲ್ಲಿ ನಮೂದಿಸಲಾಗಿದೆ.

1908 ರಲ್ಲಿ ಕೆಲಗೇರಿ ಕೆರೆಯಿಂದ ನಗರಕ್ಕೆ ನಳದ ಮೂಲಕ ನೀರು ಸರಬರಾಜು ಮಾಡುವ ಯೋಜನೆಯನ್ನು ಪ್ರಾರಂಭಿಸಿ 1911 ರಲ್ಲಿ ಸಂಪೂರ್ಣಗೊಳಿಸಲಾಯಿತು. ಈ ಯೋಜನೆಯ ರೂವಾರಿ ಅಂದಿನ ಮುಂಬೈ ಸರ್ಕಾರದಲ್ಲಿ ಸ್ಯಾನಿಟರಿ ಇಂಜನೀಯರ್ ಆಗಿದ್ದ ಡಾ. ಸರ್.ಎಂ. ವಿಶ್ವೇಶ್ವರಯ್ಯನವರು. ಈ ಯೋಜನೆಯನ್ನು 1911 ರಲ್ಲಿ ರೂ.4.75 ಲಕ್ಷ ವೆಚ್ಚದಲ್ಲಿ ಪೂರೈಸಲಾಯಿತು. ಹೊಸಹುಬ್ಬಳ್ಳಿಯಲ್ಲಿ 18 ನೇ ಶತಮಾನದ ಪ್ರಾರಂಭದಲ್ಲಿ ತಿರುಕಾರಾಮನೆಂಬ ರಜಪೂತನು ಕಟ್ಟಿಸಿದ ಕೆರೆಯು ಕುಡಿಯುವ ನೀರಿನ ಪ್ರಮುಖ ಮೂಲವಾಗಿತ್ತು. ಮುನಸಿಪಾಲಟಿ ರಚನೆಗೊಂಡ ನಂತರ ಕೆರೆಯನ್ನು ಹಲವಾರು ಭಾರಿ ವಿಸ್ತರಿಸಲಾಯಿತು. 1881 ರ ಸುಮಾರಿಗೆ ಕೆರೆಯ ವಿಸ್ತೀರ್ಣ ಸುಮಾರು 59 ಎಕರೆ ಆಗಿತ್ತು. ಈ ಕೆರೆಯ ನೀರು ಗುರುಸಿದ್ದಪ್ಪನ ಹೊಂಡಕ್ಕೆ ಹೋಗಿ (ಮೂರುಸಾವಿರ ಮಠದ ಹೊಂಡ) ಅಲ್ಲಿಂದ ಭೂಸಪೇಟೆಯ ಹೊಂಡಕ್ಕೆ ಹೋಗುವ ವ್ಯವಸ್ಥೆ ಇತ್ತೆಂದು ದಾಖಲೆಯಿಂದ ತಿಳಿದುಬರುವುದು. ಇದೂ ಅಲ್ಲದೇ ಹೊಸಹುಬ್ಬಳ್ಳಿಯಲ್ಲಿ 386 ಸಿಹಿನೀರಿನ ಬಾವಿಗಳು, 250 ಸೌಳು ನೀರಿನ ಬಾವಿಗಳು ಇದ್ದುದಾಗಿ ತಿಳಿದುಬರುವುದು. ಹಳೇ ಹುಬ್ಬಳ್ಳಿಯಲ್ಲಿ ಕೃಷ್ಣಾಪುರದ ಹೆಗ್ಗೆರೆ, ಭವಾನಿ ಶಂಕರ ಗುಡಿಯ ಹತ್ತಿರದ ಹೊಂಡ, ನೀರು ಪೂರೈಕೆಯ ಪ್ರಮುಖ ತಾಣಗಳಾಗಿದ್ದವು ಎಂದು ಹಳೆಯ ದಾಖಲೆಗಳಿಂದ ತಿಳಿದುಬರುವುದು. ಇದೂ ಅಲ್ಲದೇ ಹಳೇಹುಬ್ಬಳ್ಳಿಯಲ್ಲಿ ಸುಮಾರು ಒಂದುನೂರು ಸಿಹಿ ನೀರಿನ

ಭಾವಿಗಳು, 150 ಸವಳುನೀರಿನ ಭಾವಿಗಳು ಇದ್ದವು. ಹುಬ್ಬಳ್ಳಿ ನಗರಕ್ಕೆ ನಳದ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲು 1881 ರಲ್ಲಿ ಉಣಕಲ್ ಕೆರೆಯನ್ನು ನಿರ್ಮಿಸಲಾಯಿತು. ಮುನಸಿಪಾಲಟಿಯವರು, ರೇಲ್ವೆ ಕಂಪನಿಯವರು ಜಂಟೀಯಾಗಿ ಈ ಯೋಜನೆಯನ್ನು ಪ್ರಾರಂಭಿಸಿದರು. 1892 ರ ಸುಮಾರಿಗೆ ನಳದ ನೀರನ್ನು ಪೂರೈಸಿದರು. ಕೆರೆಯ ಜಲಾವೃತ ಪ್ರದೇಶದ ವಿಸ್ತೀರ್ಣ 18 ಚ.ಮೈಲುಗಳಾಗಿದ್ದು ಕೆರೆಯು ಪೂರ್ಣ ತುಂಬಿದಾಗ ಸುಮಾರು 150 ದಶಲಕ್ಷ ಘನ ಅಡಿ ನೀರು ಸಂಗ್ರಹವಾಗುವುದು. ಈ ಕೆರೆಯಿಂದ ಹುಬ್ಬಳ್ಳಿ ನಗರಕ್ಕೆ 1951 ರಲ್ಲಿ ಪ್ರತಿದಿನ ಸುಮಾರು ಒಂದು ದಶಲಕ್ಷ ಗ್ಯಾಲನ್ನುಗಳಷ್ಟು ನೀರು ಪೂರೈಕೆಯಾಗುತ್ತಿತ್ತು (ಸರಾಸರಿ 8 ಗ್ಯಾಲನ್) ಎಂದು ವರದಿಯಾಗಿದೆ. ಅಲ್ಲದೇ ನಗರದಲ್ಲಿ ಸುಮಾರು 530 ಸಾರ್ವಜನಿಕ ಮತ್ತು ಖಾಸಗಿ ಭಾವಿಗಳು ಇದ್ದುದಾಗಿ ತಿಳಿದು ಬರುವುದು. ಹುಬ್ಬಳ್ಳಿ ರೇಲ್ವೆ ಇಲಾಖೆಯವರು ದೇವರ ಗುಡಿಹಾಳ ಕೆರೆಯಿಂದ ಪ್ರತ್ಯೇಕವಾಗಿ ನೀರು ಪೂರೈಕೆ ವ್ಯವಸ್ಥೆಯನ್ನು ಮಾಡಿಕೊಂಡಿರುವರು.

**ನೀರಸಾಗರ ಯೋಜನೆ :** ಬೆಳೆಯುತ್ತಿರುವ ಅವಳಿ ನಗರಗಳ ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು 1955 ರಲ್ಲಿ ನೀರಸಾಗರ (ಧಾರವಾಡದಿಂದ 10 ಕಿ.ಮಿ.) ಮೊದಲನೇಯ ಹಂತದ ಯೋಜನೆಯನ್ನು ಪೂರೈಸಲಾಯಿತು. ಈ ಯೋಜನೆಯನ್ನು 1948 ರಲ್ಲಿ ಮುಂಬೈ ಸರ್ಕಾರ ಮಂಜೂರು ಮಾಡಿದಾಗ ಅದರ ವೆಚ್ಚ ರೂ.141 ಲಕ್ಷ. ಈ ಯೋಜನೆಯು ಪೂರ್ಣಗೊಂಡಾಗ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಪ್ರತಿದಿನ ಸರಾಸರಿ ತಲಾ 20 ಗ್ಯಾಲನ್ನುಗಳಷ್ಟು ನೀರು ಪೂರೈಸಲು ಅನುಕೂಲವಾಯಿತು.

ಹುಬ್ಬಳ್ಳಿ-ಧಾರವಾಡ ನಗರಗಳ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಹೆಚ್ಚುತ್ತಿರುವ ಔದ್ಯಮೀಕರಣ ಬೆಳವಣಿಗೆಯನ್ನು ಪರಿಗಣಿಸಿ ಧಾರವಾಡದಿಂದ 40 ಕಿ.ಮಿ.ದೂರದ ಸವದತ್ತಿಯ ಮಲಪ್ರಭಾ ಜಲಾಶಯದಿಂದ ಮಹಾನಗರಗಳಿಗೆ ನೀರು ಪೂರೈಸುವ ಯೋಜನೆಯನ್ನು 1975ರಲ್ಲಿ ಕೈಗೆತ್ತಿಕೊಂಡು 1983 ರಲ್ಲಿ ಪೂರ್ಣಗೊಳಿಸಲಾಯಿತು. ಈ ಯೋಜನೆಯ ವೆಚ್ಚ ರೂ.1175 ಲಕ್ಷ. ಸದ್ಯ ಅವಳಿ ನಗರಗಳಿಗೆ ಮೂರು ಮೂಲಗಳಿಂದ ಪ್ರತಿದಿನ 170 ಲಕ್ಷ ಗ್ಯಾಲನ ನೀರು ಲಭ್ಯವಾಗುತ್ತದೆ. (ಉಣಕಲ್ ಜಲಾಶಯ 10 ಲಕ್ಷ ಗ್ಯಾಲನ್, ನೀರಸಾಗರ 85 ಲಕ್ಷ ಗ್ಯಾಲನ್, ಮಲಪ್ರಭೆಯಿಂದ 75 ಲಕ್ಷ). ಸದ್ಯ ಈ ಮೂರು ಪ್ರಚಲಿತ ಯೋಜನೆಗಳಿಂದ ಪ್ರತಿದಿನ ಸರಾಸರಿ ತಲಾ 24 ಗ್ಯಾಲನ್ ನೀರಿನ ಪೂರೈಕೆಯಾಗುವುದು. ಇತ್ತೀಚಿನ ವರ್ಷಗಳಲ್ಲಿ ಬೇಸಿಗೆಯಲ್ಲಿ ನೀರಿನ ಪೂರೈಕೆ ಅಸಮರ್ಪಕವಾಗಿರುವುದರಿಂದ ಮಲಪ್ರಭಾ ಎರಡನೇ ಹಂತದ ಯೋಜನೆಯನ್ನು 1990 ರಲ್ಲಿ ಕೈಗೊಳ್ಳಲಾಗಿದೆ. ಇಲ್ಲಿಯವರೆಗೆ ಈ ಯೋಜನೆಗೆ ಮಾಡಿರುವ ವೆಚ್ಚ ರೂ.540.28 ಲಕ್ಷ. ಇದೂ ಅಲ್ಲದೇ ನಗರದ ಹಲವಾರು ಪ್ರದೇಶಗಳಲ್ಲಿ ಸುಮಾರು 264 ಕೊಳವೆ ಬಾವಿಗಳನ್ನು ತೋಡಿಸಿದ್ದು ಅವುಗಳಿಂದ ದಿನಂಪ್ರತಿ ಸುಮಾರು 9 ಲಕ್ಷ ಗ್ಯಾಲನ್ ನೀರು ಲಭ್ಯವಾಗುತ್ತದೆಂದು ತಿಳಿದು ಬರುವುದು. ಮಹಾನಗರ ಪಾಲಿಕೆಯ ಸರಹದ್ದಿನಲ್ಲಿರುವ ಒಟ್ಟು ನಲ್ಲಿ ಸಂಪರ್ಕ ಸಂಖ್ಯೆ 1993-94 ರಲ್ಲಿದ್ದಂತೆ 47,605. ಗೃಹಬಳಕೆ ಯವುಗಳಾಗಿದ್ದರೆ, 3,034 ಗೃಹೇತರ ಬಳಕೆ ನಲ್ಲಿಗಳಾಗಿದ್ದವು. ನೀರಿನ ಕರ ರೂಪದಲ್ಲಿ 1993-94 ರಲ್ಲಿದ್ದಂತೆ ಮಹಾನಗರಪಾಲಿಕೆ ಆದಾಯ 129.88 ಲಕ್ಷ ರೂ ಆಗಿದ್ದು, ನಿರ್ವಹಣಾ ವೆಚ್ಚ ಮತ್ತು ಸಿಬ್ಬಂದಿ ವೆಚ್ಚ ಕ್ರಮವಾಗಿ 77.97 ಲಕ್ಷ ರೂ ಮತ್ತು 80.47 ಲಕ್ಷ ರೂ. ಆಗಿತ್ತು.

**ಒಳಚರಂಡಿ :** ಹುಬ್ಬಳ್ಳಿಯಲ್ಲಿ 1958 ರಿಂದ, ಧಾರವಾಡದಲ್ಲಿ 1960 ರಿಂದ ಒಳಚರಂಡಿ ಯೋಜನೆಯನ್ನು ಕೈಗೊಳ್ಳಲಾಗಿದೆ. 1974 ರಲ್ಲಿ ಮಾನವಗೌರವ (ಹ್ಯೂಮನ್ ಡಿಗ್ನಿಟಿ) ಯೋಜನೆಯ ಅನ್ವಯ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ನಗರದ ಭಂಗೀ ಪಾಯಖಾನೆಗಳನ್ನು ಒಳಚರಂಡಿಗೆ ಜೋಡಿಸಿ ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ನಿಲ್ಲಿಸಲಾಯಿತು. ಒಂದು ವರದಿಯ ಪ್ರಕಾರ ನಗರ ಪ್ರದೇಶದಲ್ಲಿ ಶೇ.30 ಕ್ಕಿಂತ ಹೆಚ್ಚು ವಸತಿ ಪ್ರದೇಶಗಳಿಗೆ ಒಳಚರಂಡಿಯ ಸೌಕರ್ಯ ಇರುವುದಿಲ್ಲ.

**ಇತರ ಸೌಲಭ್ಯಗಳು :** ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಇರುವ ಒಟ್ಟು ರಸ್ತೆಗಳ ಉದ್ದ 591 ಕಿ.ಮಿ. ಅದರಲ್ಲಿ 446 ಕಿ.ಮಿ. ಪಕ್ಕಾರಸ್ತೆ ಇದ್ದರೆ, 145 ಕಿ.ಮಿ. ಡಾಂಬರ ರಸ್ತೆ ಇರುವುದು. 1962 ರಲ್ಲಿ ಇದ್ದ ಒಟ್ಟು ರಸ್ತೆಗಳ ವಿಸ್ತೀರ್ಣ 219 ಕಿ.ಮಿ. ಆಗಿತ್ತು. ಮಹಾನಗರಪಾಲಿಕೆಯ ಪರಿವ್ಯಾಪ್ತಿಯಲ್ಲಿ ಅನೇಕ ಚಿಕ್ಕ ದೊಡ್ಡ ಉಪವನಗಳು ಇದ್ದು ಅವುಗಳ ಒಟ್ಟು ಸಂಖ್ಯೆ 47. ಅವುಗಳಲ್ಲಿ ಧಾರವಾಡದ ಮೂರು (ಚನ್ನಮ್ಮ ಉಪವನ 11 ಎಕರೆ, ಆಝಾದ ಉಪವನ (ಎಡ್ವರ್ಡ್ ಪಾರ್ಕ್) 7 ಎಕರೆ ಮತ್ತು ಮೃತ್ಯುಂಜಯನಗರ 6 ಎಕರೆ). ಹುಬ್ಬಳ್ಳಿಯ ಎರಡು ಉಪವನಗಳು ಪ್ರಮುಖವಾದವುಗಳು. ಹುಬ್ಬಳ್ಳಿಯಲ್ಲಿ ಸುಮಾರು 25 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ

ಸುಂದರ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ಅಲ್ಲಿ ಬೆಂಗಳೂರು ಮಾದರಿಯಲ್ಲಿ ಇಂದಿರಾ ಗಾಜಿನ ಮನೆ (1976), ಮತ್ಸ್ಯಾಲಯ, ಆರ್ಟ್‌ಗ್ಯಾಲರಿ, ಮುಂತಾದವುಗಳನ್ನು ನಿರ್ಮಿಸಲಾಗಿದೆ. ಉಣಕಲ್ಲಿಗೆ ಹೊಂದಿಕೊಂಡಿರುವ (ನೃಪತುಂಗ ಬೆಟ್ಟ) ಬೆಟ್ಟದಲ್ಲಿ ಸುಮಾರು 33 ಎಕರೆ ಪ್ರದೇಶದಲ್ಲಿ ಟೆರೇಸ್ ಉದ್ಯಾನ, ಚಿಕ್ಕಮಕ್ಕಳ ಉದ್ಯಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹುಬ್ಬಳ್ಳಿಯಲ್ಲಿ ತಿರಕಾರಾಮ ಕೆರೆಯ ಜಾಗೆಯಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಈಜುಗೊಳವನ್ನು 1976 ರಲ್ಲಿ ಸುಮಾರು ರೂ.15.60 ಲಕ್ಷ ವೆಚ್ಚದಿಂದ ನಿರ್ಮಿಸಲಾಗಿದೆ. ಹುಬ್ಬಳ್ಳಿಯಲ್ಲಿ (ಹೆಗ್ಗೇರಿಯಲ್ಲಿ) ಪುರಸಭೆಯು ವಿದ್ಯುತ್‌ಚಿತಾಗಾರವನ್ನು ನಿರ್ಮಿಸಿದೆ. ಧಾರವಾಡದ ಕಡಪಾ ಮೈದಾನದಲ್ಲಿ 1978 ರಲ್ಲಿ ಸುಸಜ್ಜಿತ ಭವ್ಯವಾದ ಕಲಾಭವನ (ಮಲ್ಲಿಕಾರ್ಜುನ ಮನಸೂರ)ವನ್ನು ಸುಮಾರು 23 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಹುಬ್ಬಳ್ಳಿಯಲ್ಲಿ ಮಹಾನಗರಸಭೆಯ ವತಿಯಿಂದ 25,000 ಆಸನ ವ್ಯವಸ್ಥೆಯುಳ್ಳ ನೆಹರು ಸ್ಟೇಡಿಯಂ (ಹಿಂದಿನ ಗುಳಕವ್ವನ ಕೆರೆ) ಅನ್ನು 1975 ರಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಯಿತು.

ಹುಬ್ಬಳ್ಳಿ ಧಾರವಾಡಗಳಿಗೆ 1961 ರಿಂದ ಕ್ರಮಬದ್ಧವಾಗಿ ಶರಾವತಿಯ ವಿದ್ಯುತ್ ಪೂರೈಕೆಯಾಗುತ್ತಿದೆ. ಅದಕ್ಕೂ ಪೂರ್ವದಲ್ಲಿ ಹುಬ್ಬಳ್ಳಿ ನಗರಕ್ಕೆ ಸೀಮಿತವಾದಂತೆ 1924 ರಲ್ಲಿ ಪ್ರಾರಂಭವಾದ ಹುಬ್ಬಳ್ಳಿ ಎಲೆಕ್ಟ್ರಿಕಲ್ ಕಂಪನಿ (ಅಮಟೆ ಮತ್ತು ಕಂ.) ಡೀಜಲ್ ಜನರೇಟರ ಮೂಲಕ ವಿದ್ಯುತ್ತನ್ನು ಉತ್ಪಾದಿಸಿ ಒದಗಿಸುತ್ತಿತ್ತು. ಮುಂದೆ 1944 ರಲ್ಲಿ ಈ ಕಂಪನಿಯನ್ನು ಸರ್ಕಾರ ವಹಿಸಿಕೊಂಡಿತ್ತು. ಧಾರವಾಡದಲ್ಲಿ ಧಾರವಾಡ ಎಲೆಕ್ಟ್ರಿಕ್ ಸಪ್ಲಾಯ ಕಂ., 1930 (ದೇಸಾಯಿ ಮತ್ತು ಕಂಪನಿ) ಎಂಬ ಸಂಸ್ಥೆಯು ಸೀಮಿತ ಪ್ರಮಾಣದಲ್ಲಿ ವಿದ್ಯುತ್ತನ್ನು ಪೂರೈಸುತ್ತಿತ್ತು. ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 18,644 ವಿವಿಧ ಬಗೆಯ ಬೀದಿ ದೀಪಗಳಿವೆ (1994). ಮಹಾನಗರಪಾಲಿಕೆಗೆ 1993-94 ರಲ್ಲಿ ವಿದ್ಯುಚ್ಛಕ್ತಿ ಸಂಬಂಧ ಆದ ಖರ್ಚು 28.08 ಲಕ್ಷ ರೂ. ಮತ್ತು ಹೊಸದಾಗಿ ಬೀದಿ ದೀಪ ಅಳವಡಿಸಿದ್ದಕ್ಕಾಗಿ ಆದ ಖರ್ಚು ಒಟ್ಟು 42.33 ಲಕ್ಷ ರೂ. ಆಗಿತ್ತು. ಹುಬ್ಬಳ್ಳಿ ಧಾರವಾಡ ರಾಷ್ಟ್ರೀಯ ಹೆದ್ದಾರಿ ಗುಂಟ 25 ಕಿ.ಮಿ. ಉದ್ದಕ್ಕೆ ಕೊಳವೆ ದೀಪಗಳನ್ನು ಅಳವಡಿಸಲಾಗಿದೆ. ನಾಗರಿಕರ ಸೌಲಭ್ಯಕ್ಕಾಗಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಎರಡೂ ಘಟಕಗಳಲ್ಲಿ ಸೇರಿ ಒಟ್ಟು 21 (ಹುಬ್ಬಳ್ಳಿಯಲ್ಲಿ 13) ಆಸ್ಪತ್ರೆಗಳನ್ನು ನಡೆಸುತ್ತದೆ. ಪುರಸಭೆಯ ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆ (1894)ರಾಜ್ಯದ ಅತ್ಯಂತ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿದೆ. ಮಹಾನಗರಸಭೆಯು ಹುಬ್ಬಳ್ಳಿಯಲ್ಲಿ ಎರಡು ಪ್ರೌಢಶಾಲೆಗಳನ್ನು ಲ್ಯಾಮಿಂಗ್ ಟನ್ (1890) ಬಾಲಕ ಮತ್ತು ಬಾಲಕಿಯರ) ನಡೆಸಿಕೊಂಡು ಬರುತ್ತಿದೆ. ಮಹಾನಗರ ಸಭೆಯಿಂದ ವಿವಿಧ ಮಾರುಕಟ್ಟೆ ಸಂಕೀರ್ಣಗಳಲ್ಲಿ ಒಟ್ಟು 1969 ಅಂಗಡಿಗಳು ಇರುವವು (1994).

**ಹಣಕಾಸು :** ಮಹಾನಗರಪಾಲಿಕೆಯಾಗಿ ರಚನೆಗೊಂಡನಂತರ ಸಂಸ್ಥೆಯ ಆದಾಯ ವೆಚ್ಚಗಳು ಗಣನೀಯವಾಗಿ ಹೆಚ್ಚಳಗೊಂಡಿವೆ. 1962 ರಲ್ಲಿ ಹುಬ್ಬಳ್ಳಿ - ಧಾರವಾಡ ಎರಡೂ ಘಟಕಗಳ ವಾರ್ಷಿಕ ಆದಾಯ ರೂ.60 ಲಕ್ಷದಷ್ಟು ಇದ್ದರೆ ಇತ್ತೀಚಿನ ವರ್ಷಗಳಲ್ಲಿ ಅದು ರೂ.16 ಕೋಟಿಗೂ ಮೀರಿದೆ. ಮಹಾನಗರ ಪಾಲಿಕೆಗೆ ಆಕ್ಟ್ರಾಯ್ ಅನುದಾನ ರೂಪದಲ್ಲಿ 1991-92, 1992-93 ಮತ್ತು 1993-94 ರಲ್ಲಿ ರಾಜ್ಯ ಸರ್ಕಾರದಿಂದ ಸಂದಾಯವಾದ ಅನುದಾನ ಕ್ರಮವಾಗಿ 324.79 ಲಕ್ಷ, 332.16 ಲಕ್ಷ ಮತ್ತು 646.76 ಲಕ್ಷ ರೂ. ಆಗಿತ್ತು. ಹಾಗೂ ಇತರ ಅಭಿವೃದ್ಧಿ ಅನುದಾನ 279.88 ಲಕ್ಷ, 241.49 ಲಕ್ಷ ಮತ್ತು 352.91 ಲಕ್ಷ ರೂ. ಆಗಿತ್ತು. 1993-94 ರಲ್ಲಿ 1,207 ಪೌರ ಕಾರ್ಮಿಕರು ಸೇರಿಸಿದಂತೆ ಒಟ್ಟು ಸಿಬ್ಬಂದಿಯ ಸಂಖ್ಯೆ 2,480. ಮಹಾನಗರಪಾಲಿಕೆಯ ಇತ್ತೀಚಿನ ಹಲವಾರು ವರ್ಷಗಳ ಆದಾಯ ವೆಚ್ಚಗಳು ಲಕ್ಷ ರೂಗಳಲ್ಲಿ ಈ ಮುಂದಿನಂತೆ ಇರುವುದು. ಆವರಣದಲ್ಲಿರುವ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು: 1962-63: 76.95 (59.63); 1965-66: 91.21 (87.29); 1968-69: 134.76, (121.27), 1970-71: 157.86 (139.05); 1972-73: 200.28 (189.14); 1974-75: 297.91 (239.67), 1976-77: 336.14 (292.59), 1978-79: 372.44 (390.30), 1980-81: 529.69 (447.18), 1982-83: 569.06 (539.32), 1984-85: 664.47 (537.22), 1986-87: 1266.25 (1266.22) 1992-93: 1689 (1625), 1993-94: 2641.16 (2627.83).

**ಗದಗ - ಬೆಟಗೇರಿ ನಗರ ಸಭೆ**

ಪ್ರಾರಂಭದಲ್ಲಿ ಗದಗ ಮತ್ತು ಬೆಟಗೇರಿ ಪಟ್ಟಣಗಳಿಗೆ 1859 ರಲ್ಲಿ ಪ್ರತ್ಯೇಕವಾದ ಪುರಸಭೆಗಳನ್ನು ರಚಿಸಲಾಯಿತು. ಇದಾದ ಮೂರು ವರ್ಷಗಳ ನಂತರ 1862 ರಲ್ಲಿ ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಎರಡೂ ಪಟ್ಟಣಗಳನ್ನು ಸೇರಿಸಿ ಗದಗ-ಬೆಟಗೇರಿ ಸಂಯುಕ್ತ ಪುರಸಭೆಯನ್ನು ರಚಿಸಲಾಯಿತು. 1926 ರಲ್ಲಿ ಇದನ್ನು ಬರೋ ಮುನಸಿಪಾಲಿಟಿಯ ದರ್ಜೆಗೆ ಉನ್ನತೀಕರಿಸಲಾಯಿತು.

1951 ರಲ್ಲಿ ಅಂದಿನ ಮುಂಬೈ ಮುನಿಸಿಪಾಲಿಟಿ ಕಾನೂನಿನ ಅನ್ವಯ ಪುನರ್ ರಚನೆಗೊಂಡಾಗ ನಗರಸಭೆ 36 ಜನ ನಗರ ಸಭಾ ಸದಸ್ಯರನ್ನು ಒಳಗೊಂಡಿತ್ತು. ಅವರಲ್ಲಿ 4 ಮಹಿಳೆಯರು, ಎರಡು ಪ.ಜಾ/ಪ.ಪಂ.ಗಳಿಗೆ ಸೇರಿದವರಾಗಿದ್ದರು. ನಗರವು 11 ವಾರ್ಡಗಳಾಗಿ ವಿಭಾಗಿಸಲ್ಪಟ್ಟಿತ್ತು.

ನಗರದ ಇಂದಿನ (1993-94) ವಿಸ್ತೀರ್ಣ 15.36 ಚ.ಕಿ.ಮೀ; ಒಟ್ಟು ಮನೆಗಳ ಸಂಖ್ಯೆ 23,822. ನಗರವನ್ನು ಇಂದು ಹತ್ತು ವಾರ್ಡುಗಳಾಗಿ ವಿಂಗಡಿಸಲಾಗಿದೆ. ನಗರದ ಜನಸಂಖ್ಯೆ 1.34 ಲಕ್ಷ (1991). 1991 ರಲ್ಲಿ ಕರದಾತರ ಸಂಖ್ಯೆ 26,175 ಆದರ ಹಿಂದಿನ ದಶಕದಲ್ಲಿ ಅವರ ಸಂಖ್ಯೆ 23,829 ಆಗಿತ್ತು. 1994 ರಲ್ಲಿ ಸರಾಸರಿ ಕರಭಾರ ರೂ.109 ಎಂದು ವರದಿಯಾಗಿದೆ. ಇತ್ತೀಚಿನ ಚುನಾವಣೆಯಲ್ಲಿ ಆರಿಸಿಬಂದ ಚುನಾಯಿತರಾದ ನಗರ ಸಭಾ ಸದಸ್ಯರ ಸಂಖ್ಯೆ 31, ಅವರಲ್ಲಿ ಮಹಿಳೆಯರಿಗೆ ಆರು, ಮತ್ತು ಪ.ಜಾ\ಪ.ಪಂ.ದವರಿಗೆ ಎರಡು ಸ್ಥಾನಗಳ ಮೀಸಲಾತಿ ಉಂಟು. ಜಿಲ್ಲೆಯ ಎರಡನೆಯ ಪ್ರಮುಖ ವ್ಯಾಪಾರಿ ಕೇಂದ್ರವಾದ ಗದಗ ಇತ್ತೀಚಿನ ದಶಕಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತಿದೆ. ಅನೇಕ ಹೊಸ ಬಡಾವಣೆಗಳು ನಗರದ ಸುತ್ತಮುತ್ತ ಮೈದಾಳಿವೆ. ನಗರದ ಇತ್ತೀಚಿನ ಬಡಾವಣೆಗಳಲ್ಲಿ ರಾಜೀವಗಾಂಧಿ ನಗರ (1992), ನೇಕಾರನಗರ, ಸಿದ್ದಲಿಂಗನಗರ (ಹುಡಕೊ ಕಾಲೋನಿ) ಇವು ಪ್ರಮುಖವಾದವುಗಳು. ಈ ಎಲ್ಲಾ ಬಡಾವಣೆಗಳ ಅಭಿವೃದ್ಧಿಗೆ ನಗರಸಭೆಯು ಖರ್ಚುಮಾಡಿದ ವೆಚ್ಚ ರೂ.15.34 ಲಕ್ಷ ಎಂದು ತಿಳಿದುಬರುವುದು.

**ನೀರು ಪೂರೈಕೆ** : ಪ್ರಾರಂಭದಲ್ಲಿ ನಗರದ ಪ್ರಮುಖ ಕೆರೆಗಳಾದ ಭೀಷ್ಮನಕೆರೆ ಮತ್ತು ಹಸಿರು ಕೆರೆಗಳು ಕುಡಿಯುವ ನೀರನ್ನು ಒದಗಿಸುವ ಮೂಲವಾಗಿದ್ದವು. ಇದು ಅಲ್ಲದೇ ಸುಮಾರು ಒಂದು ನೂರರಷ್ಟು ಮುನಿಸಿಪಾಲಿಟಿ ಭಾವಿಗಳು ಉಪಯೋಗದಲ್ಲಿ ಇದ್ದವು. 1972 ರಿಂದ 1992 ರ ವರೆಗೆ ಕೇವಲ ಕೊಳವೆ ಭಾವಿಗಳು ನಗರದ ನೀರು ಪೂರೈಕೆಯ ಪ್ರಮುಖ ನೆಲೆಗಳಾಗಿದ್ದವು. ನಗರದಲ್ಲಿರುವ ಕೊಳವೆ ಭಾವಿಗಳ ಸಂಖ್ಯೆ 145. ಗದಗ ನಗರವು ಇತ್ತೀಚಿನವರೆಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಲೇ ಇತ್ತು. 1984 ರಲ್ಲಿ ಪ್ರಾರಂಭಗೊಂಡು 1992 ರಲ್ಲಿ ಮುಕ್ತಾಯಗೊಂಡ ತುಂಗಭದ್ರಾ ಜಲಾಶಯದಿಂದ ಪೂರೈಕೆಯಾಗುವ ನೀರಿನ ಯೋಜನೆಯು ಬಹುಮಟ್ಟಿಗೆ ನಗರದ ನೀರಿನ ಸಮಸ್ಯೆಯನ್ನು ಪರಿಹರಿಸಿದೆ. ಗದಗ ನಗರಕ್ಕೆ ತುಂಗಭದ್ರಾ ಯೋಜನೆಯ ಅನ್ವಯ ಸುಮಾರು 50 ಕಿ.ಮಿ ದೂರದ ಕೊರ್ಲಹಳ್ಳಿಯಿಂದ ನೀರು ತರಲಾಗುತ್ತಿದೆ. ಈ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಪೂರೈಸಿದ್ದು ಯೋಜನೆಯ ವೆಚ್ಚ ರೂ.1,342.42 ಲಕ್ಷಗಳು. ಈ ಯೋಜನೆಗೆ ಸರ್ಕಾರ (ರೂ.999.32 ಲಕ್ಷ) ಮತ್ತು ಜೀವ ವಿಮಾ ನಿಗಮ (ರೂ.343.10 ಲಕ್ಷ) ಸಾಲದ ರೂಪದಲ್ಲಿ ಹಣಕಾಸಿನ ನೆರವು ಒದಗಿಸಿದೆ. ನಗರ ವ್ಯಾಪ್ತಿಯಲ್ಲಿ ಒಟ್ಟು 5,250 ನಲ್ಲಿ ಸಂಪರ್ಕಗಳು ಇದ್ದು ಅವುಗಳಲ್ಲಿ 4,900 ಖಾಸಗಿ ಸಂಪರ್ಕ, 350 ಸಾರ್ವಜನಿಕ ಸಂಪರ್ಕಗಳು ನಗರಕ್ಕೆ ದಿನನಿತ್ಯ ಸರಾಸರಿ 18 ಲಕ್ಷ ಗ್ಯಾಲನ್ನು ನೀರನ್ನು ಒದಗಿಸುತ್ತವೆ. ಪ್ರತೀದಿನ ಪ್ರತಿವ್ಯಕ್ತಿಗೆ ಸರಾಸರಿ 13 ಗ್ಯಾಲನ್ನು ನೀರು ಪೂರೈಸಲಾಗುವುದು. ಮಂಡಳಿಯ ನೀರು ಸರಬರಾಜು ನಿರ್ವಹಣಾ ವಾರ್ಷಿಕ ವೆಚ್ಚ ರೂ.65 ಲಕ್ಷ ಆದರೆ ಪುರಸಭೆಗೆ ನೀರಿನ ತೆರಿಗೆಯ ರೂಪದಲ್ಲಿ ಸಂದಾಯವಾಗುವ ಹಣ ರೂ.8.80 ಲಕ್ಷ ಎಂದು ತಿಳಿದುಬರುವುದು.

**ಜನರ ಆರೋಗ್ಯ ಮತ್ತು ನೈರ್ಮಲ್ಯ** : 1981 ರಲ್ಲಿ ಸರ್ಕಾರಕ್ಕೆ ಒಪ್ಪಿಸುವ ಪೂರ್ವದಲ್ಲಿ ನಗರಸಭೆಯು ಮೂರು ವಿವಿಧ ದವಾಖಾನೆಗಳನ್ನು ನಿರ್ವಹಿಸುತ್ತಿತ್ತು. ನಗರದಲ್ಲಿ ಒಳಚರಂಡಿ ಯೋಜನೆಯ ಅನುಕೂಲತೆ ಇರುವುದಿಲ್ಲ. ನಗರದ ನೈರ್ಮಲ್ಯವನ್ನು ಕಾಪಾಡಲು 307 ಜನ ವಿವಿಧ ಪೌರಕಾರ್ಮಿಕರು ಇರುವರು. ಕೈಗಾಡಿ ಮತ್ತು ಭಂಗಿ ಟ್ಯಾಂಕರ್‌ಗಳಿಂದ ಮಲವನ್ನು ಸಾಗಿಸಲಾಗುವುದು. ನಗರದಲ್ಲಿರುವ ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ 9, ವಿಸ್ತೀರ್ಣ 9 ಚ.ಕಿ.ಮಿ, ಗುಡಿಸಲುಗಳ ಸಂಖ್ಯೆ 812 ಎಂದು ವರದಿಯಾಗಿದೆ.

**ಇತರ ಸೌಲಭ್ಯಗಳು :** ನಗರ ಸಭೆಯ ವತಿಯಿಂದ ಒಂದು ಪ್ರೌಢಶಾಲೆ (1885) ಮತ್ತು ಪದವಿಪೂರ್ವ ಕಾಲೇಜನ್ನು ನಡೆಸಲಾಗುತ್ತಿದೆ. 1991-92 ರಲ್ಲಿ ಈ ಉದ್ದೇಶಕ್ಕಾಗಿ ಪುರಸಭೆ ಮಾಡಿದ ವೆಚ್ಚ ರೂ.24,434. ಪುರಸಭೆಯು ಆರು ಉದ್ಯಾನವನಗಳನ್ನು ನಿರ್ವಹಿಸುತ್ತಿದ್ದು 1991-92 ರಲ್ಲಿ ಈ ಬಗ್ಗೆ ಖರ್ಚಾದ ಹಣ ರೂ.6.70 ಲಕ್ಷ. ನಗರಸಭೆಯ ವತಿಯಿಂದ ಸುಮಾರು 97 ಕಿ.ಮಿ. ಉದ್ದದ ವಿವಿಧ ರಸ್ತೆಗಳು ನಿರ್ವಹಿಸಲ್ಪಡುವವು.

ಪ್ರಪ್ರಥಮವಾಗಿ 1926 ರಲ್ಲಿ ನಗರಕ್ಕೆ "ಮಾನವಿ ಇಲೆಕ್ಟ್ರಿಕಲ್ ಪಾವರ್ ಸಪ್ಲಾಯರ್ಸ್" ಎಂಬ ಕಂಪನಿಯಿಂದ ವಿದ್ಯುತ್ತನ್ನು ಸೀಮಿತವಾಗಿ ಪೂರೈಸಲಾಗುತ್ತಿತ್ತು. ನಗರದಲ್ಲಿ 1987 ರಲ್ಲಿ 3,491 ಬೀದಿದೀಪಗಳನ್ನು ಅಳವಡಿಸಿದ್ದರೆ, 1992 ರಲ್ಲಿ ಅವುಗಳ ಸಂಖ್ಯೆ 4,581 ಕ್ಕೆ ಹೆಚ್ಚಳಗೊಂಡಿತು. ನಗರಸಭೆಯ ವತಿಯಿಂದ ಪ.ಜಾ\ಪ.ಪಂ.ಗಳ ವಿವಿಧ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಶೇ.18 ರ ಮೀಸಲು ನಿಧಿಯ ಅನ್ವಯ ಖರ್ಚುಮಾಡಿದ ಹಣ 1991-92, 1990-91 ಮತ್ತು 1989-90 ರಲ್ಲಿ ಅನುಕ್ರಮವಾಗಿ ರೂ.5.15 ಲಕ್ಷ ರೂ. 8.70 ಲಕ್ಷ ಮತ್ತು ರೂ.2.53 ಲಕ್ಷ ಎಂದು ತಿಳಿದುಬರುವುದು.

**ಹಣಕಾಸು :** ಜಕಾತಿ ರದ್ದಾಗುವ ಪೂರ್ವದಲ್ಲಿ 1978-79 ರಲ್ಲಿ ಜಕಾತಿ ಮೂಲದಿಂದ ನಗರ ಸಭೆಗೆ ರೂ.30.20 ಲಕ್ಷ ಆದಾಯ ಬಂದಿದ್ದರೆ, ಅದರ ಹಿಂದಿನ ಎರಡು ವರ್ಷಗಳಲ್ಲಿ ಈ ಮೂಲದ ಮೊತ್ತ ಅನುಕ್ರಮವಾಗಿ ರೂ. 26.60 ಲಕ್ಷ ಮತ್ತು ರೂ.24.80 ಲಕ್ಷ ಎಂದು ತಿಳಿದು ಬರುವುದು. ಇತ್ತೀಚಿನ ಮೂರು ವರ್ಷಗಳಲ್ಲಿ 1991-92, 1990-91, ಮತ್ತು 1989-90 ರಲ್ಲಿ ಜಕಾತಿಯ ಅನುದಾನ ಮತ್ತು ಸರ್ಕಾರದ ವಿವಿಧ ಅನುದಾನಗಳು ಸೇರಿ ಸರ್ಕಾರದಿಂದ ನಗರಸಭೆಗೆ ಸಂದಾಯವಾದ ಹಣದ ಮೊತ್ತ ಅನುಕ್ರಮವಾಗಿ ರೂ.91.70 ಲಕ್ಷ, ರೂ.68.70 ಲಕ್ಷ ಮತ್ತು ರೂ.72.45 ಲಕ್ಷ. ಇತ್ತೀಚಿನ ಕೆಲವು ವರ್ಷಗಳಲ್ಲಿ ನಗರಸಭೆಯ ಆದಾಯ ವೆಚ್ಚಗಳು ಲಕ್ಷ ರೂ.ಗಳಲ್ಲಿ ಈ ಮುಂದಿನಂತೆ ಇರುವವು. (ಆವರಣದಲ್ಲಿರುವ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು):

1982-83: 75.86 (83.83); 1984-85: 107.57 (109.93); 1986-87: 134.80 (142.32); 1988-89: 211.66 (195.79); 1990-91: 202.56 (225.25); 1992-93: 241.12 (248.24); ಹಾಗೂ 1993-94: 342.76 (316.81). 1991-92 ರಲ್ಲಿ ನಗರಸಭೆಯ ವಿವಿಧ ವೆಚ್ಚದ ವಿವರ ಈ ಮುಂದಿನಂತೆ ಇರುವವು. ಜನರ ಆರೋಗ್ಯ ಮತ್ತು ನೈರ್ಮಲ್ಯ ರೂ.9.50 ಲಕ್ಷ; ಸಾರ್ವಜನಿಕ ಕಾಮಗಾರಿಗಳು ರೂ.33.18 ಲಕ್ಷ; ನೀರು ಸರಬರಾಜು ರೂ. 28.57 ಲಕ್ಷ; ರಸ್ತೆ ಮತ್ತು ದೀಪಗಳ ನಿರ್ವಹಣೆ ರೂ.13.69 ಲಕ್ಷ; ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ, ರೂ.65 ಲಕ್ಷ; ಸಿಬ್ಬಂದಿ ವೆಚ್ಚ ರೂ.111.43 ಲಕ್ಷ; ಮತ್ತು ಇತರ ವೆಚ್ಚ ರೂ.44.19 ಲಕ್ಷ. ನಗರಸಭೆಯ ಹೊಸ ಕಟ್ಟಡವನ್ನು 1963 ರಲ್ಲಿ ಕಟ್ಟಿಸಲಾಯಿತು. ರಾಜ್ಯದ ಉತ್ತಮ ನಗರ ಸಭೆ ಎಂದು ಸತತವಾಗಿ ಮೂರು ಸಲ ಪ್ರಥಮ ಪ್ರಶಸ್ತಿಯನ್ನು ಪಡೆದ ಹಿರಿಮೆ ಈ ನಗರ ಸಭೆಯದು. 1984-85 ಮತ್ತು 1985-86 ರಲ್ಲಿ ಪ್ರತೀವರ್ಷ ರೂ.15 ಲಕ್ಷಗಳಂತೆ 1986-87 ರಲ್ಲಿ ರೂ. ಆರು ಲಕ್ಷದ ಬಹುಮಾನವನ್ನು ನೀಡಲಾಯಿತು.

### ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನಗರಗಳ ಸುವ್ಯವಸ್ಥಿತ ಮತ್ತು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಸಹಾಯಕವಾಗುವಂತೆ ಕರ್ನಾಟಕ ಸರ್ಕಾರವು 1976 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಮಂಡಳಿಗಳ ಅಧಿನಿಯಮವನ್ನು ಜಾರಿಗೊಳಿಸಿತು. ನಂತರ ನಗರ ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿಗಳನ್ನು ಒಂದೇ ಆಡಳಿತ ವ್ಯವಸ್ಥೆಯಲ್ಲಿ ತರುವ ಮೂಲಕ ಎರಡೂ ಸಂಸ್ಥೆಗಳನ್ನು ಒಂದುಗೂಡಿಸಿ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವನ್ನು 1988 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ 1987 ರ ಅನ್ವಯ ಸ್ಥಾಪಿಸಲಾಯಿತು. ಕೇಂದ್ರ ಕಛೇರಿ ಹುಬ್ಬಳ್ಳಿಯಲ್ಲಿ ಇರುವುದು. ಈ ಸಂಸ್ಥೆಯು ಒಂದು ಅರೆ ಸರ್ಕಾರಿ ಸ್ವಾಯತ್ತತೆಯನ್ನು ಹೊಂದಿದ ಶಾಸನಬದ್ಧ ಸಂಸ್ಥೆಯಾಗಿರುವುದು.

ಪ್ರಾಧಿಕಾರದ ಕಾರ್ಯವ್ಯಾಪ್ತಿ ಹುಬ್ಬಳ್ಳಿ ಧಾರವಾಡ ನಗರಗಳಲ್ಲದೇ ಹುಬ್ಬಳ್ಳಿ ತಾಲೂಕಿನ ಅಂಚಿನ ಆರು ಗ್ರಾಮಗಳು, ಧಾರವಾಡ ತಾಲ್ಲೂಕಿನ ಅಂಚಿನ 11 ಗ್ರಾಮಗಳನ್ನು ಒಳಗೊಂಡಿರುವುದು. ಪ್ರಾಧಿಕಾರದ ಅಭಿವೃದ್ಧಿ ಯೋಜನೆಗೆ ಒಳಪಟ್ಟಿರುವ ಒಟ್ಟು ಕ್ಷೇತ್ರ

9,569 ಹೆಕ್ಟೇರ. ಹುಬ್ಬಳ್ಳಿ (4,733 ಹೆ.), ಧಾರವಾಡ (2,890 ಹೆ.) ಹಾಗೂ ನವನಗರ (1,946 ಹೆ.). ಈ ಒಟ್ಟು ಕ್ಷೇತ್ರದಲ್ಲಿ ವಸತಿಗಾಗಿ ಮೀಸಲಾದ ಪ್ರದೇಶ 3,978 ಹೆಕ್ಟೇರ್ಸ್, ನಗರಾಭಿವೃದ್ಧಿ ಪ್ರಾಧಿಕಾರವು ಪ್ರಮುಖವಾಗಿ 1) ಅವಳಿನಗರಗಳ ಕ್ರಮಬದ್ಧ ಬೆಳವಣಿಗೆಗಾಗಿ ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ವಿನ್ಯಾಸಗಳನ್ನ ತಯಾರಿಸುವದು. 2) ನಗರಗಳ ಬೆಳವಣಿಗೆಗೆ ಸೂಕ್ತ ನಿಯಮಗಳನ್ನು ರೂಪಿಸಿ ಅವುಗಳನ್ನು ಜಾರಿಯಲ್ಲಿ ತರುವುದು, ಕಟ್ಟಡದ ನಿರ್ಮಾಣ ಮತ್ತು ಇತರ ನಿರ್ಮಾಣವನ್ನು ಯೋಜನೆಗೆ ಅನುಗುಣವಾಗಿ ನಿಯಂತ್ರಿಸುವುದು; 3) ಜನಸಾಮಾನ್ಯರಿಗೆ ಖಾಸಗಿಯಾದ ನಿವೇಶನ, ಜಾಗೆಯನ್ನು ಖರೀದಿಸುವ ಬಗ್ಗೆ ಮತ್ತು ಕಟ್ಟಡ ನಕ್ಷೆಯನ್ನು ತಯಾರಿಸುವುದನ್ನು ಕುರಿತು ಸರಿಯಾದ ಮಾಹಿತಿ ಮತ್ತು ಮಾರ್ಗದರ್ಶನ ನೀಡುವುದು, ಯೋಜನೆಯಲ್ಲಿ ಅಳವಡಿಸಿದ ರಸ್ತೆ ಮತ್ತು ಇತರ ಪ್ರಸ್ತಾವನೆಗಳನ್ನು ಕಾರ್ಯರೂಪದಕ್ಕೆ ತರುವುದು, ಇವೇ ಮುಂತಾದವುಗಳು.

ಇದುವರೆಗೆ ಪ್ರಾಧಿಕಾರವು ಅವಳಿನಗರಗಳಲ್ಲಿ 20 ಯೋಜನೆಗಳನ್ನು 206.43 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಂತೆ ರೂಪಿಸಿ, 2,546 ನಿವೇಶನಗಳನ್ನು ಹಂಚಿಕೆಗಾಗಿ ಮಹಾನಗರಸಭೆಗೆ ಒಪ್ಪಿಸಿದೆ. ನಿವೇಶನಗಳ ರಚನೆಗೆ ಖರ್ಚುಮಾಡಿದ ಹಣ ರೂ.249.45 ಲಕ್ಷ. ಈ ನಿವೇಶನಗಳ ಪೈಕಿ ಪ.ಜಾತಿ\ಪ.ವರ್ಗದವರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾದ ನಿವೇಶನಗಳ ಸಂಖ್ಯೆ ಅನುಕ್ರಮವಾಗಿ 298 ಮತ್ತು 204.

ಸಮಾಜದ ದುರ್ಬಲ ವರ್ಗದವರಿಗೆ ಕೇವಲ ರೂ.7000 ಗಳಲ್ಲಿ ಅಭಿವೃದ್ಧಿಪಡಿಸಿದ 30 x 20 ಅಡಿ ನಿವೇಶನಗಳ ಹಂಚಿಕೆ ಮಾಡಿದ್ದು ಈ ನಗರಾಭಿವೃದ್ಧಿ ಪ್ರಾಧಿಕಾರದ ಹಿರಿಮೆ ಎಂದು ವರದಿಯಾಗಿದೆ. ಹೆಚ್ಚುತ್ತಿರುವ ನಿವೇಶನಗಳ ಬೇಡಿಕೆಯನ್ನು ಗಮನಿಸಿ ಪ್ರಾಧಿಕಾರವು ಹೊಸದಾಗಿ 12 ಯೋಜನೆಗಳನ್ನು ರೂಪಿಸಿದ್ದು ಅವುಗಳಿಗಾಗಿ 1,825 ಎಕರೆ ಭೂಸ್ವಾಧೀನ ಕೆಲಸ ವಿವಿಧ ಹಂತಗಳಲ್ಲಿ ಇರುವುದು. ಈ 12 ಯೋಜನೆಗಳಿಂದ ಸುಮಾರು 24,585 ನಿವೇಶನಗಳು ಹಂಚಿಕೆಗೆ ಲಭ್ಯವಾಗುವವು. ಈ ಯೋಜನೆಯ ಅಂದಾಜು ಖರ್ಚು ರೂ. 10,667 ಲಕ್ಷ.

ನಗರಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಸಭೆಗೆ ಇದುವರೆಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ (7 ಯೋಜನೆಗಳಿಗೆ) ಸಾಲದ ರೂಪದಲ್ಲಿ\ಧನ ಸಹಾಯ ರೂಪದಲ್ಲಿ ರೂ.26.32 ಲಕ್ಷ ಹಣ ಸಂದಾಯ ಮಾಡಲಾಗಿದೆ. ಈ ಯೋಜನೆಗಳಲ್ಲಿ ಪೂಣೆ - ಬೆಂಗಳೂರು ರಸ್ತೆಗೆ ಬೈಪಾಸ ರಸ್ತೆ ನಿರ್ಮಾಣ (ರೂ. ಆರು ಲಕ್ಷ) ಸೋಡಿಯಂ ವೇಪರ ದೀಪದ ಅಳವಡಿಕೆ (ರೂ.10.19 ಲಕ್ಷ), ಸ್ವಯಂ ಚಾಲಿತ ಸಂಚಾರ ನಿಯಂತ್ರಣ ದೀಪದ ವ್ಯವಸ್ಥೆ (ರೂ.5.50 ಲಕ್ಷ) ಮುಂತಾದವುಗಳು ಸೇರಿವೆ.

## ನಗರ ಯೋಜನೆ

ಯೋಜಿತ ನಗರ ನಿರ್ಮಾಣದ ಕಲ್ಪನೆಯು ಪುರಾತನವಾಗಿದ್ದು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಕ್ರಮಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಿರ್ಮಿಸುವ ಮತ್ತು ವಿಸ್ತರಿಸುವ ಅಗತ್ಯ ಇಂದು ಅತೀ ಹೆಚ್ಚಿನ ಮಹತ್ವವನ್ನು ಪಡೆದಿರುವುದು. ರಾಜ್ಯ ಪುನರ್ ಘಟನೆಗೆ ಮೊದಲು ಈ ಭಾಗದಲ್ಲಿ ಮುಂಬಯಿ ನಗರ ಯೋಜನೆ ಕಾನೂನು 1915 ಜಾರಿಯಲ್ಲಿ ಇತ್ತು. ಅದರ ಕೇಂದ್ರ ಕಛೇರಿ ಪೂಣೆಯಲ್ಲಿ ಇತ್ತು. ರಾಜ್ಯ ಪುನರ್ ಘಟನೆಯ ನಂತರದ ವರ್ಷಗಳಲ್ಲಿ 1961 ರಲ್ಲಿ ರಾಜ್ಯ ವ್ಯಾಪ್ತಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮವೆಂಬ ಹೆಚ್ಚು ವ್ಯಾಪಕವಾದ ಕಾನೂನನ್ನು ರೂಪಿಸಿ 1965 ರಿಂದ ಜಾರಿಗೊಳಿಸಲಾಯಿತು. ಈ ಕಾಯ್ದೆಯ ಮುಖ್ಯ ಉದ್ದೇಶ ಸಂಪೂರ್ಣವಾಗಿ ಪೌರ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಯೋಜನೆ ಮತ್ತು ಪುನರ್ ಯೋಜನೆಗೆ ಅನುಕೂಲವಾಗುವ ಪರಿಸ್ಥಿತಿಯನ್ನುಂಟು ಮಾಡುವುದು, ನಿಯಂತ್ರಣಕ್ಕೆ ಒಳಪಡದೇ ಭೂಮಿಯನ್ನು ಅಭಿವೃದ್ಧಿಪಡಿಸುವುದನ್ನು ಮತ್ತು ಭೂಮಿಯ ವ್ಯಾಪಾರದಲ್ಲಿ ಲಾಭಕೋರತನವನ್ನು ತಡೆಯುವುದು, ಭೂಮಿಯನ್ನು ಸಮತೋಲನದಿಂದ ಬಳಸುವುದು, ಪರಿಸರದ ರಕ್ಷಣೆ, ಉದ್ಯಾನವನ, ಆಟದ ಮೈದಾನ ಮುಂತಾದ ಸೌಕರ್ಯ ಮತ್ತು ಸೌಲಭ್ಯಗಳನ್ನು ರಕ್ಷಿಸುವುದು ಮತ್ತು ಸುಧಾರಿಸುವುದು ಮುಂತಾದವುಗಳು. ಈ ಕಾನೂನು ಜಿಲ್ಲೆಯ ಪ್ರಮುಖ ನಗರಗಳಾದ ಹುಬ್ಬಳ್ಳಿ-ಧಾರವಾಡ (1966), ಗದಗ ಬೆಟಗೇರಿ (1972) ಮತ್ತು ರಾಣೆಬೆನ್ನೂರುಗಳಿಗೆ (1992) ಅನ್ವಯಿಸುವುದು. 1961 ರಲ್ಲಿ ಜಿಲ್ಲಾ ವ್ಯಾಪ್ತಿಯ ಸಹಾಯಕ ನಿರ್ದೇಶಕರು ನಗರ ಯೋಜನೆ ಇವರ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲಾಯಿತು.

1981 ರಲ್ಲಿ ಗದಗನಲ್ಲಿ ಸಹಾಯಕ ನಿರ್ದೇಶಕರು ನಗರ ಯೋಜನೆ ಇವರ ಎರಡನೆಯ ಕಛೇರಿಯನ್ನು 6 ತಾಲ್ಲೂಕುಗಳ ಆಡಳಿತ ವ್ಯಾಪ್ತಿಯೊಂದಿಗೆ ಪ್ರಾರಂಭಿಸಲಾಯಿತು. ಹುಬ್ಬಳ್ಳಿ ವಿಭಾಗಕ್ಕೆ 11 ತಾಲ್ಲೂಕುಗಳನ್ನು ವಹಿಸಲಾಯಿತು. ಹುಬ್ಬಳ್ಳಿ ಧಾರವಾಡ ನಗರಗಳ ನಗರಯೋಜನೆ ಕಾರ್ಯವನ್ನು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಲಾಗಿದೆ.

1981 ರಲ್ಲಿ ಉತ್ತರ ಕರ್ನಾಟಕದ 8 ಜಿಲ್ಲೆಗಳನ್ನು ಒಳಗೊಂಡಂತೆ ಜಂಟೀ ನಿರ್ದೇಶಕರ ಕಛೇರಿಯನ್ನು ಧಾರವಾಡದಲ್ಲಿ ತೆರೆಯಲಾಯಿತು. ಇಲಾಖೆಯ ವತಿಯಿಂದ ಧಾರವಾಡ ಜಿಲ್ಲೆಯ 22 ನಗರ/ಪಟ್ಟಣ ಪ್ರದೇಶಗಳ ಅಭಿವೃದ್ಧಿ ನಕ್ಷೆಯನ್ನು ತಯಾರಿಸಲಾಗಿದೆ. ಇವುಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲದೇ, ಅಳ್ನಾವರ, ಲಕ್ಷ್ಮೇಶ್ವರ, ಗಜೇಂದ್ರಗಡ, ನರೇಗಲ್, ಅಣ್ಣಿಗೇರಿ ಮತ್ತು ಮುಳಗುಂದಗಳೂ ಸೇರಿರುವವು. ಇದು ಅಲ್ಲದೇ ಜಿಲ್ಲೆಯಲ್ಲಿ 23 ಅಭಿವೃದ್ಧಿ ಕೇಂದ್ರಗಳನ್ನು ಗುರುತಿಸಿ (ತಾಲ್ಲೂಕು ಕೇಂದ್ರವಲ್ಲದ ಸ್ಥಳಗಳು) ಅವುಗಳ ಅಭಿವೃದ್ಧಿ ನಕ್ಷೆಗಳನ್ನು ಸಹ ತಯಾರಿಸಲಾಗಿದೆ. ಭೂಮಿಯ ಸಮಗ್ರ ಉಪಯೋಗ ಮತ್ತು ನಿರ್ವಹಣೆ ಯೋಜನೆಯ ಅನ್ವಯ (ಜಪಾನ್ ಸರ್ಕಾರದ ಸಹಯೋಗದಿಂದ ಕೈಗೊಳ್ಳಲಾದ ಯೋಜನೆ) ಚಿಕ್ಕಬಾಸೂರು, ಅಕ್ಕಿ ಆಲೂರು, ಯಮನೂರು ಮತ್ತು ಅಬ್ಬಿಗೇರಿ ಮಂಡಳ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 26 ಆಯ್ದ ಹಳ್ಳಿಗಳ 'ಬೇಸಮ್ಯಾಪ್' ಮತ್ತು ಅಭಿವೃದ್ಧಿ ನಕ್ಷೆಗಳನ್ನು ಇಲಾಖೆಯು ತಯಾರಿಸಿದೆ. ಇಲಾಖೆಯ ವತಿಯಿಂದ ಸಮಗ್ರ ನಗರಾಭಿವೃದ್ಧಿ ಯೋಜನೆಯ ಅನ್ವಯ (ಕೇಂದ್ರ ಸರ್ಕಾರದ ನೆರವಿನ ಯೋಜನೆ) ರಾಣೆಬೆನ್ನೂರು ನಗರದ ಅಭಿವೃದ್ಧಿ ಯೋಜನೆಯ ನಕ್ಷೆ ಮತ್ತು ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಪಟ್ಟಣಗಳ ಅಭಿವೃದ್ಧಿ ಯೋಜನೆಯ ಅನ್ವಯ ಅಳ್ನಾವರ, ಬ್ಯಾಡಗಿ, ಹಾವೇರಿ, ಲಕ್ಷ್ಮೇಶ್ವರ, ರೋಣ ಮತ್ತು ನರಗುಂದ ನಗರಗಳ ಅಭಿವೃದ್ಧಿ ನಕ್ಷೆಯನ್ನು ಇಲಾಖೆಯು ಸಿದ್ಧಪಡಿಸಿದೆ.

ಇಲಾಖೆಯ ವತಿಯಿಂದ ಕರ್ನಾಟಕ ಗೃಹಮಂಡಳಿ, ಕೊಳಚೆ ನಿರ್ಮೂಲನಾ ಮಂಡಳಿ, ಜಿಲ್ಲೆಯಲ್ಲಿ ಪುನರ್ ವಸತಿಗಾಗಿ ಆಯ್ಕೆಯಾದ ಹಳ್ಳಿಗಳ ಯೋಜನೆಯನ್ನು ತಯಾರಿಸಲಾಗುವುದು. ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಮುಂತಾದ ಸಂಸ್ಥೆಗಳಿಗೆ ಅವಶ್ಯವಾದ ತಾಂತ್ರಿಕ ಸಲಹೆಯನ್ನು ನೀಡುವುದಲ್ಲದೇ ಯೋಜನಾ ನಕ್ಷೆಯನ್ನು ತಯಾರಿಸಿ ಕೊಡಲಾಗುವುದು.

### ಕೊಳಚೆ ನಿರ್ಮೂಲನಾ ಮಂಡಳಿ

ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಿಂದ ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೆಗಳ ಬೆಳವಣಿಗೆ, ನಗರಗಳಿಗೆ ದೊಡ್ಡ ಪ್ರಮಾಣದಿಂದ ಬರುತ್ತಿರುವ ವಲಸಿಗರ ಸಂಖ್ಯೆ, ನಗರದಲ್ಲಿಯೇ ಇರುವವರಿಗೆ ನಾಗರಿಕ ಸೌಲಭ್ಯಗಳ ಕೊರತೆ ಇವೇ ಮುಂತಾದ ಕಾರಣಗಳಿಂದ ನಗರಗಳಲ್ಲಿ ಕೊಳಚೆ ಪ್ರದೇಶಗಳು ಕಂಡುಬರುತ್ತಿರುವುದು ಸರ್ವೇಸಾಮಾನ್ಯವಾಗಿರುವುದು. ಈ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಎಂಟು ಜಿಲ್ಲೆಗಳನ್ನು ಒಳಗೊಂಡಂತೆ ಉತ್ತರ ವಲಯದ ವಿಭಾಗೀಯ ಕಛೇರಿಯನ್ನು ಮೊದಲಿಗೆ 1980 ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭಿಸಿ ನಂತರ 1982 ರಲ್ಲಿ ಹುಬ್ಬಳ್ಳಿಗೆ ವರ್ಗಾಯಿಸಲಾಯಿತು. ವಿಭಾಗೀಯ ಕಛೇರಿಯ ನಿಯಂತ್ರಣದಲ್ಲಿ ಹುಬ್ಬಳ್ಳಿಯನ್ನು ಒಳಗೊಂಡಂತೆ ನಾಲ್ಕು ಉಪ ವಿಭಾಗಗಳು ಇರುವವು. ಕೊಳಚೆ ನಿರ್ಮೂಲನಾ ಮಂಡಳಿಯು ವರದಿಮಾಡುವಂತೆ, ಧಾರವಾಡ ಜಿಲ್ಲೆಯಲ್ಲಿ 13 ನಗರ ಪ್ರದೇಶಗಳು ಕೊಳಚೆ ವಸತಿ ಪ್ರದೇಶಗಳಿಂದ ಕೂಡಿರುವವು. ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ 87; ಕೊಳಚೆ ನಿವಾಸಿಗಳ ಸಂಖ್ಯೆ 59,680; ಗುಡಿಸಲುಗಳ ಸಂಖ್ಯೆ 11,788, ಆಶ್ರಯಿತ ಪ್ರದೇಶ 247 ಎಕರೆಗಳು. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿಯೇ ಇರುವ ಕೊಳಚೆ ಪ್ರದೇಶಗಳ ಸಂಖ್ಯೆ 28; ನಿವಾಸಿಗಳ ಸಂಖ್ಯೆ 32,145; ಗುಡಿಸಲುಗಳ ಸಂಖ್ಯೆ 6,484; ವಿಸ್ತೀರ್ಣ 109 ಎಕರೆ. ಹುಬ್ಬಳ್ಳಿ- ಧಾರವಾಡದ ಕೊಳಚೆ ಪ್ರದೇಶಗಳು ಬಹು ಭಾಗ ಖಾಸಗಿ ಒಡೆತನದ ಭೂಮಿ, ಸರ್ಕಾರ, ಪುರಸಭೆ, ರೇಲ್ವೆಯ ಭೂಮಿಯನ್ನು ಆಕ್ರಮಿಸಿದೆ ಎಂದು ತಿಳಿದುಬರುವುದು. ಹುಬ್ಬಳ್ಳಿ ಧಾರವಾಡ ನಂತರ ಎರಡನೆ ಸ್ಥಾನ ಗದಗ ಬೆಟಗೇರಿ ನಗರದ್ದು. ಇಲ್ಲಿ 10 ಕೊಳಚೆ ಪ್ರದೇಶಗಳಿದ್ದು, 6,423 ಜನವಸತಿಯಿಂದ ಕೂಡಿದೆ. ಗುಡಿಸಲುಗಳ ಸಂಖ್ಯೆ 1,349 ವಿಸ್ತೀರ್ಣ 27 ಎಕರೆ; ಮೂರನೇಯ ಸ್ಥಾನ ರಾಣೆಬೆನ್ನೂರಿನದು. ಈ ನಗರದಲ್ಲಿ 8 ಕೊಳಚೆ ಪ್ರದೇಶಗಳು 2,730 ಜನಸಂಖ್ಯೆಯಿಂದ 792 ಗುಡಿಸಲುಗಳಿಂದ ಕೂಡಿದ್ದು ಇವುಗಳು 11 ಎಕರೆ ಪ್ರದೇಶವನ್ನು ವ್ಯಾಪಿಸಿರುವುದು. ಘೋಷಿತ ಕೊಳಚೆ ಪ್ರದೇಶಗಳಲ್ಲದೇ ಹುಬ್ಬಳ್ಳಿಯಲ್ಲಿ 5, ಧಾರವಾಡದಲ್ಲಿ 8, ರೋಣದಲ್ಲಿ ಎರಡು, ಹಾನಗಲ್‌ನಲ್ಲಿ ಒಂದು ಅಘೋಷಿತ ಕೊಳಚೆ ಪ್ರದೇಶಗಳು ಇರುವವು.

ಕೊಳಚೆ ನಿರ್ಮೂಲನಾ ಮಂಡಳಿಯಿಂದ ಇದುವರೆಗೆ (1981-94) ಘೋಷಿತ ಪ್ರದೇಶಗಳಲ್ಲಿ ಒಟ್ಟು 790 ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಬಹುಪಾಲು ಹುಬ್ಬಳ್ಳಿ-ಧಾರವಾಡ (668) ಹಾಗೂ ಗದಗ (104) ಮನೆಗಳನ್ನು ಕಟ್ಟಿಸಲಾಯಿತು. 1994-95 ನೆ ಸಾಲಿನಲ್ಲಿ ಮಂಡಳಿಯು ಹುಬ್ಬಳ್ಳಿಯ ಕೇಶವಾಪುರದ ಗಾಂಧೀವಾಡಾ ಕೊಳಚೆ ಪ್ರದೇಶದಲ್ಲಿ 392 ಮನೆಗಳ ನಿರ್ಮಾಣ ಮತ್ತು ಇತರೇ ಅವಶ್ಯ ಸೌಲಭ್ಯಗಳನ್ನು ಒದಗಿಸಲು ರೂ.129.19 ಲಕ್ಷ ಅಂದಾಜು ವೆಚ್ಚದ ಯೋಜನೆಯನ್ನು ಹಾಕಿಕೊಂಡಿರುವುದು.

## ಸ್ಥಾನಿಕ ಅಭಿವೃದ್ಧಿ ಸಮಿತಿಗಳು

ಲೋಕಲ್ ಫಂಡುಗಳ ಪ್ರಾರಂಭದೊಂದಿಗೆ 1863 ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಅವಶ್ಯಕತೆಗೆ ಅನುಸಾರವಾಗಿ ಮೂಲಭೂತ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವತ್ತ ಸರ್ಕಾರ ಗಮನ ಹರಿಸಿತು. ಆರು ವರ್ಷಗಳ ನಂತರ 1869 ರಲ್ಲಿ ಬೊಂಬಾಯಿ ಲೋಕಲ್ ಫಂಡ್ ಕಾನೂನನ್ನು ರಚಿಸುವ ಮೂಲಕ ಈ ಸ್ಥಳೀಯ ಸಂಸ್ಥೆಗಳಿಗೆ ಕಾನೂನಿನ ಅಸ್ತಿತ್ವವನ್ನು ನೀಡಲಾಯಿತು. ಸದರಿ ಕಾನೂನಿನ ಅನ್ವಯ ಪ್ರತೀ ಒಂದು ಜಿಲ್ಲೆಗೆ ಜಿಲ್ಲಾ ಲೋಕಲ್ ಫಂಡ್ ಕಮಿಟಿಗಳು ರಚನೆಗೊಂಡವು. ಲೋಕಲ್ ಫಂಡ ಹಣದಿಂದ ಸ್ಥಳೀಯವಾಗಿ ಶಿಕ್ಷಣ, ಕುಡಿಯುವ ನೀರಿನ ಪೂರೈಕೆ, ನೀರಾವರಿ ಕಾವಲಿಗಳು, ಧರ್ಮಶಾಲೆ, ದವಾಖಾನೆ, ಮುಂತಾದ ಸಾರ್ವಜನಿಕ ಉಪಯೋಗಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿತ್ತು. ಭೂ ಕಂದಾಯದ ಮೇಲೆ ರೂಪಾಯಿಗೆ ಒಂದು ಆಣೆಯಂತೆ ವಸೂಲಾದ ಹಣ, ಕೊಂಡವಾಡೆ, ಜಕಾತಿ, ನಾವೆಗಳು (ಹಾಯ್ಗಡಗಳ ಮೇಲಿನ ಸುಂಕ), ಶಾಲೆಗಳ ಫೀ ಮುಂತಾದವುಗಳಿಂದ ಬರುವ ಆದಾಯ, ಸರ್ಕಾರ ಮತ್ತು ಪುರಸಭೆಗಳಿಂದ ಬರುವ ಸಹಾಯ ಧನ, ಸರ್ಕಾರಿ ದಸ್ತಾವೇಜುಗಳ ಬಾಬತು ಬರುವ ಬಡ್ಡಿ, ಕೆಲವು ಭೂಮಿಯ ತೆರಿಗೆ, ಮುಂತಾದ ಕಿರುಕಳ ಮೂಲಗಳಿಂದ ಬರುವ ಹಣ, ಲೋಕಲ್ ಫಂಡಿಗೆ ಜಮೆಯಾಗುತ್ತಿತ್ತು. ಪ್ರತೀ ಒಂದು ಜಿಲ್ಲೆಗೆ ಒಂದರಂತೆ 'ಡಿಸ್ಟ್ರಿಕ್ ಲೋಕಲ್ ಫಂಡ್ ಕಮಿಟಿ', ತಾಲ್ಲೂಕಿಗೆ 'ತಾಲೂಕು ಫಂಡ್ ಕಮಿಟಿ'ಗಳು ಇರುತ್ತಿದ್ದವು. ಜಿಲ್ಲಾ ಫಂಡುಗಳ ಅಧ್ಯಕ್ಷರು ಜಿಲ್ಲಾಧಿಕಾರಿ (ಕಲೆಕ್ಟರ್)ಗಳಾಗಿರುತ್ತಿದ್ದರು. ಸದರಿ ಫಂಡಿನಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಸಹಾಯಕ ಕಲೆಕ್ಟರ ಮತ್ತು ಡೆಪ್ಯೂಟಿ ಕಲೆಕ್ಟರ್, ಕಾರ್ಯನಿರ್ವಾಹಕ ಇಂಜನಿಯರ್, ವಿದ್ಯಾ ಖಾತೆಯ ಇನ್‌ಸ್ಪೆಕ್ಟರ್, ಒಬ್ಬ ಇನಾಮದಾರರು ಮುಂತಾದ ಅಧಿಕಾರಿ ಸದಸ್ಯರು ಮತ್ತು ಅಧಿಕಾರೇತರರು ಇರುತ್ತಿದ್ದರು. ಈ ಸಮಿತಿಗಳಿಗೆ ಕೇವಲ ಸಲಹೆಸೂಚನೆ ನೀಡುವ ಅಧಿಕಾರ ಇತ್ತು. ಯಾವುದೇ ಕಾರ್ಯನಿರ್ವಾಹಕ ಅಧಿಕಾರ ಇರಲಿಲ್ಲ. ಅಂದಿನ ಲೋಕಲ್ ಫಂಡಿನ ಕಾರ್ಯಗಳನ್ನು ಕೇವಲ ಲೋಕೋಪಯೋಗಿ, ಮತ್ತು ಶಿಕ್ಷಣ ಎಂಬ ಎರಡು ವಿಭಾಗಗಳಾಗಿ ವಿಂಗಡಿಸಲಾಗಿತ್ತು. 1881-82 ರಲ್ಲಿ ಧಾರವಾಡ ಲೋಕಲ್ ಫಂಡಿನ ಜಮಾ ಮತ್ತು ಖರ್ಚಿನ ವಿವರ ಈ ರೀತಿ ಇತ್ತು. ಲೋಕೋಪಯೋಗಿ ವಿಭಾಗದಲ್ಲಿನ ಒಟ್ಟು ಆದಾಯ ಹಿಂದಿನ ಶಿಲ್ಕು ರೂ.52,770 ಸೇರಿದಂತೆ ರೂ.2.12 ಲಕ್ಷದಲ್ಲಿ ಬಹುಪಾಲು (ರೂ.1.17 ಲಕ್ಷ) ತೆರಿಗೆಯ ರೂಪದಲ್ಲಿ ಸಂಗ್ರಹಿಸಲಾಗಿತ್ತು. ಅದರ ನಂತರದ ಪ್ರಮುಖ ಆದಾಯದ ಮೂಲ ಜಕಾತಿ (ಆಕ್ಟ್ರಾಯ್)ಯಿಂದ (ರೂ.11.030) ಸಂಗ್ರಹವಾಗಿತ್ತು. ಈ ವಿಭಾಗದ ಒಟ್ಟು ಖರ್ಚು ರೂ.1.86 ಲಕ್ಷ ಆಗಿದ್ದರೆ, ಆ ಪೈಕಿ ರೂ.44,240 ದುರಸ್ತಿಗೆ, ರೂ.27,770 ನೌಕರರ ವೇತನಕ್ಕೆ ಖರ್ಚಾಗಿದ್ದರೆ, ಹೊಸ ಕಾಮಗಾರಿಗಳಿಗೆ ಮಾಡಿದ ವೆಚ್ಚ ರೂ.9,641 ಆಗಿತ್ತು. ಶಿಕ್ಷಣ ವಿಭಾಗದ ಒಟ್ಟು ಆದಾಯ ಹಿಂದಿನ ಶಿಲ್ಕು ರೂ.48,140 ಸೇರಿದಂತೆ ರೂ.1.53 ಲಕ್ಷ ಆಗಿತ್ತು. ಇದರಲ್ಲಿ ಬಹುಪಾಲು ಲೋಕಲ್‌ಫಂಡ ಶಿಕ್ಷಣ ತೆರಿಗೆ ರೂಪದಲ್ಲಿ ರೂ.58,730, ಸಹಾಯಧನವಾಗಿ ರೂ.26,810, ಶಿಕ್ಷಣ ಶುಲ್ಕ ರೂಪದಲ್ಲಿ ರೂ.12,760 ಸಂದಾಯವಾಗಿದ್ದವು. ಈ ವಿಭಾಗದ ಒಟ್ಟು ವೆಚ್ಚ ರೂ.1.28 ಲಕ್ಷ; ಆ ಪೈಕಿ ನೌಕರರ ಸಂಬಳಕ್ಕೆ ರೂ.88,420, ಶಾಲಾಕಟ್ಟಡಗಳ ನಿರ್ಮಾಣಕ್ಕೆ ರೂ.20,360, ಶಾಲೆಗಳ ನಿರ್ವಹಣೆಗೆ ರೂ.12,850 ಖರ್ಚಾಗಿತ್ತು ಎಂದು 1884 ರ ಗ್ಯಾಸೆಟಿಯರ್‌ನಲ್ಲಿ ವರದಿಯಾಗಿದೆ.

## ಜಿಲ್ಲಾ ಲೋಕಲ್ ಬೋರ್ಡ್ ಧಾರವಾಡ

ಇತ್ತೀಚಿನ 70-80 ವರ್ಷಗಳಲ್ಲಿ ಪಂಚಾಯತಿ ರಾಜ್ಯ ಸಂಸ್ಥೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಶೃಂಗಸಂಸ್ಥೆಯಾದ "ಜಿಲ್ಲಾ ಬೋರ್ಡ್" ಇವುಗಳ ರಚನೆ, ಕಾರ್ಯವಿಧಾನ, ಸ್ವಾಯುತ್ತತೆಯಲ್ಲಿ ಕಾಲಕಾಲಕ್ಕೆ ಸೂಕ್ತ ಬದಲಾವಣೆಗಳನ್ನು ಕಾಣಬಹುದು. ಮುಂಬಯಿ ಲೋಕಲ್ ಬೋರ್ಡ್ ಕಾಯಿದೆ 1923 ರ ಅನ್ವಯ ಪುರಸಭೆ\ನಗರಸಭೆ\ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಗ್ರಾಮೀಣ ಪ್ರದೇಶಗಳ

ಅಭಿವೃದ್ಧಿಗೆ ಸಹಾಯಕವಾಗುವಂತೆ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಯನ್ನು ರಚಿಸಲಾಯಿತು. 1951 ರಲ್ಲಿ ಬೋರ್ಡಿನ ಆಡಳಿತ ವ್ಯಾಪ್ತಿಗೆ ಒಳಪಟ್ಟ ಪ್ರದೇಶದ ವಿಸ್ತೀರ್ಣ 5,257.52 ಚ.ಮೈಲುಗಳಾಗಿತ್ತು. ಜನಸಂಖ್ಯೆ 11.98 ಲಕ್ಷ. ಬೋರ್ಡಿನ ಎಲ್ಲಾ ಸದಸ್ಯರು ಚುನಾಯಿತ ಪ್ರತಿನಿಧಿಗಳಾಗಿದ್ದು ಅವರ ಸಂಖ್ಯೆ 53 ಆಗಿತ್ತು; ಆ ಪೈಕಿ 7 ಮೀಸಲು ಸ್ಥಾನಗಳಾಗಿದ್ದವು. ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳಾಗಿದ್ದು ವಿಶೇಷ ಸಂದರ್ಭಗಳಲ್ಲಿ ಒಂದು ವರ್ಷ ಹೆಚ್ಚಿಸಬಹುದಾಗಿತ್ತು. ಬೋರ್ಡ್ ಅತ್ಯವಶ್ಯಕವಾಗಿ ನಿರ್ವಹಿಸಲೇಬೇಕಾದ ಅಭಿವೃದ್ಧಿ ಕೆಲಸಗಳಲ್ಲಿ ರಸ್ತೆಗಳ ನಿರ್ಮಾಣ, ಸಂಪರ್ಕವ್ಯವಸ್ಥೆ, ರಸ್ತೆ ಮತ್ತು ಇತರ ಸಂಪರ್ಕಮಾಧ್ಯಮಗಳ ನಿರ್ವಹಣೆ, ಆಸ್ಪತ್ರೆ, ದವಾಖಾನೆ, ಮಾರುಕಟ್ಟೆ, ಧರ್ಮಶಾಲೆ ಮತ್ತು ಇತರ ಸಾರ್ವಜನಿಕ ಉಪಯೋಗಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಕುಡಿಯುವ ನೀರು ಪೂರೈಸಲು ಸಹಾಯಕವಾಗುವಂತೆ ಕೆರೆ, ಕಾಲುವೆ, ಜಲಾಶಯ, ಬಾವಿ ಮುಂತಾದವುಗಳ ನಿರ್ಮಾಣ ಮತ್ತು ನಿರ್ವಹಣೆ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡಲು ಸಹಾಯಕವಾಗುವಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು, ರಸ್ತೆಯ ಬದಿಯಲ್ಲಿ ಮರ ನೆಡುವುದು ಇವೇ ಮುಂತಾದವುಗಳು. ಬೋರ್ಡಿನ ಆದಾಯದ ಮೂಲಗಳಲ್ಲಿ ಭೂ ಕಂದಾಯದ ಮೇಲಿನ ಉಪ ತೆರಿಗೆ (ಸೆಸ್) (ರೂಗೆ ಮೂರು ಆಣೆಯಂತೆ) ನೀರಿನ ತೆರಿಗೆಯ ಮೇಲಿನ ಉಪ ತೆರಿಗೆ, ಬೋರ್ಡಿನ ಆಸ್ತಿಯಿಂದ ಬರುವ ಆದಾಯ, ಸರ್ಕಾರದ ಸಹಾಯಧನ ಮುಂತಾದವುಗಳು ಪ್ರಮುಖವಾಗಿದ್ದವು. ನಗರ ಸಭೆಯ ವ್ಯಾಪ್ತಿಯಲ್ಲಿ ವಸೂಲಾದ ಭೂ ಕಂದಾಯದ ಮೇಲಿನ ಉಪ ತೆರಿಗೆಯಲ್ಲಿ 2/3 ಭಾಗವನ್ನು ಬೋರ್ಡ್ ಆಯಾ ನಗರ ಸಭೆಗಳಿಗೆ ನೀಡುತ್ತಿತ್ತು. ಸರ್ಕಾರದಿಂದ ಜಿಲ್ಲಾ ಬೋರ್ಡಿಗೆ ಪ್ರತೀವರ್ಷ ಭೂ ಕಂದಾಯದ ಶೇ.15 ರಷ್ಟನ್ನು ಅನುದಾನವಾಗಿ ನೀಡುವ ವ್ಯವಸ್ಥೆ ಇತ್ತು. ಜಿಲ್ಲಾ ಬೋರ್ಡ್‌ಗಳ ಮೇಲೆ ಕಲೆಕ್ಟರ್ (ಜಿಲ್ಲಾಧಿಕಾರಿ) ಸ್ಥಳೀಯ ಸಂಸ್ಥೆಗಳ ದಕ್ಷಿಣ ವಿಭಾಗದ ನಿರ್ದೇಶಕರು ಮತ್ತು ಸರ್ಕಾರ ಅಧಿಕಾರ ಹೊಂದಿದ್ದರು.

1952-53 ರಲ್ಲಿ ಧಾರವಾಡ ಜಿಲ್ಲಾ ಬೋರ್ಡ್ ಆದಾಯ 9 ವಿವಿಧ ಮೂಲಗಳಿಂದ ರೂ.17.50 ಲಕ್ಷ ಆಗಿತ್ತು, ಆ ಪೈಕಿ ರೂ.10.88 ಲಕ್ಷ ಸ್ಥಳೀಯ ತೆರಿಗೆಗಳ ಮೂಲಕ, ರೂ.3.51 ಲಕ್ಷ ಭೂಕಂದಾಯದ ಮೂಲಕ ಸಂದಾಯವಾಗಿತ್ತು ಎಂದು ಕಂಡುಬರುವುದು. ಸದರಿ ವರ್ಷದ ಖರ್ಚು ರೂ.14.98 ಲಕ್ಷ ಆಗಿದ್ದು, ಪ್ರಮುಖ ವೆಚ್ಚದ ಅಂಶಗಳಲ್ಲಿ ಸಿವಿಲ್ ಕಾಮಗಾರಿಗಳಿಗೆ ರೂ.8.25 ಲಕ್ಷ, ಶಿಕ್ಷಣಕ್ಕೆ ರೂ.3.49 ಲಕ್ಷ, ವೈದ್ಯಕೀಯ ನೆರವಿಗೆ ರೂ.1.74 ಲಕ್ಷ ಎಂದು ತಿಳಿದು ಬರುವುದು.

ಜಿಲ್ಲಾ ಬೋರ್ಡ ತನಗೆ ಬೇಕಾದ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸಂಪೂರ್ಣ ಅದಿಕಾರ ಹೊಂದಿತ್ತು. ಆದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಇಂಜನಿಯರ್ ಅವರ ನೇಮಕಾತಿ ವಿಷಯದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದಿದ್ದರೆ ಅಂತಹ ಅಧಿಕಾರಿಗಳ ಸಂಬಳದ 2/3 ರಷ್ಟನ್ನು ಸರ್ಕಾರ ಭರಿಸುತ್ತಿತ್ತು. ಬೊಂಬಾಯಿ ಪ್ರಾಥಮಿಕ ಶಿಕ್ಷಣ ಕಾನೂನು 1947 ರ ಅನ್ವಯ, 1949 ರಿಂದ ಜಿಲ್ಲಾ ಬೋರ್ಡ ಪ್ರಾಥಮಿಕ ಶಿಕ್ಷಣದ ಆಡಳಿತ ವಿಷಯದಲ್ಲಾಗಲಿ ಅಥವಾ ಹಣಕಾಸಿನ ವಿಷಯದಲ್ಲಾಗಲಿ ಯಾವುದೇ ಅಧಿಕಾರ ಹೊಂದಿರಲಿಲ್ಲ, ಕೇವಲ ಜಿಲ್ಲಾ ಸ್ಕೂಲ ಬೋರ್ಡ್‌ಗಳಿಗೆ ಚುನಾವಣೆಯನ್ನು ಮಾತ್ರ ನಡೆಸುವ ಅಧಿಕಾರ ಇತ್ತು. ಜಿಲ್ಲಾ ಲೋಕಲ್ ಬೋರ್ಡ್, ಸ್ಕೂಲ ಬೋರ್ಡಿಗೆ ಭೂಕಂದಾಯ ಮೇಲಿನ ಉಪ ತೆರಿಗೆಯಲ್ಲಿ ಮತ್ತು ನೀರಿನ ತೆರಿಗೆಯಲ್ಲಿ ರೂಪಾಯಿಗೆ 15 ಪೈಗಳಂತೆ (ಸುಮಾರು ಶೇ. 10 )ಹಣವನ್ನು ನೀಡುತ್ತಿತ್ತು.

1952 ರಲ್ಲಿ ಜಿಲ್ಲಾ ಬೋರ್ಡಿನ ನಿಯಂತ್ರಣದಲ್ಲಿ ಇದ್ದ ಒಟ್ಟು ರಸ್ತೆಗಳ ಉದ್ದ 839 ಮೈಲುಗಳು. ಧಾರವಾಡ ಜಿಲ್ಲೆಯಲ್ಲಿ ಸಂಸ್ಥಾನಗಳ ಪ್ರದೇಶಗಳು ವಿಲೀನಗೊಳ್ಳುವ ಪೂರ್ವದಲ್ಲಿ 1,273 ವಸತಿ ಗ್ರಾಮಗಳಿದ್ದವು. ಸಂಸ್ಥಾನಗಳ ಪ್ರದೇಶಗಳು ವಿಲೀನಗೊಂಡ ನಂತರ 150 ಹೊಸ ಗ್ರಾಮಗಳು ಜಿಲ್ಲಾ ಬೋರ್ಡ್ ಸುಪರ್ದಿಗೆ ಸೇರ್ಪಡೆಯಾದವು.. ರಾಜ್ಯ ಪುನರ್ ಘಟನೆಯ ನಂತರ 1959 ರ ಕಾನೂನಿನ ಪ್ರಕಾರ ಜಿಲ್ಲಾ ಬೋರ್ಡಗಳ ಬದಲಿಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ಅವು ಕೇವಲ ಅಧಿಕಾರಿಗಳಿಂದ ಕೂಡಿದ ಸಲಹಾ ಸಮಿತಿಗಳಾಗಿದ್ದವು. ಈ ವ್ಯವಸ್ಥೆಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾರ್ಯಗಳ ಪ್ರಮುಖ ವಾಹಿನಿಗಳಾಗಿದ್ದವು. ಅವುಗಳ ಸದಸ್ಯರನ್ನು ಚುನಾಯಿಸಲಾಗುತ್ತಿತ್ತು. ಈ ವಿಷಯವಾಗಿ ಪ್ರಮುಖ ಬದಲಾವಣೆಯನ್ನು 1987 ರಲ್ಲಿ ಜಿಲ್ಲಾ ಪರಿಷತ್ತುಗಳನ್ನು ಮಂಡಳ ಪಂಚಾಯತಿಗಳನ್ನು ರಚಿಸುವ ಮೂಲಕ ಮಾಡಲಾಯಿತು. ಜಿಲ್ಲಾ ಪರಿಷತ್ತುಗಳು ಸರ್ವಾಂಗೀಣ ಗ್ರಾಮೀಣ ಅಭಿವೃದ್ಧಿಯ ಕರ್ಣಧಾರತ್ವವನ್ನು ವಹಿಸಿದ್ದವು. ಈ ವ್ಯವಸ್ಥೆಯಲ್ಲಿ ತಾಲ್ಲೂಕು ಪಂಚಾಯತಿ ಸಮಿತಿಗಳನ್ನು ಕೇವಲ ಸಲಹಾ ಸಮಿತಿಗಳಂತೆ ಮಧ್ಯವರ್ತಿಯಂತೆ ಉಪಯೋಗಿಸಲಾಯಿತು. ಇವುಗಳು ಜಿಲ್ಲಾ ಪರಿಷತ್ತಿನ ಅಧೀನ ಸಂಸ್ಥೆಗಳಾಗಿ ನಾಮಮಾತ್ರ ಸಂಸ್ಥೆಗಳಾಗಿ ಮುಂದುವರಿದವು. ಇತ್ತೀಚೆಗೆ 1993 ರ ಕರ್ನಾಟಕ ಪಂಚಾಯತಿ

ರಾಜ್ ಕಾನೂನಿನ ಅನ್ವಯ ಮೂರು ಹಂತದ ಸಂಸ್ಥೆಗಳಾದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ವಾಡಿಕೆಯಂತೆ ಗ್ರಾಮ ಪಂಚಾಯತಿಗಳನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಆಡಳಿತ ವಿಕೇಂದ್ರೀಕರಣವನ್ನು ಸಾಧಿಸಲು ಪರಸ್ಪರ ಪೂರಕವಾಗುವಂತೆ ಪುನರ್ ರಚಿಸಲಾಗಿದೆ. ಈ ಬಗ್ಗೆ ಪ್ರತಿ ಒಂದು ಸಂಸ್ಥೆಯ ಕಾರ್ಯವಿಧಾನದ ವಿವರವನ್ನು ಮುಂದಿನ ಪುಟಗಳಲ್ಲಿ ನೀಡಿದೆ.

**ಪಂಚಾಯಿತಿ ರಾಜ್**

ರಾಜ್ಯ ಪುನರ್ ರಚನೆಯ ನಂತರ ಕರ್ನಾಟಕದಲ್ಲಿ 1960ರಿಂದ ಏಕರೂಪದ ಮತ್ತು ಸಮಗ್ರ ಪಂಚಾಯಿತಿರಾಜ್ ಕಾನೂನನ್ನು ಜಾರಿಯಲ್ಲಿ ತರಲಾಯಿತು. ಈ ವ್ಯವಸ್ಥೆ ಮೂರು ಹಂತದ ಸ್ಥಳೀಯ ಆಡಳಿತ ಸಂಸ್ಥೆಗಳನ್ನು ಒಳಗೊಂಡಿತ್ತು. ಅವುಗಳೆಂದರೆ ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯಿತಿಗಳು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ಜಿಲ್ಲೆಗೆ ಒಂದರಂತೆ ಜಿಲ್ಲಾಭಿವೃದ್ಧಿ ಸಮಿತಿಗಳು. ಗ್ರಾಮಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮಾತ್ರ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆಗಳಾಗಿದ್ದವು. ಜಿಲ್ಲಾಭಿವೃದ್ಧಿ ಸಮಿತಿ ಕೇವಲ ಅಧಿಕಾರಿಗಳಿಂದ ಕೂಡಿದ ಸಲಹಾ ಸಮಿತಿಯಾಗಿತ್ತು. ಸರ್ಕಾರದ ಬಹುಪಾಲು ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳು ತಾಲ್ಲೂಕು ಮಂಡಳಿಗಳ ಮೂಲಕ ನಡೆಯುತ್ತಿದ್ದವು. ಈ ಬಗೆಯ ಸ್ಥಳೀಯ ಆಡಳಿತ ವ್ಯವಸ್ಥೆ 1983ರವರೆಗೆ ಮುಂದುವರೆಯಿತು.

ಪಂಚಾಯಿತಿರಾಜ್ ಪರಿಕಲ್ಪನೆಯ ಮುಖ್ಯ ಉದ್ದೇಶ ಪ್ರಜೆಗಳಿಗೆ ಆಡಳಿತದಲ್ಲಿ ಹೆಚ್ಚಿನ ಅಧಿಕಾರ, ಆಡಳಿತದಲ್ಲಿ ವಿಕೇಂದ್ರೀಕರಣ ಮತ್ತು ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ ಸಾಧನೆ. ಇದಕ್ಕಾಗಿ 1983ರಲ್ಲಿ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತಿರಾಜ್ ಕಾನೂನನ್ನು ತರಲಾಯಿತು. ಈ ಕಾನೂನಿನಂತೆ ಪಂಚಾಯತಿರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗುವಂತೆ ಮಾಡುವುದು; ಆಡಳಿತದಲ್ಲಿ ವಿವಿಧ ಹಂತಗಳಲ್ಲಿ ವಿಕೇಂದ್ರೀಕರಣ, ಸ್ವಾಯತ್ತತೆ, ಸ್ವಾವಲಂಬನೆಗಳನ್ನು ಸಾಧಿಸುವುದು; ಸಾರ್ವಜನಿಕರು ಅಭಿವೃದ್ಧಿ ಚಟುವಟಿಕೆಯಲ್ಲಿ ಹೆಚ್ಚಿನ ಸಹಯೋಗ ನೀಡುವಂತೆ ಮಾಡುವುದು. ಈ ಕಾನೂನಿನ ಅನ್ವಯ ಮೂರು ಹಂತದ ಅಂದರೆ ಮಂಡಳ ಪಂಚಾಯತಿ, ತಾಲೂಕು ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್‌ಗಳು ರಚನೆಯಾದವು. ಹೊಸ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯತಿ ವ್ಯವಸ್ಥೆಯು ಜಾರಿಯಲ್ಲಿ ಬರಲಿಲ್ಲ. ಧಾರವಾಡ ಜಿಲ್ಲೆಯನ್ನು ಒಳಗೊಂಡಂತೆ ಈ ಚುನಾಯಿತ ಸ್ಥಳೀಯ ಸಂಸ್ಥೆಗಳು 1987ರಿಂದ ರಾಜ್ಯಾದಂತ ಅಸ್ತಿತ್ವದಲ್ಲಿ ಬಂದವು. ಈ ವ್ಯವಸ್ಥೆಯಲ್ಲಿ ಮಂಡಳ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ಮಾತ್ರ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆಗಳಾಗಿದ್ದವು; ತಾಲ್ಲೂಕು ಪಂಚಾಯತಿ ಸಮಿತಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರತ್ಯೇಕ ಹಣಕಾಸಿನ ಅಧಿಕಾರ ಇರಲಿಲ್ಲ. ಇವು ಕೇವಲ ಸಲಹಾ ಸಮಿತಿಗಳಂತೆ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಉಸ್ತುವಾರಿ ಸಂಸ್ಥೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಜಿಲ್ಲಾ ಪರಿಷತ್‌ಗಳು ಜಿಲ್ಲಾ ಮಟ್ಟದಲ್ಲಿ "ಸಮಾಂತರ ಸರ್ಕಾರದಂತೆ" ವ್ಯಾಪಕ ಅಧಿಕಾರ ಹೊಂದಿ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಕಾರ್ಯಗಳು ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್‌ಗಳ ಮೂಲಕ ನಡೆಸಲ್ಪಡುತ್ತಿದ್ದವು. ಮಂಡಳ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ಪ್ರತ್ಯೇಕವಾದ ಅಭಿವೃದ್ಧಿ ಯೋಜನೆಗಳನ್ನು ಸ್ವತಂತ್ರವಾಗಿ ಕೈಗೊಳ್ಳಲು ಅವಕಾಶ ಇತ್ತು. ಮಂಡಳ ಪಂಚಾಯತಿಗಳು ಗಾತ್ರದಲ್ಲಿ ಹಿಂದಿನ ಗ್ರಾಮಪಂಚಾಯತಿಗಿಂತ ಬಹುದೊಡ್ಡದಾಗಿದ್ದವು, ಮತ್ತು ವ್ಯಾಪಕ ಅಧಿಕಾರವನ್ನು ಹೊಂದಿದ್ದವು. ಸಾಮಾನ್ಯವಾಗಿ 8 ರಿಂದ 12 ಸಾವಿರ ಮೀರದ ಜನಸಂಖ್ಯೆ ಇರುವ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದು ಮಂಡಳ ಪಂಚಾಯತಿಯನ್ನು ರಚಿಸಲಾಗಿತ್ತು. ರಾಜ್ಯದಲ್ಲಿ ಸುಮಾರು 2,500 ಮಂಡಳ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಈ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅಧಿಕಾರದ ಅವಧಿ 5 ವರ್ಷಗಳಾಗಿದ್ದವು. ಈ ಕಾನೂನಿನ ಅನ್ವಯ ಸ್ಥಳೀಯ ಸಂಸ್ಥೆಗಳ ಮತದಾರರ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಲಾಯಿತು. ಒಟ್ಟು ಸದಸ್ಯರ ಪೈಕಿ ಶೇ.25ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಶೇ.18ರಷ್ಟು ಜಾಗಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಕಾಯ್ದಿಡಲಾಗಿತ್ತು. ಹಿಂದುಳಿದ ವರ್ಗದ ಜನರಿಗೆ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತಿಗಳಲ್ಲಿ ನಾಮಕರಣ ಮಾಡಬಹುದಾಗಿತ್ತು. ಈ ಆಡಳಿತ ವ್ಯವಸ್ಥೆಯು ಸುಮಾರು ಐದು ವರ್ಷಗಳ ಕಾಲ ಅಂದರೆ 1992ರವರೆಗೆ ಮುಂದುವರೆಯಿತು.

## ಕರ್ನಾಟಕ ಪಂಚಾಯತಿ ಕಾನೂನು 1993

ಪಂಚಾಯತಿರಾಜ್ ಸಂಸ್ಥೆಗಳನ್ನು ಇನ್ನೂ ಹೆಚ್ಚು ಬಲಪಡಿಸುವ ಮತ್ತು ಆಡಳಿತದಲ್ಲಿ ಆಯಾ ಹಂತಗಳಲ್ಲಿ ವಿಕೇಂದ್ರೀಕರಣ, ದಕ್ಷತೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ಸೌಲಭ್ಯ, ಮೂರೂ ಹಂತಗಳಲ್ಲಿ ಚುನಾಯಿತ ಮಂಡಳಿಯ ರಚನೆ ಒಳಗೊಂಡಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ಕರ್ನಾಟಕ ಪಂಚಾಯತಿರಾಜ್ ಕಾನೂನು 1993ನ್ನು ಮೇ ತಿಂಗಳಲ್ಲಿ ಜಾರಿಯಲ್ಲಿ ತರಲಾಯಿತು. ಇದರಿಂದ ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಳ ಪಂಚಾಯತಿಗಳು, ತಾಲ್ಲೂಕು ಪಂಚಯತ್ ಸಮಿತಿಗಳು ಹಾಗೂ ಜಿಲ್ಲಾ ಪರಿಷತ್‌ಗಳು ರದ್ದಾದವು.

ಸದ್ಯದ 1993 ಕರ್ನಾಟಕ ಪಂಚಾಯತಿರಾಜ್ ಕಾನೂನಿನ ಅನ್ವಯ ಮೂರು ಹಂತದ ಅಂದರೆ ಗ್ರಾಮಮಟ್ಟದಲ್ಲಿ ಗ್ರಾಮಪಂಚಾಯತಿ, ಪ್ರತಿ ತಾಲೂಕಿಗೆ ಒಂದರಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲೆಗೆ ಒಂದರಂತೆ ಜಿಲ್ಲಾ ಪಂಚಾಯತಿ ರಚನೆಗೆ ಅವಕಾಶ ಇರುವುದು.

### ಗ್ರಾಮ ಪಂಚಾಯತಿ

ಪಂಚಾಯತಿರಾಜ್ ಸಂಸ್ಥೆಗಳಲ್ಲಿ ಗ್ರಾಮಪಂಚಾಯತಿಯು ಬಹುಮುಖ್ಯವಾದ ಮತ್ತು ಬಹುಹಿಂದಿನಿಂದಲೂ ರೂಢಿಯಲ್ಲಿದ್ದ ಮೂಲಭೂತವಾದ ಸಂಸ್ಥೆ. 'ಗ್ರಾಮ ಸ್ವರಾಜ್ಯ' ಮತ್ತು 'ಸುರಾಜ್ಯ' ಸ್ಥಾಪಿಸುವಲ್ಲಿ ಈ ಸಂಸ್ಥೆಗೆ ಹೆಚ್ಚಿನ ಮಹತ್ವ ಉಂಟು. ಪ್ರಚಲಿತ ಕಾನೂನಿನ ಪ್ರಕಾರ ಐದರಿಂದ ಏಳುಸಾವಿರ ಪ್ರಜಾಸಂಖ್ಯೆಯುಳ್ಳ ಗ್ರಾಮ ಅಥವಾ ಅಕ್ಕಪಕ್ಕದಲ್ಲಿ ಹೊಂದಿಕೊಂಡಿರುವ ಹಲವಾರು ಚಿಕ್ಕ ಚಿಕ್ಕ ಗ್ರಾಮಗಳನ್ನು ಸೇರಿಸಿ ಒಂದು 'ಗ್ರೂಪ್' ಗ್ರಾಮಪಂಚಾಯತಿಯನ್ನು ರಚಿಸಲು ಅವಕಾಶವಿದೆ. ವಿಶೇಷ ಸಂದರ್ಭಗಳಲ್ಲಿ ಅಂದರೆ ಮಲೆನಾಡು ಮತ್ತು ಬೆಟ್ಟ ಪ್ರದೇಶಗಳಲ್ಲಿ 2,500 ಜನಸಂಖ್ಯೆಯನ್ನು ಒಳಗೊಂಡಂತೆ ಸೀಮಿತ ಪ್ರದೇಶಕ್ಕೆ ಸಹ ಒಂದು ಗ್ರಾಮಪಂಚಾಯತಿಯನ್ನು ರಚಿಸಬಹುದಾಗಿದೆ. ಹೊಸ ಕಾನೂನಿನ ಅನ್ವಯ ರಾಜ್ಯದಲ್ಲಿ ಸುಮಾರು 5,645 ಗ್ರಾಮ ಪಂಚಾಯತಿಗಳು ರಚನೆಯಾಗಿವೆ. ಮೊದಲಿಗೆ ಇದ್ದ ಮಂಡಳ ಪಂಚಾಯತಿಗಳ ಸಂಖ್ಯೆ ಸುಮಾರು 2,500. ಗ್ರಾಮಪಂಚಾಯತಿಗಳಿಗೆ ಪ್ರತಿ ನಾಲ್ಕು ನೂರು ಜನಸಂಖ್ಯೆಗೆ ಒಬ್ಬರಂತೆ ಪ್ರತಿನಿಧಿಗಳ ಆಯ್ಕೆ ಮಾಡಲಾಗುವುದು. ಚುನಾಯಿತ ಸದಸ್ಯರ ಅಧಿಕಾರ ಅವಧಿ ಐದು ವರ್ಷಗಳು. ಗ್ರಾಮಪಂಚಾಯತಿಯ ಮಟ್ಟದಲ್ಲಿ ನಡೆಯುವ ಚುನಾವಣೆಗಳು ಪಕ್ಷರಹಿತವಾಗಿರುವುದು ಈ ಹೊಸಕಾನೂನಿನ ವೈಶಿಷ್ಟ್ಯ. ಇದರಿಂದ ಗ್ರಾಮದಲ್ಲಿ ರಾಜಕೀಯ ಅಸೂಯೆ, ದ್ವೇಷ, ಅಶಾಂತಿ, ಬೆಳೆಯಲು ಅವಕಾಶವಾಗುವುದಿಲ್ಲ ಎಂದು ನಂಬಲಾಗಿದೆ. ಇದೂ ಅಲ್ಲದೇ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಎಲ್ಲಾ ವರ್ಗಗಳಲ್ಲಿ, ಮೂರನೇಯ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡಬೇಕು, ಅಲ್ಲದೇ ಇತರೇ ಹಿಂದುಳಿದವರಿಗೆ ಸಹ ಮೂರನೇಯ ಒಂದರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಹೊಸ ವ್ಯವಸ್ಥೆಯಲ್ಲಿ ಗ್ರಾಮ ತಾಲ್ಲೂಕು ಜಿಲ್ಲೆಯ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದ ಹುದ್ದೆಗಳಿಗೂ ಮೀಸಲಾತಿಯ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಹಿಂದೆ ರೂಢಿಯಲ್ಲಿದ್ದ ಸದಸ್ಯರ ನಾಮಕರಣ ಪದ್ಧತಿಯನ್ನು ತೆಗೆದುಹಾಕಲಾಗಿದೆ.

### ಗ್ರಾಮಸಭೆ

ಗ್ರಾಮ ಪಂಚಾಯತಿ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮಸಭೆಗೆ ಹೆಚ್ಚಿನ ಮಹತ್ವ ಉಂಟು. ಸಮಗ್ರ ಗ್ರಾಮದ ಮತದಾರರನ್ನು ಒಳಗೊಂಡ ಸಭೆಯೇ ಗ್ರಾಮಸಭೆಯು. ಈ ಸಭೆಯು ಕನಿಷ್ಟ ಆರು ತಿಂಗಳಿಗೆ ಒಮ್ಮೆಯಾದರೂ ಸೇರಲೇಬೇಕು. ಇದು ಗ್ರಾಮದ ಸರ್ವಸದಸ್ಯರ ಸಭೆ. ಇದರ ಅಧ್ಯಕ್ಷತೆಯನ್ನು ಪಂಚಾಯತಿಯ ಅಧ್ಯಕ್ಷರು ವಹಿಸುವರು. ಈ ಸಭೆಗೆ ಗ್ರಾಮಪಂಚಾಯತಿಯ ಆಡಳಿತ ವರದಿ, ಅಭಿವೃದ್ಧಿ ಕಾರ್ಯಗಳ ಯೋಜನಾ ವರದಿ, ಗ್ರಾಮಕ್ಕೆ ಆಗಬೇಕಾದ ಸೌಕರ್ಯಗಳು, ಜನರ ಸಮಸ್ಯೆಗಳು ಮುಂತಾದ ಹಲವಾರು ಮಹತ್ವದ ವಿಷಯಗಳನ್ನು ಚರ್ಚಿಸುವ ಮತ್ತು ನಿರ್ಣಯಿಸುವ ಅಧಿಕಾರ ಉಂಟು. ಈ ಸಭೆಯು ಗ್ರಾಮದ ಸಮಸ್ಯೆಗಳನ್ನು ಚರ್ಚಿಸಲು, ಪರಿಹಾರ ಕಂಡು ಹಿಡಿಯಲು ಸಹಾಯಕವಾಗುವ ಸಾರ್ವಜನಿಕ ವೇದಿಕೆಯಂತೆ ಕೆಲಸ ಮಾಡಬೇಕು. ಸರ್ಕಾರ ನೀಡುವ ವಿವಿಧ ಸವಲತ್ತುಗಳನ್ನು ಪಡೆಯಲು ಫಲಾನುಭವಿಗಳನ್ನು ಆಯ್ಕೆಮಾಡುವ ಅಧಿಕಾರವೂ ಗ್ರಾಮಸಭೆಗೆ ಉಂಟು. ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ, ಪರಸ್ಪರ ಸಹಬಾಳುವೆ ಮುಂತಾದವುಗಳನ್ನು ಉಂಟುಮಾಡುವುದು, ವಯಸ್ಕರ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸುವುದು ಗ್ರಾಮ ಸಭೆಯ ಹೊಣೆಗಾರಿಕೆಯಾಗಿರುವುದು. ಗ್ರಾಮಸಭೆಯ ನಿರ್ಣಯಗಳನ್ನು ಕಾರ್ಯ ರೂಪದಲ್ಲಿ ತರುವುದು

ಗ್ರಾಮಪಂಚಾಯತಿ ಕರ್ತವ್ಯ. ಪಂಚಾಯತಿಯು ಕನಿಷ್ಟ ಪಕ್ಷ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರಿ ತನ್ನ ಕಾರ್ಯಕಲಾಪಗಳನ್ನು ನಡೆಸಬೇಕು. ಪಂಚಾಯತಿಯ ಆಡಳಿತ ಸಮರ್ಪಕವಾಗಿ ನಡೆಯಲು ಸಹಾಯಕವಾಗುವಂತೆ ಹಲವಾರು ಉಪಸಮಿತಿಗಳನ್ನು ರಚಿಸಬಹುದಾಗಿದೆ. ಪ್ರತೀ ಒಂದು ಗ್ರಾಮಪಂಚಾಯತಿಗೆ ಸರ್ಕಾರವು ಒಂದು ಲಕ್ಷ ರೂಪಾಯಿ ಅನುದಾನ ನೀಡುವುದು. ಈ ಅನುದಾನವನ್ನು ಕೇವಲ ಅತ್ಯವಶ್ಯಕ ವೆಚ್ಚಗಳಾದ ವಿದ್ಯುತ್ ಪೂರೈಕೆ, ನೀರು ಸರಬರಾಜು, ಗ್ರಾಮ ನೈರ್ಮಲ್ಯ ಮುಂತಾದವುಗಳಿಗೆ ಮಾತ್ರ ಖರ್ಚು ಮಾಡುವುದು. ಗ್ರಾಮಪಂಚಾಯತಿಯ ಕೆಲಸ ಕಾರ್ಯಗಳನ್ನು ಪಂಚಾಯತಿ ಕಾರ್ಯದರ್ಶಿ ನಿರ್ವಹಿಸುವರು.

**ಕರ್ತವ್ಯಗಳು :** ಗ್ರಾಮಪಂಚಾಯತಿಗಳು ನಿರ್ವಹಿಸಬೇಕಾದ ಕರ್ತವ್ಯಗಳು ವ್ಯಾಪಕವಾಗಿದ್ದು ಹೊಸ ಕಾನೂನಿನ ಅನ್ವಯ ಸುಮಾರು 30 ವಿವಿಧ ಬಗೆಯ ಅಭಿವೃದ್ಧಿ ಕಾರ್ಯಗಳನ್ನು ಪಂಚಾಯತಿಗಳು ಕೈಗೊಳ್ಳಬಹುದಾಗಿದೆ. ಅವುಗಳಲ್ಲಿ ಬಹುಮುಖ್ಯವಾದವುಗಳು: 1) ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯಪಾಲನೆ, (2) ಶುದ್ಧವಾದ ಕುಡಿಯುವ ನೀರಿನ ಪೂರೈಕೆ (3) ಬೀದಿ ದೀಪದ ವ್ಯವಸ್ಥೆ, ಚರಂಡಿಗಳ ವ್ಯವಸ್ಥೆ, (4) ವ್ಯವಸಾಯ ಅಭಿವೃದ್ಧಿ, (5) ಪಶುಸಂಗೋಪನೆ, (6) ಸಾಮಾಜಿಕ ಅರಣ್ಯೀಕರಣ, (7) ಗ್ರಾಮವಸತಿ, (8) ಖಾದೀ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಅಭಿವೃದ್ಧಿ, (9) ರಸ್ತೆ, ಕಟ್ಟಡ ಮುಂತಾದವುಗಳ ಅಭಿವೃದ್ಧಿ, (10) ಪ್ರಾಥಮಿಕ ಶಿಕ್ಷಣ, (11) ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, (12) ಸಂತೆ ಮಾರುಕಟ್ಟೆಗಳ ಅಭಿವೃದ್ಧಿ (13) ಮಹಿಳಾ ಮತ್ತು ಮಕ್ಕಳ ಕಲ್ಯಾಣ, (14) ನಾಗರಿಕ ಪೂರೈಕೆ, (15) ಪರಿಶಿಷ್ಟ ಜಾತಿ / ಪಂಗಡ ಮತ್ತು ಹಿಂದುಳಿದವರ ಅಭಿವೃದ್ಧಿ ಮತ್ತು (16) ಸರ್ಕಾರದಿಂದ ಕಾಲಕಾಲಕ್ಕೆ ನಿರ್ದೇಶಿಸಲ್ಪಡುವ ಇತರೇ ಅಭಿವೃದ್ಧಿ ಕಾರ್ಯಗಳು.

**ಹಣಕಾಸು :** ಗ್ರಾಮಪಂಚಾಯತಿಯು ತನ್ನ ಆಡಳಿತ ವ್ಯಾಪ್ತಿಯಲ್ಲಿ ಹಲವಾರು ತೆರಿಗೆಗಳನ್ನು ವಿಧಿಸಬಹುದಾಗಿದೆ. ಅವುಗಳೆಂದರೆ ಮನೆ ಕಂದಾಯ, ಖಾಲಿ ಇರುವ ನಿವೇಶನಗಳ ಮೇಲಿನ ಕಂದಾಯ, ನೀರಿನ ತೆರಿಗೆ, ಮನರಂಜನಾ ತೆರಿಗೆ, ಮೋಟಾರು ವಾಹನಗಳನ್ನು ಹೊರತು ಇತರೇ ವಾಹನಗಳ ಮೇಲಿನ ತೆರಿಗೆ, ಜಾತ್ರೆಯ ಸಮಯದಲ್ಲಿ ಯಾತ್ರಿಕರ ಮೇಲಿನ ಅಭಿವೃದ್ಧಿ ತೆರಿಗೆ, ಮಾರುಕಟ್ಟೆಯ ಸುಂಕ, ಇತ್ಯಾದಿಗಳು. ಸರ್ಕಾರವು ಭೂಕಂದಾಯದ ಮೇಲೆ ವಿಧಿಸುವ ಸ್ಥಳೀಯ ಉಪತೆರಿಗೆ (ಸೆಸ್)ಗಳ ಸಂಪೂರ್ಣ ಮೊತ್ತವನ್ನು ಸಂಬಂಧಪಟ್ಟ ಗ್ರಾಮಪಂಚಾಯತಿಗಳಿಗೆ ವರ್ಗಾಯಿಸುವುದು. ವಿಶೇಷ ಸಂದರ್ಭಗಳಲ್ಲಿ ಸರ್ಕಾರವು ಪಂಚಾಯತಿಗಳಿಗೆ ಅನುದಾನವನ್ನು ನೀಡುವುದು. ಪ್ರತಿ ಗ್ರಾಮಪಂಚಾಯತಿಯು ತನ್ನದೇ ಆದ ಗ್ರಾಮಪಂಚಾಯತಿಯ ಫಂಡನ್ನು (ನಿಧಿ) ಹೊಂದಿರಬಹುದಾಗಿದೆ.

**ತಾಲೂಕು ಪಂಚಾಯಿತಿ**

ಪ್ರತಿಯೊಂದು ಕಂದಾಯ ತಾಲ್ಲೂಕಿಗೆ ಒಂದರಂತೆ ಈ ಪಂಚಾಯತಿಗಳು ರಚನೆಗೊಂಡಿರುವವು. ತಾಲ್ಲೂಕು ಪಂಚಾಯತಿಯು ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಯಂತೆ ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿದ್ದು ಅದರ ಕಾರ್ಯ ವ್ಯಾಪ್ತಿಯು ಆಯಾ ತಾಲ್ಲೂಕಿನಲ್ಲಿ ಬರುವ ನಗರಸಭೆ, ಪುರಸಭೆ, ಮಹಾನಗರಪಾಲಿಕೆ ಇವುಗಳನ್ನು ಹೊರತುಪಡಿಸಿ ಉಳಿದ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿರುವುದು. ತಾಲ್ಲೂಕು ಪಂಚಾಯತಿಯು ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಒಬ್ಬರಂತೆ (ಕನಿಷ್ಟ ಪಕ್ಷ 11 ಜನ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವುದು). ಚುನಾಯಿತರಾದ ಜನತಾ ಪ್ರತಿನಿಧಿಗಳು , ಆಯಾ ತಾಲ್ಲೂಕುಗಳನ್ನು ಸಂಪೂರ್ಣ ಅಥವಾ ಭಾಗಶಃ ಪ್ರತಿನಿಧಿಸುವ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು, ಆಯಾ ತಾಲ್ಲೂಕಿನಲ್ಲಿ ಮತದಾರರೆಂದು ನೊಂದಾಯಿಸಲ್ಪಟ್ಟ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರನ್ನು ಸಹ ಒಳಗೊಂಡಿರುವುದು. ತಾಲ್ಲೂಕು ಪಂಚಾಯತಿಯು ತಾಲ್ಲೂಕಿನಲ್ಲಿರುವ ಗ್ರಾಮಪಂಚಾಯತಿಗಳ 1/5 ಭಾಗದಷ್ಟು ಅಧ್ಯಕ್ಷರುಗಳನ್ನು ಸಹ ಸರತಿಯ ಪ್ರಕಾರ ಒಂದು ವರ್ಷದ ಅವಧಿಗೆ ಒಳಗೊಂಡಿರುವುದು. ತಾಲೂಕು ಪಂಚಾಯತಿಯಲ್ಲಿ ಕನಿಷ್ಟ ಶೇ. 18ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ, ಒಟ್ಟು ಸ್ಥಾನಗಳ ಪೈಕಿ ಶೇ. 33/3 ಮಹಿಳೆಯರಿಗೆ ಮತ್ತು ಹಿಂದುಳಿದವರಿಗೆ ಪ್ರತ್ಯೇಕವಾಗಿ ಕಾಯ್ದಿರಿಸಲಾಗುವುದು.

ತಾಲೂಕು ಪಂಚಾಯತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕ ತಪಾಸಣೆ ಮತ್ತು ಯೋಜನಾ ಸಮಿತಿ, ಮತ್ತು ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸಿಕೊಳ್ಳಬಹುದಾಗಿದೆ. ಗ್ರಾಮ ಪಂಚಾಯತಿಗಳ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಪಡೆದವರೆಲ್ಲರೂ ತಾಲೂಕು ಪಂಚಾಯತಿಯ ಚುನಾವಣೆಯಲ್ಲಿ ಭಾಗವಹಿಸಬಹುದು ಮತ್ತು ಆಯಾ ತಾಲೂಕಿನ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದವರು ಚುನಾವಣೆಯಲ್ಲಿ ಪ್ರತಿನಿಧಿಗಳಾಗಬಹುದು. ಚುನಾಯಿತ

ಪ್ರತಿನಿಧಿಗಳ ಅಧಿಕಾರದ ಅವಧಿ ಐದು ವರ್ಷಗಳು, ಚುನಾಯಿತ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಆರಿಸುವರು. ತಾಲೂಕು ಪಂಚಾಯತಿಯು ಕನಿಷ್ಟ ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರಿ ತನ್ನ ಕಾರ್ಯಕಲಾಪಗಳನ್ನು ನಡೆಸಬೇಕು. ತಾಲೂಕು ಪಂಚಾಯತಿಯ ಅಧ್ಯಕ್ಷರು ಪಂಚಾಯತಿಯ ಎಲ್ಲಾ ವಿಧವಾದ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸಿಬ್ಬಂದಿಯ ನಿಯಂತ್ರಣ, ಆಡಳಿತಾತ್ಮಕ ಮತ್ತು ಹಣಕಾಸಿನ ನಿರ್ವಹಣೆ, ಗೊತ್ತುವಳಿಗಳ ನಿರ್ಣಯ, ಸ್ಥಾಯೀಸಮಿತಿಗಳ ನಿರ್ವಹನೆ, ಮುಂತಾದ ಅಧಿಕಾರಗಳನ್ನು ಕಾನೂನುದತ್ತವಾಗಿ ಹೊಂದಿರುವರು. ತಾಲ್ಲೂಕು ಪಂಚಾಯತಿಯ ಸಿಬ್ಬಂದಿ ವೆಚ್ಚವನ್ನು ಭರಿಸಲು ಸರ್ಕಾರವು ಗೊತ್ತಾದ ಪ್ರಮಾಣದಲ್ಲಿ ಅನುದಾನವನ್ನು ನೀಡುವುದು.

ಧಾರವಾಡ ಜಿಲ್ಲೆಯಲ್ಲೂ 17 ತಾಲ್ಲೂಕು ಪಂಚಾಯತಿಗಳಿಗೆ ಮಾರ್ಚ್ 1995ರಲ್ಲಿ ಚುನಾವಣೆಗಳನ್ನು ನಡೆಸಲಾಯಿತು. ತಾ.ಪ.ಗಳ ಒಟ್ಟು ಸದಸ್ಯರ ಸಂಖ್ಯೆ 248.

**ಕರ್ತವ್ಯಗಳು** : ತಾಲೂಕು ಪಂಚಾಯತಿಯು ಕಾಲಕಾಲಕ್ಕೆ ಸರ್ಕಾರವು ಸೂಚಿಸುವ ಯಾವುದೇ ಕರ್ತವ್ಯಗಳನ್ನು ನಿರ್ವಹಿಸ ಬೇಕಾಗುವುದು. ಹೊಸ ಪಂಚಾಯತಿ ಕಾನೂನಿನಲ್ಲಿ ತಾಲೂಕು ಪಂಚಾಯತಿಗೆ ಸರ್ಕಾರವು 27 ವಿವಿಧ ಬಗೆಯ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ವಹಿಸಿ ಕೊಟ್ಟಿದೆ. ಅವುಗಳೆಂದರೆ : 1) ರಾಜ್ಯ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿ ಸೂಚಿಸಿದ ವಾರ್ಷಿಕ ಯೋಜನೆಯ ಕರಡು ತಯಾರಿಕೆ ಮತ್ತು ತಾಲೂಕಿನ ಆಯವ್ಯಯ ಪತ್ರ ತಯಾರಿಕೆ; 2) ವ್ಯವಸಾಯ ಮತ್ತು ವ್ಯವಸಾಯ ವಿಸ್ತರಣಾ ಯೋಜನೆಗಳು, (3) ಜಮೀನು ಅಭಿವೃದ್ಧಿ ಮತ್ತು ಭೂ ಸಂರಕ್ಷಣೆ, (4) ಚಿಕ್ಕ ನೀರಾವರಿ ಯೋಚನೆಗಳ ನಿರ್ಮಾನ ನೀರಿನ ಸಮರ್ಪಕ ಬಳಕೆ ಮತ್ತು ನಿರ್ವಹಣೆ, (5) ಪಶುಪಾಲನೆ, ಹೈನು ಅಭಿವೃದ್ಧಿ, ಮೀನುಗಾರಿಕೆ ಅಭಿವೃದ್ಧಿ (6) ಗೃಹಕೈಗಾರಿಕೆ ಮತ್ತು ಗ್ರಾಮೀಣ ವಸತಿ ಯೋಜನೆ, (7) ಗ್ರಾಮಾಂತರ ಕುಡಿಯುವ ನೀರಿನ ಯೋಜನೆ, (8) ಸಾಂಪ್ರದಾಯಿಕವಲ್ಲದ ಇಂಧನ ಶಕ್ತಿಯ ಬಳಕೆ, (9) ಗ್ರಾಮೀಣ ನೈರ್ಮಲ್ಯ, (10) ರಸ್ತೆ, ಚರಂಡಿಗಳ ನಿರ್ಮಾಣ, (11) ತಾಲೂಕು ಪಂಚಾಯತಿಯ ಆಸ್ತಿಗಳ ನಿರ್ವಹಣೆ ಮತ್ತು ರಕ್ಷಣೆ, (12) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ - ತಾಂತ್ರಿಕ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ, (13) ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಅಭಿವೃದ್ಧಿ, (14) ಸಮಾಜ ಕಲ್ಯಾಣ (15) ಗ್ರಾಮೀಣ ವಿದ್ಯುತ್ತೀಕರಣ (16) ಸಹಕಾರಿ ಚಟುವಟಿಕೆಗಳ ಅಭಿವೃದ್ಧಿ ಮುಂತಾದವುಗಳು.

### ಜಿಲ್ಲಾ ಪಂಚಾಯತ್

ಹಿಂದಿನ ಜಿಲ್ಲಾ ಬೋರ್ಡ್, ಜಿಲ್ಲಾ ಪರಿಷತ್ ಬದಲಿಗೆ ಹೊಸ ಕಾನೂನಿನಲ್ಲಿ ಜಿಲ್ಲಾ ಪಂಚಾಯತ್ ಎಂಬ ಸ್ವಯಂ ಆಡಳಿತ ಸಂಸ್ಥೆಯನ್ನು ರಚಿಸಲು ಅವಕಾಶ ಇರುವುದು. ಪಂಚಾಯತಿರಾಜ್ಯ ಸಂಸ್ಥೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಇದು ಅತ್ಯಂತ ಪ್ರಮುಖವಾದುದು ಮತ್ತು ಹೆಚ್ಚು ಅಧಿಕಾರಯುತವಾದದ್ದು. ಬಹುಪಾಲು ರಾಜ್ಯದ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಈ ಸಂಸ್ಥೆಯ ಮೂಲಕ ಗ್ರಾಮಸ್ಥರಿಗೆ ತಲುಪುವವು. ಜಿಲ್ಲಾ ಪಂಚಾಯತಿಯ ಆಡಳಿತ ವ್ಯಾಪ್ತಿಯು ಆ ಜಿಲ್ಲೆಯಲ್ಲಿ ಇರುವ ನಗರಸಭೆ, ಪುರಸಭೆ, ಮಹಾನಗರ ಪಾಲಿಕೆ, ಅಧಿಸೂಚಿತ ಪ್ರದೇಶ, ನೈರ್ಮಲ್ಯ ಮಂಡಳಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹೊರತುಪಡಿಸಿ ಗ್ರಾಮೀಣ ಪ್ರದೇಶಗಳಿಗೆ ವ್ಯಾಪಿಸಿರುವುದು. ಜಿಲ್ಲಾ ಪಂಚಾಯತಿಯು ಚುನಾಯಿತ ಸದಸ್ಯರಲ್ಲದೇ ಆ ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ ಮತ್ತು ರಾಜ್ಯ ಸಭೆಯ ಸದಸ್ಯರು, ರಾಜ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನೂ ಸಹ ಒಳಗೊಂಡಿರುವುದು ಎಲ್ಲಾ ತಾಲೂಕು ಪಂಚಾಯತಿಗಳ ಅಧ್ಯಕ್ಷರೂ ಸಹ ಈ ಸಭೆಯ ಸದಸ್ಯರಾಗಿರುವರು.

ಜಿಲ್ಲಾ ಪಂಚಾಯತಿಗೆ ಪ್ರತಿ 40 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಚುನಾಯಿತ ಸದಸ್ಯರು ಇರುವರು. ಆದರೆ ಕೊಡಗು, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಪ್ರತಿ 30,000 ಜನಸಂಖ್ಯೆಗೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಬಹುದು. ಪರಿಶಿಷ್ಟಜಾತಿ, ಪಂಗಡ ಹಿಂದುಳಿತ ವರ್ಗದವರಿಗೆ ಕಾನೂನುರೀತ್ಯಾ ಮೀಸಲಾತಿ ಉಂಟು. ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಯಲ್ಲಿ ಎಲ್ಲಾ ವರ್ಗಗಳಿಗೂ ಅನ್ವಯವಾಗುವಂತೆ ಮೂರನೇಯ ಒಂದು ಭಾಗದಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿರವವು. ಚುನಾಯಿತ ಸದಸ್ಯರ ಅಧಿಕಾರ ಅವಧಿಯು ಐದು ವರ್ಷಗಳು.

**ಅಧ್ಯಕ್ಷರು ಮತ್ತು ಉಪಾಧ್ಯಕ್ಷರು :** ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವರು. ಇವರಿಗೆ ನೀಡುವ ಸಂಬಳ, ಸಾರಿಗೆ, ಅನುಕೂಲ, ಭತ್ಯೆಗಳು ಮತ್ತು ಇತರೇ ಸೌಲಭ್ಯಗಳನ್ನು ಸರ್ಕಾರವು ಗೊತ್ತು ಮಾಡುವುದು.

**ಆಡಳಿತ :** ಪ್ರಚಲಿತ ಕಾನೂನಿನ ಅನ್ವಯ ಜಿಲ್ಲಾ ಪಂಚಾಯತಿಯು ಕನಿಷ್ಟ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ನಡೆಸಬೇಕು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ವಹಿಸುವರು. ಪಂಚಾಯತಿಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆಯಾದ ಪ್ರತೀ ಒಂದು ಗೊತ್ತುವಳಿಯ ನಕಲನ್ನು ವಿಭಾಗೀಯ ಕಮಿಶನರ್ ಅವರಿಗೆ ಕಳುಹಿಸಿಕೊಡಬೇಕು. ಪಂಚಾಯತಿಯ ಆಡಳಿತವು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಲು ಸಹಾಯಕವಾಗುವಂತೆ ಚುನಾಯಿತ ಸದಸ್ಯರನ್ನು ಒಳಗೊಂಡ ಸ್ಥಾಯೀ ಸಮಿತಿಗಳನ್ನು ರಚಿಸಲು ಕಾನೂನಿನಲ್ಲಿ ಅವಕಾಶ ಇರುವುದು. ಅವುಗಳೆಂದರೆ (1) ಸಾಮಾನ್ಯ (ಜನರಲ್) ಸಮಿತಿ, (2) ಹಣಕಾಸು ಲೆಕ್ಕ ತಪಾಸಣೆ ಮತ್ತು ಯೋಜನೆ, (3) ಸಾಮಾಜಿಕ ನ್ಯಾಯ,(4) ಶಿಕ್ಷಣ ಮತ್ತು ಆರೋಗ್ಯ, (5) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಜಿಲ್ಲಾ ಪಂಚಾಯತಿಯ ಆಡಳಿತದ ಪ್ರತಿ ಒಂದು ವಿಭಾಗ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಆಡಳಿತಾತ್ಮಕ ಮತ್ತು ಹಣಕಾಸಿನ ನಿರ್ವಹಣೆ, ಸಿಬ್ಬಂದಿಯ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರ ಇರುವುದು. ನೈಸರ್ಗಿಕ ವಿಪತ್ತು ಮುಂತಾದ ಸಂದರ್ಭಗಳಲ್ಲಿ ಅವುಗಳ ಪರಿಹಾರ ಕ್ರಮಕ್ಕಾಗಿ ಅಧ್ಯಕ್ಷರು ಒಂದು ಲಕ್ಷ ರೂಪಾಯಿ ಹಣವನ್ನು ಮಂಜೂರು ಮಾಡಬಹುದು. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯನ್ನು ಸರ್ಕಾರವು ಜಿಲ್ಲಾಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂದು ನಿಯಮಿಸುವುದು. ಹೊಸ ಕಾನೂನಿನ ಅನ್ವಯ ಜಿಲ್ಲೆಗೆ ಪ್ರತ್ಯೇಕವಾದ ಜಿಲ್ಲಾ ಯೋಜನಾ ಸಮಿತಿಯನ್ನು ನಿಯಮಿಸಲು ಅವಕಾಶ ಇರುವುದು. ಇದು ಜಿಲ್ಲೆಯ ನಗರಸಭೆಗಳ, ಪುರಸಭೆಗಳ ಪ್ರತಿನಿಧಿಗಳನ್ನು, ಜಿಲ್ಲೆಯ ಶಾಸಕರನ್ನು, ಲೋಕಸಭೆ, ರಾಜ್ಯ ಸಭೆಯ ಸದಸ್ಯರನ್ನು ಒಳಗೊಂಡಿರುವುದು. ಇದರಿಂದ ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನ ಮತ್ತು ಯೋಜನೆಯ ಗುಣಮಟ್ಟದಲ್ಲಿ ಸುಧಾರಣೆ ಕಂಡುಬರುವ ಸಾಧ್ಯತೆಗಳುಂಟು. ಗ್ರಾಮಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದಲ್ಲಿ, ಪಂಚಾಯತಿಯ ಕಾನೂನು ಅಥವಾ ಸರ್ಕಾರದ ಇನ್ನಾವುದೇ ಆಜ್ಞೆಗಳನ್ನು ಪಾಲಿಸದೇ ಇದ್ದಲ್ಲಿ, ಸರ್ಕಾರವು ಅಂತಹ ಪಂಚಾಯತಿಗಳನ್ನು ವಿಸರ್ಜಿಸುವ ಅಧಿಕಾರ ಹೊಂದಿರುವುದು.

ಗ್ರಾಮ ಪಮಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣೆಗಳನ್ನು ಕುರಿತಂತೆ ರಾಜ್ಯಸರ್ಕಾರವು ಪ್ರತ್ಯೇಕವಾದ ಚುನಾವಣಾ ಆಯೋಗವನ್ನು ರಚಿಸಿದೆ. ಡಿಸೆಂಬರ್ 1993ರಲ್ಲಿ ಗ್ರಾಮಪಂಚಾಯತಿಗಳಿಗೆ ಹೊಸ ಕಾನೂನಿನ ಅನ್ವಯ ಮೊದಲನೆಯ ಚುನಾವಣೆಗಳನ್ನು ನಡೆಸಲಾಯಿತು. ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ 1995ಮಾರ್ಚ್‌ನಲ್ಲಿ ಚುನಾವಣೆಗಳು ನಡೆದವು. ಧಾರವಾಡ ಜಿಲ್ಲಾ ಪಂಚಾಯತಿಯ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ 67. ಆ ಪೈಕಿ ಎಲ್ಲಾ ವರ್ಗದಲ್ಲೂ ಸೇರಿ ಮಹಿಳೆಯರ ಸಂಖ್ಯೆ 23. ಒಟ್ಟು ಮೀಸಲು ಸ್ಥಾನಗಳ ಸಂಖ್ಯೆ 37, ಆ ಪೈಕಿ 23 ಹಿಂದುಳಿದ ವರ್ಗ, 11 ಪ.ಜಾತಿ, 3 ಪಂ.ಗಳಿಗೆ ಕಾಯ್ದಿಡಲಾಗಿತ್ತು.

**ಜಿಲ್ಲಾ ಪಂಚಾಯತಿ ಕರ್ತವ್ಯಗಳು :** ಜಿಲ್ಲಾ ಪಂಚಾಯತಿಯು ರಾಜ್ಯ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸುವುದು, ಅವುಗಳ ಪರಿಣಾಮಕಾರಿ ಅನುಷ್ಠಾನ, ತಾಲೂಕು ಪಂಚಾಯತಿ ಮತ್ತು ಗ್ರಾಮಪಂಚಾಯತಿಗಳ ನಡುವೆ ಪರಸ್ಪರ ಸಾಮರಸ್ಯ ಉಂಟು ಮಾಡುವುದು, ಅವುಗಳು ಕೈಗೊಂಡ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ, ಮಾರ್ಗದರ್ಶಣ ಮುಂತಾದವುಗಳು ಜಿಲ್ಲಾ ಪಂಚಯತಿಯ ಸಾಮಾನ್ಯ ಕೆಲಸಗಳು.

ಕಾನೂನಿನ ಅನ್ವಯ ಜಿಲ್ಲಾಪಂಚಾಯತಿಯು ಕೈಗೊಳ್ಳಬೇಕಾದ ಕಾರ್ಯಗಳ ಪಟ್ಟಿಯು ಸುಮಾರು 30 ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಿರುವುದು. ಅವುಗಳಲ್ಲಿ ಬಹು ಮುಖ್ಯವಾದವುಗಳು : (1) ವ್ಯವಸಾಯ (ವಿಸ್ತರಣಾ ಯೋಜನೆಗಳು) ಮತ್ತು ತೋಟಗಾರಿಕೆ, (2) ಭೂ ಅಭಿವೃದ್ಧಿ ಮತ್ತು ಭೂಸಾರ ಸಂರಕ್ಷಣೆ, (3) ಚಿಕ್ಕ ನೀರಾವರಿ ಯೋಜನೆಗಳು, ನೀರಿನ ಸರಿಯಾದ ಬಳಕೆಯ ವ್ಯವಸ್ಥೆ, (4) ಪಶುಸಂಗೋಪನೆ, ಹೈನಾಭಿವೃದ್ಧಿ, ಕುಕ್ಕುಟ ಅಭಿವೃದ್ಧಿ ಯೋಜನೆ, (5) ಆಹಾರ ಸಂಸ್ಕರಣಾ ಘಟಕಗಳು

ಸೇರಿದಂತೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ, (6) ಗ್ರಾಮೀಣ ವಸತಿ, ಕುಡಿಯುವ ನೀರು ಪೂರೈಕೆ, ಗ್ರಾಮೀಣ ನೈರ್ಮಲ್ಯ, (7) ರಸ್ತೆಗಳು, ಕಟ್ಟಡಗಳು, ಸೇತುವೆಗಳ ನಿರ್ಮಾಣ, ಜಲಮಾರ್ಗ, ಹರಿಗೋಲು ಮುಂತಾದ ಸಂಪರ್ಕಮಾಧ್ಯಮಗಳ ಅಭಿವೃದ್ಧಿ, (8) ಸಾಂಪ್ರದಾಯಿಕವಲ್ಲದ ಇಂಧನ ಮೂಲಗಳ ಅಭಿವೃದ್ಧಿ ಮತ್ತು ಬಳಕೆ (9) ರಾಜ್ಯಸರ್ಕಾರ, ಕೇಂದ್ರಸರ್ಕಾರದ ವಿವಿಧ ಬಡತನ ನಿರ್ಮೂಲನಾ ಯೋಜನೆಗಳ ಅನುಷ್ಠಾನ, (10) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಗಳ ನಿರ್ವಹಣೆ, (11) ಮಹಿಳಾ ಮತ್ತು ಮಕ್ಕಳ ಕಲ್ಯಾಣ, (12) ಸಮಾಜ ಕಲ್ಯಾಣ (ಅಂಗವಿಕಲರು ಮತ್ತು ಬುದ್ಧಿಮಾಂದ್ಯರ ಅಭಿವೃದ್ಧಿ ಸೇರಿದಂತೆ), (13) ಪರಿಶಿಷ್ಟ ಜಾತಿ/ಪಂಗಡ ಒಳಗೊಂಡಂತೆ ದುರ್ಬಲ ವರ್ಗದವರ ಕಲ್ಯಾಣ ಅಭಿವೃದ್ಧಿ ಯೋಜನೆಗಳು, (14) ಸಾರ್ವಜನಿಕ ಹಾಗೂ ಸರ್ಕಾರದ ಆಸ್ತಿ ಪಾಸ್ತಿಗಳು ರಕ್ಷಣೆ (15) ಸಾರ್ವಜನಿಕ ವಿತರಣೆ (16) ಗ್ರಾಮೀಣ ವಿದ್ಯುದೀಕರಣ (17) ಸಹಕಾರ, (18) ವಾಚನಾಲಯ ಗ್ರಂಥಾಲಯಗಳ ಅಭಿವೃದ್ಧಿ - ಮುಂತಾದವುಗಳು.

**ಹಣಕಾಸು :** ಜಿಲ್ಲಾ ಪಂಚಾಯತಿಗೆ ತನ್ನದೇ ಆದ ಪ್ರತ್ಯೇಕವಾದ 'ಪಂಚಾಯತ್ ಫಂಡ್' ಇರುವುದು. ಇದು (1) ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಲಾದ ಹಣ, (2) ಸರ್ಕಾರ ನೀಡುವ ಅನುದಾನ, (3) ಸಾಲಗಳು, (4) ಮುಂಗಡಗಳು, (5) ವಂತಿಕೆಗಳು , (6) ಆಸ್ತಿಗಳಿಂದ ಬರುವ ಬಾಡಿಗೆ, (7) ವಿವಿಧ ಸೇವೆಗಳ ಶುಲ್ಕಗಳು, (8) ಬಡ್ಡಿಯ ಹಣ - ಮುಂತಾದವುಗಳನ್ನು ಒಳಗೊಂಡಿರುವುದು. ಜಿಲ್ಲಾ ಪಂಚಾಯತಿಯು ತನ್ನ ಆದಾಯದಲ್ಲಿ ಶೇ.20ಕ್ಕೆ ಕಡಿಮೆ ಇಲ್ಲದಷ್ಟು ಹಣವನ್ನು ಪರಿಶಿಷ್ಟ ಜಾತಿ\ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು.

## ಧಾರವಾಡ ಜಿಲ್ಲಾ ಪರಿಷತ್

ಪಂಚಾಯತಿ ರಾಜ್ ಆಡಳಿತ ವ್ಯವಸ್ಥೆಯಲ್ಲಿ ಉಂಟಾದ ವ್ಯಾಪಕ ಬದಲಾವಣೆಯಿಂದ ಜಿಲ್ಲಾ ಪರಿಷತ್, ತಾಲೂಕು ಪಂಚಾಯತಿ ಸಮಿತಿ, ಮಂಡಳ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಅಧಿನಿಯಮ 1983ರ ಅನ್ವಯ ಜಿಲ್ಲಾ ಪಂಚಾಯತಿಗಳು ರಾಜ್ಯಾದಂತ 1987ರಲ್ಲಿ ರಚನೆಗೊಂಡವು. 1959ರ ಕರ್ನಾಟಕ ಪಂಚಾಯತಿ ರಾಜ್ ಕಾನೂನು ಜಾರಿಯಲ್ಲಿ ಬಂದ ನಂತರ 28 ವರ್ಷಗಳು ಗತಿಸಿದ ಮೇಲೆ ಈ ಹೊಸ ಪಂಚಾಯತಿ ರಾಜ್ಯ ಸಂಸ್ಥೆಗಳು ರೂಢಿಯಲ್ಲಿ ಬಂದವು. ಆಡಳಿತದಲ್ಲಿ ವಿಕೇಂದ್ರಿಕರಣ, ಪ್ರಜೆಗಳಿಗೆ ಹೆಚ್ಚಿನ ಅಧಿಕಾರ, ಸ್ವಾಯತ್ತತೆ, ಸ್ವಾವಲಂಬನೆ, ಸಾಮಾಜಿಕ ನ್ಯಾಯ, ಮುಂತಾದವುಗಳನ್ನು ದೊರಕಿಸಿಕೊಡುವಲ್ಲಿ ಈ ಹೊಸ ಸಂಸ್ಥೆಗಳ ಪಾತ್ರ ಗಮನಾರ್ಹವಾಗಿತ್ತು. ತಾಲೂಕು ಅಭಿವೃದ್ಧಿ ಮಂಡಳಿಗಳು ಇದರಿಂದ ರದ್ದಾದವು.

ದಿನಾಂಕ 2.1.1987ರಂದು ಈ ಸಂಸ್ಥೆಗಳಿಗೆ ಚುನಾವಣೆಗಳು ನಡೆದು ಚುನಾವಣೆಯ ನಂತರ ಜಿಲ್ಲಾ ಪರಿಷತ್ತುಗಳು ಅಸ್ತಿತ್ವದಲ್ಲಿ ಬಂದವು. ಜಿಲ್ಲಾ ಪರಿಷತ್ತಿನ ಕ್ಷೇತ್ರವ್ಯಾಪ್ತಿ ಜಿಲ್ಲೆಯ ನಗರ ಪ್ರದೇಶಗಳನ್ನು ಹೊರತುಪಡಿಸಿ 13,199.99 ಚ.ಕಿ.ಮಿ.ಗಳಿಗೆ ವ್ಯಾಪಿಸಿತ್ತು. ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ಜನಸಂಖ್ಯೆ 22.94 ಲಕ್ಷ (1991)ವಾಗಿತ್ತು. ಜಿಲ್ಲಾ ಪರಿಷತ್ 68 ಜನ ಚುನಾಯಿತ ಸದಸ್ಯರು, 16 ಜನ ವಿಧಾನಸಭೆಯ ಸದಸ್ಯರು, ನಾಲ್ಕು ಜನ ಸಂಸತ್ ಸದಸ್ಯರು, ನಾಲ್ವರು ವಿಧಾನಪರಿಷತ್ ಸದಸ್ಯರು, ಮತ್ತು ಒಬ್ಬ ಸಹ ಸದಸ್ಯರನ್ನು ಒಳಗೊಂಡಿತ್ತು. ಜಿಲ್ಲಾ ಪರಿಷತ್ತಿನ ಅಧೀನದಲ್ಲಿ 17 ತಾಲ್ಲೂಕು ಪಂಚಾಯತಿ ಸಮಿತಿಗಳು, 166 ಮಂಡಳ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಜಿಲ್ಲಾ ಪರಿಷತ್ತಿನ ಆಡಳಿತವು ಸುಗಮವಾಗಿ ನಡೆಯಲು ಸಹಾಯಕವಾಗುವಂತೆ 9 ಸ್ಥಾಯಿ ಸಮಿತಿಗಳಲ್ಲದೇ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ವಿಶೇಷ ಸಮಿತಿಯನ್ನು ನಿಯಮಿಸಲಾಗಿತ್ತು.

ಐದು ವರ್ಷಗಳ ಆಡಳಿತದ ನಂತರ 1992 ಜನವರಿಯಲ್ಲಿ ಜಿಲ್ಲಾ ಪರಿಷತ್ತುಗಳನ್ನು ತಾಲ್ಲೂಕು ಪಂಚಾಯತಿ ಸಮಿತಿಗಳನ್ನು ಮಂಡಳ ಪಂಚಾಯತಿಗಳನ್ನು ರದ್ದುಪಡಿಸಲಾಯಿತು. ಚುನಾಯಿತ ಪ್ರತಿನಿಧಿಗಳ ಬದಲಿಗೆ 14.1.92ರಿಂದ ಆಡಳಿತಾಧಿಕಾರಿಗಳನ್ನು ನೇಮಿಸಲಾಯಿತು.

ಈ ಜಿಲ್ಲಾ ಪರಿಷತ್ತಿನ ಇತ್ತೀಚಿನ ಎರಡು ವರ್ಷಗಳ ಅಭಿವೃದ್ಧಿ ಕಾರ್ಯಕ್ರಮಗಳ ಸಾರಾಂಶ ಮುಂದೆ ವಿವರಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅನ್ವಯ ಬಡತನ ರೇಖೆಯ ಕೆಳಗಿರುವ ಕುಟುಂಬಗಳನ್ನು ಮೇಲೆತ್ತುವ ಉದ್ದೇಶದಿಂದ

1991-92ನೇ ಸಾಲಿನಲ್ಲಿ ರೂ. 150.952ಲಕ್ಷಗಳನ್ನು ಫಲಾನುಭವಿಗಳಿಗೆ ಸಹಾಯ ಧನವನ್ನಾಗಿ ಒದಗಿಸಲಾಯಿತು. ಒಟ್ಟು ಫಲಾನುಭವಿಗಳು 6,271, ಇವರಲ್ಲಿ 2459 ಪ.ಜಾತಿ ಮತ್ತು 413 ಪ.ವರ್ಗ್ಗಗಳಿಗೆ ಸೇರಿದವರಾಗಿದ್ದರು. ಜವಾಹರ ರೋಜಗಾರ ಯೋಜನೆಯ ಅಡಿಯಲ್ಲಿ ಪ.ಜಾ\ಪ.ವ.ಗಳಿಗೆ ಗುಂಪು ಮನೆಯನ್ನು ಒದಗಿಸುವ ಸಲುವಾಗಿ 8,103 ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಆ ಪೈಕಿ 3,659 ಕೆಲಸಗಳನ್ನು ಪೂರೈಸಲಾಯಿತು. ಈ ಎಲ್ಲಾ ಕೆಲಸಗಳಿಂದ 1991-92 ವರ್ಷದಲ್ಲಿ 19.222 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಡಿ.ಪಿ.ಎ.ಪಿ. (ಬರಸಂಭವ ಪ್ರದೇಶ ಕಾರ್ಯಕ್ರಮ,) ಕೇಂದ್ರ ಯೋಜನೆಯನ್ನು ಜಿಲ್ಲೆಯ 14 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಯಿತು. 1991-92ನೇ ಸಾಲಿನಲ್ಲಿ ರೂ.252.628 ಲಕ್ಷ ಅನುದಾನದಲ್ಲಿ ರೂ.191.244 ಲಕ್ಷ ಮಾತ್ರ ಖರ್ಚಾಯಿತು.

ನೂರು ಬಾವಿಯ ಯೋಜನೆ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು ಈ ಯೋಜನೆಯು ಚಿಕ್ಕ ಮತ್ತು ಅತೀ ಚಿಕ್ಕ ರೈತರು ಕೊಳವೆ ಬಾವಿಯ ಮೂಲಕ ನೀರಾವರಿ ಸೌಲಭ್ಯ ಪಡೆದುಕೊಳ್ಳಲು ಸಹಾಯಕವಾಗಿದೆ. 1991-92ನೇ ಸಾಲಿನಲ್ಲಿ ನೀಡಲಾದ ರೂ. 25.602 ಲಕ್ಷ ಅನುದಾನದಲ್ಲಿ 338 ಫಲಾನುಭವಿಗಳಿಗೆ ರೂ. 24.668 ಲಕ್ಷ ಸಹಾಯಧನದ ರೂಪದಲ್ಲಿ ನೀಡಲಾಯಿತು. ಈ ಫಲಾನುಭವಿಗಳಲ್ಲಿ 15 ಜನರು ಪ.ಜಾತಿಯವರಾಗಿದ್ದರು. ಜಿಲ್ಲಾ ಪರಿಷತ್ತಿನ ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗದಿಂದ ಜೇನು ಕೃಷಿ ಯೋಜನೆ, ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯಮಶೀಲ ತರಬೇತಿ ಕಾರ್ಯಕ್ರಮ, ಟ್ರೈಸಂ (ಗ್ರಾಮೀಣ ತರುಣರಿಗೆ ಸ್ವಯಂ ಉದ್ಯೋಗ ತರಬೇತಿ) ಮುಂತಾದ ಗ್ರಾಮೀಣ ಮತ್ತು ಸಣ್ಣ ಉದ್ಯಮಗಳ ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲಾಗಿದ್ದು ವರದಿ ವರ್ಷದಲ್ಲಿ ಈ ಕಾರ್ಯಕ್ರಮಗಳಿಗೆ ರೂ.42.90 ಲಕ್ಷ ಖರ್ಚುಮಾಡಲಾಯಿತು. ವಯಸ್ಕರ ಶಿಕ್ಷಣ ಯೋಜನೆಯಲ್ಲಿ 1992-92ರಲ್ಲಿ 300 ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ 8,790 ಅನಕ್ಷರಸ್ಥರನ್ನು ದಾಖಲು ಮಾಡಿಕೊಳ್ಳಲಾಯಿತು. ಈ ಕೇಂದ್ರಗಳಲ್ಲಿ 61 ಕೇಂದ್ರಗಳು ಪ.ಜಾತಿಯವರಿಗೆ ಮೀಸಲಾದ ಕೇಂದ್ರಗಳಾಗಿದ್ದವು. ಈ 61 ಕೇಂದ್ರಗಳಲ್ಲಿ 4,030 ಅನಕ್ಷರಸ್ಥರನ್ನು ದಾಖಲುಮಾಡಲಾಯಿತು. ಈ ಯೋಜನೆಯ ಅನ್ವಯ ಒಟ್ಟು 3,781 (1,742 ಪುರುಷರು, 2,039 ಮಹಿಳೆಯರು) ಜನರನ್ನು ಸಾಕ್ಷರರನ್ನಾಗಿ ಮಾಡಲಾಯಿತು. 1991-92ನೇವರ್ಷದಲ್ಲಿ ಈ ಯೋಜನೆಗೆ ರೂ.13.89 ಲಕ್ಷ ಅನುದಾನದಲ್ಲಿ ರೂ.7.74 ಲಕ್ಷ ಮಾತ್ರ ಖರ್ಚುಮಾಡಲಾಯಿತು. ಪಶುಪಾಲನೆ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.71.46 ಲಕ್ಷ ವೆಚ್ಚಮಾಡಲಾಯಿತು. ನೀರಿನ ತಾಂತ್ರಿಕ ನಿಯೋಗದ ಯೋಜನೆಯ ಅಡಿಯಲ್ಲಿ 349 ಸಮಸ್ಯಾತ್ಮಕ ಗ್ರಾಮಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಪೂರೈಸಲು ವೈಜ್ಞಾನಿಕವಾಗಿ ಅಧ್ಯಯನ ನಡೆಸಲಾಯಿತು.

ಗ್ರಾಮಿಣ ನೀರು ಪೂರೈಕೆಯ ಯೋಜನೆಯ ಅನ್ವಯ 1992ರ ಅಂತ್ಯದವರೆಗೆ 202 ಗ್ರಾಮಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು.

### 1992-93ರ ಪ್ರಗತಿ

ವರದಿ ವರ್ಷದಲ್ಲಿ 2079 ಪ.ಜಾ ಮತ್ತು 823 ಪ.ವರ್ಗಗಳ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೆತ್ತುವ ಪ್ರಯತ್ನ ಮಾಡಲಾಯಿತು. ಈ ಯೋಜನೆಯ ಅಡಿ ರೂ.160.436 ಲಕ್ಷ ಹಣ ಖರ್ಚುಮಾಡಲಾಯಿತು. ಜವಾಹರ ರೋಜಗಾರ ಯೋಜನೆಯ ಅಡಿಯಲ್ಲಿ 10,082 ಕೆಲಸಗಳನ್ನು ಕೈಗೊಳ್ಳಲಾಗಿತ್ತು. ಹಿಂದಿನ ವರ್ಷದ ಬಾಕಿ ಕಾಮಗಾರಿಗಳನ್ನು ಸಂಪೂರ್ಣ ಗೊಳಿಸಲಾಯಿತು. ಈ ಎಲ್ಲಾ ಕೆಲಸಗಳಿಂದ 24,673 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು ಎಂದು ವರದಿಯಾಗಿದೆ. ಡಿ.ಪಿ.ಎ.ಪಿ. ಕಾರ್ಯಕ್ರಮದ ಅನ್ವಯ ಕೇಂದ್ರದ ಅನುದಾನ ರೂ.330 ಲಕ್ಷ ಪೈಕಿ ರೂ. 311.325 ಲಕ್ಷ ಖರ್ಚುಮಾಡಲಾಯಿತು. ನೂರು ಬಾವಿಯ ಯೋಜನೆಯ ಅನ್ವಯ 92-93 ನೇ ಸಾಲಿನಲ್ಲಿ 388 ಫಲಾನುಭವಿಗಳಿಗೆ ರೂ. 29.72 ಲಕ್ಷ ಸಹಾಯ ಧನದ ರೂಪದಲ್ಲಿ ನೀಡಲಾಯಿತು. ಫಲಾನುಭವಿಗಳಲ್ಲಿ 35 ಜನ ಪ.ಜಾತಿ ಪ.ವರ್ಗದವರು ಇದ್ದರು. ಗ್ರಾಮೀಣ ಸಣ್ಣ ಉದ್ಯಮ ವಿಭಾಗದಲ್ಲಿ ರೂ.108.11 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಆ ಪೈಕಿ ರೂ. 102.82 ಲಕ್ಷ ಖರ್ಚಾಗಿರುವುದು. ಜೈವಿಕ ಅನಿಲ ಘಟಕ ಯೋಜನೆ ಅಡಿ ಗ್ರಾಮಾಂತರ ಪ್ರದೇಶದಲ್ಲಿ ನೈಸರ್ಗಿಕ ಮೂಲಗಳಿಂದ ಇಂಧನ ಉತ್ಪಾದನೆ ಮತ್ತು 1,700 ಘಟಕಗಳ ಸ್ಥಾಪನೆಗೆ ರೂ. 75.49 ಲಕ್ಷ ಖರ್ಚುಮಾಡಲಾಯಿತು. ವಯಸ್ಕರ ಶಿಕ್ಷಣ ಯೋಜನೆಯ ಅಡಿಯಲ್ಲಿ 1992-93ನೇ ಸಾಲಿಗೆ ಸರ್ಕಾರದಿಂದ

ಮಂಜೂರಾದ ಹಣ ರೂ. 3.35 ಲಕ್ಷ, ಅದರಲ್ಲಿ ಜಿಲ್ಲಾ ಪರಿಷತ್ತಿನ ವಂತಿಗೆ ರೂ. 3.25 ಲಕ್ಷ, ಈ ಪೈಕಿ ರೂ. 3.24 ಲಕ್ಷ ಹಣವನ್ನು ಖರ್ಚುಮಾಡಲಾಯಿತು. ಗ್ರಾಮಾಂತರ ಪ್ರದೇಶದ ಶುದ್ಧ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ನೀಡಿದ ರೂ. 487.62 ಲಕ್ಷ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲಾಯಿತು. ಈಗ ಜಿಲ್ಲೆಯಲ್ಲಿ 250 ಜನರಿಗೆ ಒಂದರಂತೆ, ಒಂದಲ್ಲಾ ಒಂದು ರೀತಿಯಲ್ಲಿ ಶುದ್ಧವಾದ ಕುಡಿಯುವ ನೀರಿನ ಮೂಲವನ್ನು ಒದಗಿಸಲಾಗಿದೆ.

1992-93ರ ಆಡಳಿತ ವರದಿ ತಿಳಿಸುವಂತೆ ಜಿಲ್ಲಾ ಪರಿಷತ್ ನಿಯಂತ್ರಣಕ್ಕೆ ಒಳಪಟ್ಟ ಒಟ್ಟು ರಸ್ತೆಗಳ ಉದ್ದ 5,635 ಕಿ.ಮಿ, ಆ ಪೈಕಿ 250.10 ಕಿ.ಮಿ ಉದ್ದದ ಡಾಂಬರ ರಸ್ತೆ ಇತ್ತು. ಅದರ ಹಿಂದಿನ ವರ್ಷದಲ್ಲಿ ಇದ್ದ ಒಟ್ಟು ರಸ್ತೆಗಳ ಉದ್ದ 6,308 ಕಿ.ಮಿ. (1992-93ರಲ್ಲಿ ಜಿಲ್ಲಾ ಪರಿಷತ್ ಅಧಿಕಾರದಲ್ಲಿದ್ದ ಕೆಲವು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿದ್ದರಿಂದ 1992-93ರಲ್ಲಿ ರಸ್ತೆಯ ಉದ್ದ ಕಡಿಮೆ ಆಗಿದೆ.) 1992-93ರಲ್ಲಿ ಪ್ರತಿ ಕಿ.ಮಿ. ರಸ್ತೆ ನಿರ್ವಹಣೆಗೆ ಆದ ವೆಚ್ಚ ರೂ. 2,965 ಎಂದು ತಿಳಿದುಬರುವುದು.

**ಹಣಕಾಸು :** 1992-93ರಲ್ಲಿ ಜಿಲ್ಲಾ ಪರಿಷತ್‌ಗೆ ಸಂದಾಯವಾದ ಸಾಮಾನ್ಯ ಆದಾಯ ರೂ. 28.72 ಕೋಟಿ, ಸರ್ಕಾರದ ಅನುದಾನ ರೂ. 125.52 ಕೋಟಿ, ಆರಂಭದ ಶಿಲ್ಕು ರೂ. 12.23 ಕೋಟಿ ಸೇರಿದಂತೆ ಒಟ್ಟು ಆದಾಯ ರೂ. 166.49 ಕೋಟಿಯಾಗಿತ್ತು. ಸದರಿ ವರ್ಷ ಮಾಡಲಾದ ಒಟ್ಟು ವೆಚ್ಚ ರೂ. 153.24 ಕೋಟಿ ಎಂದು ತಿಳಿದುಬರುವುದು.

1992-93ನೇ ಸಾಲಿಗೆ ಸಂಬಂಧಪಟ್ಟಂತೆ 166 ಮಂಡಳ ಪಂಚಾಯತಿಗಳ ಕ್ರೋಢೀಕೃತಜಮಾ ಖರ್ಚಿನ ವಿವರ ಈ ರೀತಿ ಇತ್ತು.

**ಜಮಾ ವಿವರ :** ಆರಂಭದ ಶಿಲ್ಕು ರೂ. 54.49 ಲಕ್ಷ, ಸರ್ಕಾರದ ತಲಾ ಅನುದಾನ ರೂ. 154.08 ಲಕ್ಷ, ಕಂದಾಯ ವಸೂಲಿ ರೂ. 133.81 ಲಕ್ಷ, ಇತರೇ ಜಮಾ ರೂ. 2.06 ಲಕ್ಷ, ಒಟ್ಟು ಜಮಾ 344.44 ಲಕ್ಷ ರೂ.

**ಖರ್ಚು ವಿವರ :** ವಿದ್ಯುತ್ ವೆಚ್ಚ ರೂ. 30.75 ಲಕ್ಷ, ಚುನಾಯಿತ ಸದಸ್ಯರ ವೇತನ ಇತ್ಯಾದಿ ರೂ. 3.34 ಲಕ್ಷ, ಸಭೆಯ ವೆಚ್ಚ ರೂ. 4,606, ಸಾದಿಲ್ವಾರ ವೆಚ್ಚ ರೂ. 95.48 ಲಕ್ಷ, ಇತರ ಸಿಬ್ಬಂದಿಗಳ ವೇತನ ರೂ. 111.43 ಲಕ್ಷ, ಕಾಮಗಾರಿ ವೆಚ್ಚ ರೂ. 59.68 ಲಕ್ಷ, ಒಟ್ಟು ಖರ್ಚು ರೂ. 300.73 ಲಕ್ಷ.

**ಕರ ವಸೂಲಾತಿ :** 1992-93 ಸಾಲಿನಲ್ಲಿ ಜಿಲ್ಲೆಯಾದ್ಯಂತ ಮಂಡಳ ಪಂಚಾಯತಿಗಳಿಗೆ ಬರಬೇಕದ ಕರದ ಬಾಕಿ (ಬೇಡಿಕೆ, ವಸೂಲಾತಿ, ಮತ್ತು ಬಾಕಿ ವಿವರ) ಈ ಮುಂದಿನಂತೆ ಇರುವುದು. ಹಿಂದಿನ ವರ್ಷದ ಬಾಕಿ ರೂ. 223.31 ಲಕ್ಷ, 1992-93ನೇ ವರ್ಷದ ಬೇಡಿಕೆ ರೂ. 115.65 ಲಕ್ಷ, ಒಟ್ಟು ಬೇಡಿಕೆ ರೂ. 338.97 ಲಕ್ಷ. 1992-93ರಲ್ಲಿ ವಸೂಲಾದ ಒಟ್ಟು ಸಾಲ ರೂ.108.86 ಲಕ್ಷ, ವರ್ಷದ ಕೊನೆಗೆ ಬಾಕಿ ರೂ. 230.11 ಲಕ್ಷ. (ಮೇಲಿನ ಅಂಕಿ ಅಂಶಗಳಲ್ಲಿ ಎರಡು ತಾಲ್ಲೂಕುಗಳ ಮಾಹಿತಿ ಸೇರಿರುವುದಿಲ್ಲ.

## ಗ್ರಾಮ ಪಂಚಾಯತಿಗಳು

ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ, ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತದ ಸಂಸ್ಥೆಯಾದ ಗ್ರಾಮ ಪಂಚಾಯತಿಗಳು 'ಗ್ರಾಮಸ್ವರಾಜ್' 'ಗ್ರಾಮ ಸುರಾಜ್' ಪರಿಕಲ್ಪನೆಯನ್ನು ಕಾರ್ಯರೂಪದಲ್ಲಿ ತರುವಲ್ಲಿ ಬಹು ಮಹತ್ವದ ಪಾತ್ರವನ್ನು ವಹಿಸುವವು.

ಮುಂಬಯಿ ಗ್ರಾಮ ಪಂಚಾಯತಿ ಕಾಯಿದೆ 1933ರ ಅನ್ವಯ ಮೊದಲಿಗೆ ಶಾಸನಬದ್ಧ ಗ್ರಾಮಪಂಚಾಯತಿಗಳನ್ನು ಕನಿಷ್ಟ 2000 ಕ್ಕಿಂತ ಕಡಿಮೆ ಜನಸಂಖ್ಯೆ ಇರದ ಗ್ರಾಮಗಳಿಗೆ ರಚಿಸಲಾಯಿತು. ಸ್ಥಳೀಯ ಜನರು ಒತ್ತಾಯಿಸಿದರೆ ಕನಿಷ್ಟ 1000 ಜನಸಂಖ್ಯೆ ಇರುವ ಗ್ರಾಮಗಳಿಗೂ ಪಂಚಾಯತಿಯನ್ನು ರಚಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಗ್ರಾಮ ಪಂಚಾಯತಿಯ ಗರಿಷ್ಟ

ಮತ್ತು ಕನಿಷ್ಠ ಸದಸ್ಯರ ಸಂಖ್ಯೆ ಅನುಕ್ರಮವಾಗಿ 15 ಮತ್ತು 7 ಎಂದು ಕಾನೂನಿನಲ್ಲಿ ನಿರ್ದೇಶಿಸಲಾಗಿತ್ತು. ಮಹಿಳೆಯರಿಗೆ, ಪ.ಜಾ\ಪ.ಪಂದವರಿಗೆ ಸ್ಥಾನಗಳ ಮೀಸಲಾತಿಯನ್ನು ಒದಗಿಸಲಾಗಿತ್ತು. ಸಾಮಾನ್ಯವಾಗಿ ಪಂಚಾಯತಿಯ ಅಧಿಕಾರದ ಅವಧಿ ಮೂರು ವರ್ಷಗಳಾಗಿದ್ದು ವಿಶೇಷ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಯು 5 ವರ್ಷಗಳವರೆಗೆ ವಿಸ್ತರಿಸಬಹುದಾಗಿತ್ತು. ಚುನಾಯಿತ ಪ್ರತಿನಿಧಿಗಳಿಂದ ಸರಪಂಚ, ಉಪಸರಪಂಚರ ಆಯ್ಕೆ ಆಗುತ್ತಿತ್ತು. ಸರಪಂಚರು ಪಂಚಾಯತಿಯ ಮುಖ್ಯಸ್ಥರಲ್ಲದೇ ಮುಖ್ಯ ನಿರ್ವಾಹಕರೂ ಆಗಿರುತ್ತಿದ್ದರು, ಪ್ರತಿ ಒಂದು ಪಂಚಾಯತಿಗೆ ಕಾರ್ಯದರ್ಶಿ ಇದ್ದು ಅವರ ಪಗಾರದ ಮುಕ್ಕಾಲು ಭಾಗವನ್ನು ಸರ್ಕಾರ ಕೊಡುತ್ತಿತ್ತು. ಪಂಚಾಯತಿಯ ಹಣಕಾಸಿನ ನಿರ್ವಹಣೆಯ ವಿಷಯದಲ್ಲಿ ಜಿಲ್ಲಾ ಬೋರ್ಡುಗಳು ಹೆಚ್ಚಿನ ಅಧಿಕಾರ ಹೊಂದಿದ್ದವು. ಕಾನೂನಿನ ಅನ್ವಯ ಪಂಚಾಯತಿಗಳು ಹಲವಾರು ಅತ್ಯಾವಶ್ಯಕ ಕಾರ್ಯಗಳನ್ನು ಮಾಡಲೇಬೇಕಾಗಿತ್ತು. ಹಣಕಾಸಿನ ಅನುಕೂಲ ಇದ್ದಲ್ಲಿ ಕಾನೂನಿನಲ್ಲಿ ನಮೂದಿಸಿದ ಇತರೇ ಜನೋಪಯೋಗಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿತ್ತು. ಸುಮಾರು 10 ಬಗೆಯ ವಿವಿಧ ಕಂದಾಯಗಳನ್ನು ಪಂಚಾಯತಿಯು ವಿಧಿಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ರಾಜ್ಯ ಸರ್ಕಾರ ವಿಧಿಸುವ ಯಾವುದೇ ಕಂದಾಯವನ್ನು ಲೋಕಲ್ ಬೋರ್ಡಿನ ಒಪ್ಪಿಗೆಯಿಂದ ಪಂಚಾಯತಿಯೂ ವಿಧಿಸಬಹುದಾಗಿತ್ತು.

ಪ್ರತಿ ಪಂಚಾಯತಿಗೆ ಸರ್ಕಾರವು ಶೇ. 15 ರಷ್ಟು ಸಾಮಾನ್ಯ ಭೂ ಕಂದಾಯ ಅಥವಾ ಶೇ 25 ರಷ್ಟು, ಲೋಕಲ್‌ಫಂಡಿನ ಉಪಕರ (ಸೆಸ್), ಯಾವುದು ಹೆಚ್ಚಾಗುವುದೋ ಅದನ್ನು, ಅನುದಾನ ರೂಪದಲ್ಲಿ ನೀಡುತ್ತಿತ್ತು. ಧಾರವಾಡ ಜಿಲ್ಲೆಯಲ್ಲಿ 1953ರ ಮಾರ್ಚ್ ಕೊನೆಯಲ್ಲಿ 242 ಗ್ರಾಮ ಪಂಚಾಯತಿಗಳು ಇದ್ದವು. ಗ್ರಾಮ ಪಂಚಾಯತಿಗಳ ಮೇಲೆ ಲೋಕಲ್‌ಬೋರ್ಡ್ ಮತ್ತು ಕಲೆಕ್ಟರ ಪರಮಾಧಿಕಾರ ಹೊಂದಿದ್ದರು, ಪ್ರತೀ ಪಂಚಾಯತಿಯ ಲೆಕ್ಕಪತ್ರಗಳನ್ನು ಜಿಲ್ಲಾ ಬೋರ್ಡು ಪರಿಶೋಧನೆ ಮಾಡುವುದು ಕಡ್ಡಾಯವಾಗಿತ್ತು. ಸರಿಯಾಗಿ ಕಾರ್ಯನಿರ್ವಹಿಸದ ಪಂಚಾಯತಿಯನ್ನು ರದ್ದುಪಡಿಸುವ, ಸದಸ್ಯರನ್ನು ತೆಗೆದುಹಾಕುವ ಅಧಿಕಾರ ಸರ್ಕಾರಕ್ಕೆ ಇತ್ತು. ಗ್ರಾಮ ಪಂಚಾಯತಿಗಳ ಆಡಳಿತವನ್ನು ಬಲಪಡಿಸಲು ಸೂಕ್ತಮಾರ್ಗದರ್ಶನ ನೀಡಲು ಮತ್ತು ಮಹಿಳೆಯರಿಗೆ ಪಂಚಾಯತಿಯ ಆಡಳಿತದಲ್ಲಿ ಭಾಗವಹಿಸಲು ಮನ ಒಲಿಸಲು ಸಹಾಯಕವಾಗುವಂತೆ 1950ರಲ್ಲಿ ಒಬ್ಬ ವಿಶೇಷಾಧಿಕಾರಿಯನ್ನು ಧಾರವಾಡ ಜಿಲ್ಲೆಗೆ ನೇಮಿಸಲಾಯಿತು.

**ನ್ಯಾಯಪಂಚಾಯತಿಗಳು**

1933ರ ಗ್ರಾಮ ಪಂಚಾಯತಿ ಕಾನೂನಿನ ಅನ್ವಯ ಪ್ರತಿ ಒಂದು ಗ್ರಾಮ ಪಂಚಾಯತಿಯು ತನ್ನದೇ ಆದ ನ್ಯಾಯ ಪಂಚಾಯತಿಯನ್ನು ರಚಿಸಲು ಕಾನೂನಿನಲ್ಲಿ ಅವಕಾಶ ಇತ್ತು. ಈ ನ್ಯಾಯ ಪಂಚಾಯತಿಯು ಸಣ್ಣಪುಟ್ಟ ಸಿವಿಲ್ ಮತ್ತು ದಿವಾಣಿ (ಕ್ರಿಮಿನಲ್) ವ್ಯಾಜ್ಯಗಳನ್ನು ವಿಚಾರಿಸಿ ನ್ಯಾಯ ತೀರ್ಮಾಣ ಕೊಡಬಹುದಾಗಿತ್ತು. ನ್ಯಾಯ ಪಂಚಾಯತಿಯು ಐವರು ಗ್ರಾಮ ಪಂಚಾಯತಿಯ ಸದಸ್ಯರನ್ನು ಒಳಗೊಂಡ ಸಮಿತಿಯಾಗಿದ್ದು ಅದನ್ನು ಗ್ರಾಮ ಪಂಚಾಯತಿಯ ಮೊದಲನೆಯ ಸಭೆಯಲ್ಲಿಯೇ ರಚಿಸಬಹುದಾಗಿತ್ತು. ನ್ಯಾಯ ಪಂಚಾಯಿತಿಗೆ ಆಯ್ಕೆಯಾದ ಸದಸ್ಯರಲ್ಲಿ ಒಬ್ಬರನ್ನು ಅದರ ಅಧ್ಯಕ್ಷರನ್ನಾಗಿ ಆರಿಸಲಾಗುತ್ತಿತ್ತು. ನ್ಯಾಯ ಪಂಚಾಯತಿಯ ಸದಸ್ಯರ ಅಧಿಕಾರದ ಅವಧಿಯು, ಗ್ರಾಮ ಪಂಚಾಯತಿಯ ಅಧಿಕಾರ ಅವಧಿಯೊಂದಿಗೆ ಸಮಾಪ್ತಿಯಾಗುತ್ತಿತ್ತು. ನ್ಯಾಯ ಪಂಚಾಯತಿಯ ಸದಸ್ಯನು ಅನುಚಿತವಾಗಿ ವರ್ತಿಸಿದಲ್ಲಿ, ಕಾರ್ಯನಿರ್ವಹಣೆಯಲ್ಲಿ ಅಲಕ್ಷ್ಯ ತೋರಿದಲ್ಲಿ, ಅಸಮರ್ಥನಾದಲ್ಲಿ, ಭ್ರಷ್ಟನಾದಲ್ಲಿ ಅಂತಹವರನ್ನು ತೆಗೆದುಹಾಕಲು ಕಾನೂನಿನಲ್ಲಿ ಅವಕಾಶ ಇತ್ತು. ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ನ್ಯಾಯಾಂಗ ಗುಮಾಸ್ತನ (ಜುಡಿಸಿಯಲ್ ಕ್ಲಾರ್ಕ್) ಕಾರ್ಯವನ್ನು ನಿರ್ವಹಿಸುತ್ತಿದ್ದನು.

1942ರ ಮುಂಬಯಿ ಸರ್ಕಾರದ ಗೃಹ ಇಲಾಖೆಯ ಆಜ್ಞೆಯಂತೆ ಧಾರವಾಡ ಜಿಲ್ಲೆಯಲ್ಲಿ 88 ಪಂಚಾಯತಿಗಳು ಮೊದಲನೇಯ ಹಂತವಾಗಿ ಈ ಮುಂದಿನ ಅಪರಾಧಗಳನ್ನು ವಿಚಾರಿಸಲು ಅಧಿಕಾರವನ್ನು ಹೊಂದಿದ್ದವು. ಅವುಗಳೆಂದರೆ, ಮುಂಬಯಿ ಗ್ರಾಮಪಂಚಾಯತಿ ಕಾನೂನಿನ 39ನೇ ಪರಿಚ್ಛೇದದ ಉಪ ಪರಿಚ್ಛೇದ ಸಂಖ್ಯೆ 1 ಮತ್ತು 2 ರಲ್ಲಿ ಹೇಳಿದ ಅಪರಾಧಗಳು. (ಇಂಡಿಯನ ಪೀನಲ್‌ಕೋಡಿನ) ಭಾರತೀಯ ದಂಡಸಂಹಿತೆ ಕಾನೂನು ಪರಿಚ್ಛೇದ 269, 277 ಮತ್ತು 283ರ ಅನ್ವಯ ಮಾಡಬಹುದಾದದ ಅಪರಾಧಗಳ ವಿಚಾರಣೆ ಮತ್ತು ದನಗಳ ಅತೀಕ್ರಮಣ ಪ್ರವೇಶ ಅಧಿನಿಯಮದ ನಿಬಂಧನೆ 24ರ ಪ್ರಕಾರ ಸಂಭವಿಸುವ ಅಪರಾಧ ಮತ್ತು ಗ್ರಾಮ ಪಂಚಾಯತಿಯ ನಿಯಮಾವಳಿಗಳನ್ನು ಉಲ್ಲಂಘಿಸುವುದರಿಂದ ಉಂಟಾಗುವ ಅಪರಾಧ ಇವೇ ಮುಂತಾದವುಗಳನ್ನು ವಿಚಾರಿಸುವ ಮತ್ತು ದಂಡ ವಿಧಿಸುವ ಅಧಿಕಾರ ನ್ಯಾಯ ಪಂಚಾಯತಿಗಳಿಗೆ ಇತ್ತು. ವಕೀಲರು, ನ್ಯಾಯವಾದಿಗಳು ಯಾವುದೇ

ರೀತಿಯಲ್ಲಿ ನ್ಯಾಯಪಂಚಾಯತಿಯ ನಡುವಳಿಕೆಯಲ್ಲಿ ಪ್ರವೇಶಿಸದಂತೆ ನಿರ್ಬಂಧ ಇತ್ತು. ನ್ಯಾಯಪಂಚಾಯತಿಯ ತೀರ್ಪಿನ ವಿರುದ್ಧ ಮರುಪರಿಶೀಲನಾ (ಅಪೀಲ್) ಅರ್ಜಿಯನ್ನು ಜಿಲ್ಲಾ ಮತ್ತು ಸೆಸೆನ್ಸ ಕೋರ್ಟುಗಳಿಗೆ ಸಲ್ಲಿಸಲು ಅವಕಾಶ ಇತ್ತು. ಈ ಒಂದು ನ್ಯಾಯಾಧಿಕರಣದ ವ್ಯವಸ್ಥೆಯನ್ನು 1983ರ ಜಿಲ್ಲಾ ಪರಿಷತ್, ಮಂಡಳಪಂಚಾಯತಿ ಕಾನೂನಿನಲ್ಲಿ ಅಳವಡಿಸಲಾಗಿತ್ತು. ಆದರೆ ನ್ಯಾಯ ಪಂಚಾಯತಿಗಳು ಕಾರ್ಯರೂಪದಲ್ಲಿ ಬರಲಿಲ್ಲ.

**1956ರ ನಂತರ :** ಏಕೀಕೃತ ಕರ್ನಾಟಕದ ರಚನೆಯ ನಂತರ 1960ರಲ್ಲಿ ಕರ್ನಾಟಕ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿ ಕಾನೂನನ್ನು ಜಾರಿಯಲ್ಲಿ ತಲಾಯಿತು. ಇದರ ಅನ್ವಯ ಕನಿಷ್ಠ 1,500 ಜನಸಂಖ್ಯೆಯನ್ನು ಒಳಗೊಂಡ ಒಂದೇ ಗ್ರಾಮ ಅಥವಾ ಗ್ರಾಮ ಸಮೂಹಕ್ಕೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ರಚಿಸಲಾಯಿತು. ಗ್ರಾಮ ಪಂಚಾಯತಿಗಳು ತಾಲೂಕು ಅಭಿವೃದ್ಧಿ ಮಂಡಳಿಗಳ ನೇರ ಆಡಳಿತಕ್ಕೆ ಒಳಪಟ್ಟಿದ್ದವು. ಸರ್ಕಾರವು ಪಂಚಾಯತಿಗಳಿಗೆ ಭೂಕಂದಾಯದ ಶೇ. 30ರಷ್ಟು ಹಣವನ್ನು ಅಭಿವೃದ್ಧಿ ವೆಚ್ಚಗಳ ನಿರ್ವಹಣೆಗೆ ನೀಡುತ್ತಿತ್ತು. ಈ ವ್ಯವಸ್ಥೆ 1987ರವರಗೆ ಅಂದರೆ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತಿಗಳು ಬರುವವರೆಗೆ ಮುಂದುವರೆಯಿತು. ಧಾರವಾಡ ಜಿಲ್ಲೆಯಲ್ಲಿ 1959ರ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿ ಕಾನೂನಿನ ಅನ್ವಯ ಇದ್ದ ಗ್ರಾಮ ಪಂಚಾಯತಿಗಳ ಸಂಖ್ಯೆ 594. ಹಳೆಯ ವ್ಯವಸ್ಥೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಗ್ರಾಮ ಪಂಚಾಯತಿಗಳನ್ನು ಹೊಂದಿದ ತಾಲ್ಲೂಕುಗಳ ವಿವರ ಈ ರೀತಿ ಇತ್ತು: ರೋಣ (58), ರಾಣೆಬೆನ್ನೂರು (50), ನವಲಗುಂದ (49), ಹಾನಗಲ್ (48), ಅತೀ ಕಡಿಮೆ ಸಂಖ್ಯೆಯ ಪಂಚಾಯತಿಗಳು (12) ನರಗುಂದ ತಾಲ್ಲೂಕಿನಲ್ಲಿ ಇದ್ದವು.

ಜಿಲ್ಲಾ ಪರಿಷತ್, ಮಂಡಳ ಪಂಚಾಯತಿ ಕಾನೂನು 1983ರ ಅನ್ವಯ ಗ್ರಾಮ ಪಂಚಾಯತಿಗಳ ಸ್ಥಾನದಲ್ಲಿ ಪುನರ್ ರಚಿತಗೊಂಡ ಮಂಡಳ ಪಂಚಾಯತಿಗಳು ಜಾರಿಯಲ್ಲಿ ಬಂದವು. ಬಹುತೇಕ ಮಂಡಳ ಪಂಚಾಯತಿಗಳು ಸಮೂಹ ಗ್ರಾಮಗಳ ಪಂಚಾಯತಿಗಳಾಗಿದ್ದರಿಂದ ಮೊದಲಿದ್ದ ಗ್ರಾಮ ಪಂಚಾಯತಿಗಳ ಸಂಖ್ಯೆ ಬಹುಮಟ್ಟಿಗೆ ಕಡಿಮೆ ಆಯಿತು. ಹಿಂದಿನ ಗ್ರಾಮ ಪಂಚಾಯತಿಗಳಿಗಿಂತ ಹೊಸ ವ್ಯವಸ್ಥೆಯ ಮಂಡಳ ಪಂಚಾಯತಿಗಳು ಬಹು ಪ್ರಭಾವಶಾಲಿಗಳು ಆಗಿದ್ದವು. ಆಡಳಿತ ವಿಕೇಂದ್ರಿಕರಣ ಬಹು ಮಟ್ಟಿಗೆ ಸಾಧ್ಯವಾಗಿತ್ತು. 1983ರ ಕಾಯಿದೆ ಪ್ರಕಾರ, 1987ರಲ್ಲಿ ಪುನರ್ ರಚನೆಗೊಂಡ ಮಂಡಳ ಪಂಚಾಯತಿಗಳ ಸಂಖ್ಯೆ 166ಕ್ಕೆ ಇಳಿಯಿತು. 1992ರಲ್ಲಿ ಸದರಿ ಮಂಡಳಿಗಳ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ 4279 ಆಗಿತ್ತು. ಈ ವ್ಯವಸ್ಥೆ 1992ರವರೆಗೆ ಮುಂದುವರಿಯಿತು. 1993ರಲ್ಲಿ ಜಾರಿಗೆ ಬಂದ ಹೊಸ ಪಂಚಾಯತಿ ರಾಜ್ ಕಾನೂನಿನ ಅನ್ವಯ ಮಂಡಳ ಪಂಚಾಯತಿಗಳು ಪುನರ್ ರಚನೆಗೊಂಡು, ಗಾತ್ರದಲ್ಲಿ ಅವುಗಳನ್ನು ಕುಗ್ಗಿಸಿ, ಪುನಃ ಗ್ರಾಮಪಂಚಾಯತಿಗಳೆಂದು ನಾಮಕರಣ ಮಾಡಲಾಯಿತು. ಈ ರೀತಿ ಜಿಲ್ಲೆಯಲ್ಲಿ ಪುನರ್‌ರಚನೆಗೊಂಡ ಗ್ರಾಮ ಪಂಚಾಯತಿಗಳ ಸಂಖ್ಯೆ 439 ಆಗಿದ್ದರೆ ಚುನಾಯಿತ ಪ್ರತಿನಿಧಿಗಳ ಸಂಖ್ಯೆ 5,832 ಎಂದು ತಿಳಿದುಬರುವುದು. ಒಟ್ಟು ಸ್ಥಾನಗಳಲ್ಲಿ ಎಲ್ಲಾ ವರ್ಗದಲ್ಲಿ ಸೇರಿ ಮಹಿಳೆಯರಿಗೆ ಮೀಸಲಾದ ಸ್ಥಾನಗಳ ಸಂಖ್ಯೆ 2,562. ಚುನಾಯಿತ ಪ್ರತಿನಿಧಿಗಳಲ್ಲಿ ಪ.ಜಾ\ಪ.ವರ್ಗ, ಹಿಂದುಳಿದ ವರ್ಗಗಳಿಗೆ ನೀಡಿದ ಮೀಸಲಾತಿ ಸ್ಥಾನಗಳ ಸಂಖ್ಯೆ ಅನುಕ್ರಮವಾಗಿ 1,176, 492 ಮತ್ತು 1,947 ಎಂದು ತಿಳಿದು ಬರುವುದು.

ಪುನರ್ ರಚಿತ ಗ್ರಾಮ ಪಂಚಾಯತಿಗಳಿಗೆ ಪ್ರಥಮ ಚುನಾವಣೆಗಳು 1993 ಡಿಸೆಂಬರ್‌ನಲ್ಲಿ ನಡೆದವು ; ಈ ಚುನಾವಣೆಗಳು ಪಕ್ಷಾತೀತವಾಗಿದ್ದವು.

### ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

1947ರಲ್ಲಿ ಅಂದಿನ ರಾಜ್ಯ ಸರ್ಕಾರವು 200 ಜನಸಂಖ್ಯೆಗಿಂತ ಹೆಚ್ಚಿನ ಜನವಸತಿಯ ಗ್ರಾಮಗಳಿಗೆ ಹಾಗೂ ಹಿಂದುಳಿದ ಪ್ರದೇಶಗಳಲ್ಲಿನ 100ಜನಸಂಖ್ಯೆ ಇರುವ ಪ್ರತಿ ಒಂದು ಹಳ್ಳಿಗೂ ಕುಡಿಯುವ ನೀರನ್ನು ಪೂರೈಸುವ ಯೋಜನೆಯನ್ನು ಹಾಕಿಕೊಂಡಿತ್ತು. ಅದರ ಅನ್ವಯ ಜಿಲ್ಲೆಯಲ್ಲಿ 1,273 ಜನ ವಸತಿ ಗ್ರಾಮಗಳ ಪೈಕಿ 1,026 ಗ್ರಾಮಗಳ ಜನಸಂಖ್ಯೆ 200 ಕ್ಕಿಂತ ಹೆಚ್ಚಾಗಿತ್ತು. ಆ ಪೈಕಿ 482 ಹಳ್ಳಿಗಳು ತಕ್ಕಮಟ್ಟಿಗೆ ಕುಡಿಯುವ ನೀರಿನ ಸೌಲಭ್ಯ ಹೊಂದಿದ್ದರೆ 303 ನೀರಿನ ಕೊರತೆಯ ಹಳ್ಳಿಗಳಾಗಿದ್ದವು. 241

ಹಳ್ಳಿಗಳಿಗೆ ಯಾವುದೇ ಅನುಕೂಲ ಇರಲಿಲ್ಲ. 1947ರಿಂದ 1951ರ ಅವಧಿಯಲ್ಲಿ ಧಾರವಾಡ ಜಿಲ್ಲೆಯ 9 ತಾಲ್ಲೂಕುಗಳಲ್ಲಿನ 111 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಲಾಗಿತ್ತು.

ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಶುದ್ಧವಾದ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಮತ್ತು ಗ್ರಾಮ ನೈರ್ಮಲ್ಯ ಸುಧಾರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಯಲ್ಲಿ ತಂದಿವೆ. ನಗರಗಳಿಗೆ ಸುರಕ್ಷಿತ ಕುಡಿಯುವ ನೀರು ಮತ್ತು ಒಳಚರಂಡಿಯ ವ್ಯವಸ್ಥೆಯನ್ನು ನೋಡಿಕೊಳ್ಳಲು ಪ್ರತ್ಯೇಕವಾದ ರಾಜ್ಯಮಟ್ಟದ ಮಂಡಳಿ ರಚನೆಯಾದ ನಂತರ, ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ.) ವಿಭಾಗಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. (1965). ಈಗ ಈ ಕಾರ್ಯವನ್ನು ಜಿಲ್ಲಾ ಪಂಚಾಯತಿಗಳಿಗೆ ವಹಿಸಿಕೊಡಲಾಗಿದೆ.

ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯವಲಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರವಲಯ) ಎಂದು ಎರಡು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದ್ದು, 1975-77ರಿಂದ ಕೇಂದ್ರವಲಯದ ತ್ವರಿತ ನೀರು ಪೂರೈಕೆ ಯೋಜನೆಗಳ ಸಂಪೂರ್ಣವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು. ಈ ಪ್ರಮುಖ ಯೋಜನೆಗಳಲ್ಲದೇ ಜಿಲ್ಲಾ ಯೋಜನೆಯ ಅಂತರ್ಗತ ಕಿರು ನೀರು ಸರಬರಾಜು ಯೋಜನೆ, ತೆರೆದ ಬಾವಿಗಳ ಯೋಜನೆ, ಮುಂತಾದ ಹಲವಾರು ಯೋಜನೆಗಳನ್ನು ರಾಜ್ಯ ಮತ್ತು ಕೇಂದ್ರ ವಲಯದಲ್ಲಿ ಅಳವಡಿಸಲಾಗಿದೆ. ಪ.ಜಾ\ಪ.ವರ್ಗಗಳ ವಸತಿ ಪ್ರದೇಶಗಳಲ್ಲಿ ಪ್ರತ್ಯೇಕವಾದ ಕುಡಿಯುವ ನೀರಿನ ಯೋಜನೆಗಳನ್ನು ಕೇಂದ್ರ ವಲಯ ಮತ್ತು ರಾಜ್ಯ ವಲಯದ ಯೋಜನೆಗಳಲ್ಲಿ ವಿಶೇಷ ಘಟಕ ಯೋಜನೆಗಳನ್ನಾಗಿ ಅಳವಡಿಸಲಾಗಿದೆ.

ಜಿಲ್ಲೆಯಾದ್ಯಂತ ಮಾರ್ಚ್ 1993ರವರೆಗೆ ಪೂರ್ತಿಗೊಂಡ ಗ್ರಾಮೀಣ ಸುರಕ್ಷಿತ ನೀರು ಪೂರೈಕೆ ಯೋಜನೆಗಳ ಸಂಖ್ಯೆ 149, ಮತ್ತು ಇವುಗಳಿಗೆ ಮಾಡಲಾದ ವೆಚ್ಚ ರೂ. 555.892 ಲಕ್ಷ, ಸಂಪೂರ್ಣಗೊಂಡ ಕಿರು ನೀರಾವರಿ ಯೋಜನೆಗಳ ಸಂಖ್ಯೆ 145 ಆಗಿದ್ದರೆ ಅವುಗಳಿಗೆ ಮಾಡಲಾದ ವೆಚ್ಚ ರೂ. 110.78 ಲಕ್ಷ ಎಂದು ತಿಳಿದು ಬರುವುದು. ಜಿಲ್ಲೆಯಲ್ಲಿ ಮಾರ್ಚ್ 1993ರ ವರೆಗೆ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ 2347; ವೆಚ್ಚ ರೂ 90.967 ಲಕ್ಷ ಎಂದು ತಿಳಿದು ಬರುವುದು.

**ವಸತಿ ಯೋಜನೆ**

ಇಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇರುವ ಹತ್ತು ಹಲವಾರು ಸಮಸ್ಯೆಗಳಲ್ಲಿ ವಸತಿಯ ಸಮಸ್ಯೆಯು ಬಹು ಮುಖ್ಯವಾದುದು. ಬೆಳೆಯುತ್ತಿರುವ ನಗರೀಕರಣ, ಕೈಗಾರಿಕಾಕರಣ, ದೊಡ್ಡ ಪ್ರಮಾಣದಲ್ಲಿ ನಗರಕ್ಕೆ ವಲಸೆ, ಮುಂತಾದವುಗಳಿಂದ ನಗರ, ಅರೆ ನಗರಪ್ರದೇಶಗಳಲ್ಲಿ ಬೇಡಿಕೆಗೆ ಪೂರಕವಾಗಿ ಸೂಕ್ತ ವಸತಿಯ ವ್ಯವಸ್ಥೆ ಇಲ್ಲದೇ ಇರುವ ಕೊರತೆ ಈ ಜಿಲ್ಲೆಯ ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಕಂಡುಬರುವುದು.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ನಿರ್ಮಾಣದ ವೆಚ್ಚ, ಅಭಿವೃದ್ಧಿ ಹೊಂದಿದ ನಿವೇಶನಗಳ ಕೊರತೆ ಮತ್ತು ಭಾರೀ ಬೆಲೆ ಹಾಗೂ ನಗರಗಳಿಗೆ ಕಾರ್ಮಿಕರ ವಲಸೆ ವಸತಿಯ ಸಮಸ್ಯೆಯನ್ನು ಇನ್ನೂ ಹೆಚ್ಚು ತೀವ್ರಗೊಳಿಸಿವೆ. ಇತ್ತೀಚಿನ ದಶಕಗಳಲ್ಲಿ ಈ ಸಮಸ್ಯೆಯನ್ನು ನಿವಾರಿಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳಾದ ಗೃಹಮಂಡಳಿ, ನಗರಸಭೆಗಳು, ನಗರಾಭಿವೃದ್ಧಿ ಪ್ರಾಧಿಕಾರ, ಕೊಳಚೆ ನಿರ್ಮೂಲನಾ ಮಂಡಳಿ, ಸಹಕಾರಿ ಗೃಹ ನಿರ್ಮಾಣ ಸಂಘಗಳು, ಜೀವ ವಿಮಾ ಸಂಸ್ಥೆ, ಹುಡಕೋ ಮತ್ತು ಇತರೇ ಹಣಕಾಸು ಸಂಸ್ಥೆಗಳು ಆರ್ಥಿಕ ನೆರವನ್ನು ನೀಡುತ್ತಿರುವವು.

**ಕರ್ನಾಟಕ ಗೃಹ ಮಂಡಳಿ (1956) :** ರಾಜ್ಯ ವ್ಯಾಪ್ತಿಯ ಕರ್ನಾಟಕ ಗೃಹ ಮಂಡಳಿಯು ಧಾರವಾಡ ಜಿಲ್ಲೆಯನ್ನು ಒಳಗೊಂಡಂತೆ ಹುಬ್ಬಳ್ಳಿಯಲ್ಲಿ ತನ್ನ ವಲಯ ಕಛೇರಿಯನ್ನು ಹೊಂದಿರುವುದು. 1965-66ರಿಂದ 1989-90ರ ಸುಮಾರು 25 ವರ್ಷಗಳ ಅವಧಿಯಲ್ಲಿ ಗೃಹಮಂಡಳಿಯು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ರಾಜ್ಯ ಯೋಜನೆ ಮತ್ತು ಹುಡಕೊ ಯೋಜನೆಯ

ಅನ್ವಯ ಬೇರೆ ಬೇರೆ ಆರ್ಥಿಕ ವಲಯದವರಿಗೆ ನಗರ, ಅರೆನಗರ ಪ್ರದೇಶಗಳಲ್ಲಿ ಒಟ್ಟು 3,876 ಮನೆಗಳನ್ನು ನಿರ್ಮಾಣಮಾಡಿದೆ. ನಿರ್ಮಾಣ ಯೋಜನೆಯ ಒಟ್ಟು ವೆಚ್ಚ ರೂ. 785.50 ಲಕ್ಷ ಎಂದು ತಿಳಿದು ಬರುವುದು.

**ಜನತಾಮನೆಗಳ ಯೋಜನೆ :** ಇತ್ತೀಚಿನ ದಶಕಗಳಲ್ಲಿ ಸರ್ಕಾರವು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಮನೆ ಮತ್ತು ನಿವೇಶನ ರಹಿತ ಎಲ್ಲಾ ವರ್ಗದ ಜನರನ್ನು ಗುರುತಿಸಿ ಅವರಿಗೆ ಉಚಿತವಾಗಿ ಮನೆ ನಿವೇಶನ ಒದಗಿಸುವುದಲ್ಲದೇ ಕಡಿಮೆ ವೆಚ್ಚದಲ್ಲಿ ಮನೆಕಟ್ಟಲು ಸಾಲ ಸಹಾಯ ಧನ ಮತ್ತು ಇತರೇ ಹಣಕಾಸಿನ ನೆರವು ನೀಡುವುದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತ ಇರುವ ಜನತಾ ಮನೆ ಯೋಜನೆ ಮೊದಲಿಗೆ 1973-74ರಲ್ಲಿ ಪ್ರಾರಂಭವಾಯಿತು. ಕೇಂದ್ರ ಸರ್ಕಾರವು ಇತ್ತೀಚೆಗೆ 'ಇಂದಿರಾ ಆವಾಸ' ಎಂಬ ಯೋಜನೆಯನ್ನು ಪ್ರಾರಂಭಿಸಿದೆ. ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಯಾದ 'ಆಶ್ರಯ' ಯೋಜನೆಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಗೃಹ ನಿವೇಶನಗಳನ್ನು ಒದಗಿಸಲಾಗುವುದು. ಜಿಲ್ಲಾ ಪಂಚಾಯತ್ ರಚನೆಗೊಂಡ ನಂತರ (1987) ಗ್ರಾಮೀಣ ವಸತಿ ವ್ಯವಸ್ಥೆಯನ್ನು ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ವಹಿಸಲಾಗಿದೆ.

ನಗರ ಸಭೆ ಪ್ರದೇಶಗಳಲ್ಲಿ ಭಾಗ್ಯಮಂದಿರ ಯೋಜನೆಯ ಅಡಿಯಲ್ಲಿ ಕಡುಬಡವರಿಗೆ ಮನೆಗಳ ನಿರ್ಮಾಣಕ್ಕೆ ದುರಸ್ತಿಗೆ ಸರ್ಕಾರ ಸಹಾಯ ಮಾಡುತ್ತಿದೆ. ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನಗರಸಭೆಗಳು ಪೌರಕಾರ್ಮಿಕರಿಗೆ ಮತ್ತು ತಮ್ಮ ಸಿಬ್ಬಂದಿಗೆ ಮನೆಗಳನ್ನು ಒದಗಿಸಿವೆ. ಧಾರವಾಡ ಜಿಲ್ಲೆಯಲ್ಲಿರುವ 260 ನೋಂದಾಯಿತ ಗೃಹನಿರ್ಮಾಣ ಸಹಕಾರಿ ಸಂಘಗಳು ಸದಸ್ಯರ ಈ ಸಮಸ್ಯೆಯನ್ನು ತಕ್ಕಮಟ್ಟಿಗೆ ಪರಿಹರಿಸಿವೆ.